ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 8 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 261 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದಾಖಲೆ ಬೆನ್ನಲ್ಲೇ ಡೌಟು!

ಪೂರ್ಣಾವಧಿ ವಿಶ್ವಾಸದಲ್ಲಿರುವ ಸಿಎಂ ಸಿದ್ದರಾಮಯ್ಯರಿಗೆ ಅನುಮಾನ!!

ಹಾವೇರಿ, ಜ.7– ಸುದೀರ್ಘ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸು ಅವರ ದಾಖಲೆ ಮುರಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ತಾವು ಇನ್ನು ಅಧಿಕಾರದಲ್ಲಿ ಮುಂದುವರೆಯುವ ವಿಚಾರವಾಗಿ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಆದರೆ ಅವರ ಆಪ್ತರು ಮಾತ್ರ ಅವರೇ ಪೂರ್ಣಾವಧಿ ಅಧಿಕಾರದಲ್ಲಿರುತ್ತಾರೆ, ಬದಲಾವಣೆ ಛಾನ್ಸೇ ಇಲ್ಲ ಎಂದು ಕ್ಲಿಯರ್ ಆಗಿ ಹೇಳಿದ್ದಾರೆ.

ಇಂದು ಹಾವೇರಿಯಲ್ಲಿ ಲೋಕೋಪಯೋಗಿ ಇಲಾಖೆ ನಿರ್ಮಿಸಿರುವ ನೂತನ ವಿವಿಐಪಿ ಸರ್ಕೀಟ್ ಹೌಸ್ ಕಟ್ಟಡ, ನೆಲೋಗಲ್ಲ ಗ್ರಾಮದಲ್ಲಿ ನಿರ್ಮಿಸಲಾಗುವ ಸರ್ಕೀಟ್ ಹೌಸ್ ಕಟ್ಟಡದ ಶಿಲಾನ್ಯಾಸ ನೆರವೇರಿಸಿ, ಬಳಿಕ ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಉದ್ಘಾಟನೆ ಜೊತೆಗೆ ಜಿಲ್ಲೆಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ಜನರ ಆಶೀರ್ವಾದದಿಂದ ರಾಜಕೀಯದಲ್ಲಿ ಇಲ್ಲಿಯವರೆಗೆ ಬಂದಿದ್ದೇನೆ. ಇನ್ನು ಎಷ್ಟು ದಿನ ಸಕ್ರಿಯವಾಗಿರುತ್ತೇನೆಂದು ಗೊತ್ತಿಲ್ಲ. ಜನರ ಆಶೀರ್ವಾದ ಇರುವವರೆಗೂ ರಾಜಕೀಯದಲ್ಲಿ ಇರುತ್ತೇನೆ ಎಂದು ಹೇಳಿ, ತಮ್ಮ ಆಡಳಿತದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ರಾಜಕೀಯದಲ್ಲಿರಲು ಜನರ ಆಶೀರ್ವಾದಬೇಕು. ನಾನು ಜನರ ಆಶೀರ್ವಾದದಿಂದಲೇ ಇಲ್ಲಿಯವರೆಗೆ ಬಂದಿದ್ದೇನೆ. ಇನ್ನು ಎಷ್ಟು ದಿನ ರಾಜಕೀಯದಲ್ಲಿ ಇರುತ್ತೇನೆ ಎಂದು ಗೊತ್ತಿಲ್ಲ ಎಂದರು.

ಬಿಜೆಪಿಗೆ ತಿರುಗೇಟು: ಸಿದ್ದರಾಮಯ್ಯ ಅವರ ಸಾಧನೆ ಶೂನ್ಯ ಮತ್ತು ಅವರು ರಾಜ್ಯದ ಖಜಾನೆ ಖಾಲಿ ಮಾಡಿದ್ದಾರೆ ಎಂದು ಟೀಕಿಸಿದ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಸಿಎಂ, ವಿರೋಧ ಪಕ್ಷದ ನಾಯಕರು ಸುಳ್ಳು ಹೇಳುವುದರಲ್ಲಿ ಪರಿಣಿತರು ಮತ್ತು ಅವರು ಅದನ್ನು ಮಾಡುತ್ತಲೇ ಇದ್ದಾರೆ ಎಂದು ತಿರುಗೇಟು ನೀಡಿದರು.

SCP/TSP ಕಾಯ್ದೆಯನ್ನು ಯಾರು ಜಾರಿಗೆ ತಂದರು. ಅವರು(ಬಿಜೆಪಿ) ಅದನ್ನು ಮಾಡಿದ್ದಾರೆಯೇ. ಅವರು ಬಡ್ತಿಯಲ್ಲಿ ಮೀಸಲಾತಿ ನೀಡಿದ್ದಾರೆಯೇ, ಅನ್ನ ಭಾಗ್ಯ ಯೋಜನೆಯನ್ನು ಯಾರು ಜಾರಿ ತಂದರು. ನಾನು ಏನನ್ನೂ ಮಾಡಿಲ್ಲ ಎಂದು

■ 6ನೇ ಪುಟಕ್ಕೆ



ದೇವರಾಜ ಅರಸು ಸುದೀರ್ಘ ಅಧಿಕಾರಾವಧಿ ದಾಖಲೆ ಮುರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಾವೇರಿಯಲ್ಲಿ ನಡೆದ ವಿವಿಧ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿಹಿ ತಿನ್ನಿಸಿ, ಅಭಿನಂದಿಸಿದರು.


ವರ್ಲ್ಡ್ ಪವರ್‌ಗಿಂತ ವರ್ಡ್ ಪವರ್ ಹೆಚ್ಚು!

ಕೊಟ್ಟ ಮಾತು ಉಳಿಸಿಕೊಳ್ಳುವುದು ಮುಖ್ಯ; ಡಿಸಿಎಂ ಡಿಕೆಶಿ ಟಾಂಗ್!

ಹಾವೇರಿ, ಜ.7– ವರ್ಲ್ಡ್ ಪವರ್‌ಗಿಂತ ವರ್ಡ್ ಪವರ್ ಹೆಚ್ಚು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ. ಹಾವೇರಿಯಲ್ಲಿ ಮೆಡಿಕಲ್ ಕಾಲೇಜ್ ಉದ್ಘಾಟಿಸಿ ಮಾತನಾಡಿದ ಅವರು, ಕೊಟ್ಟ ಮಾತು ಉಳಿಸಿಕೊಳ್ಳುವುದು ಬಹಳ ಮುಖ್ಯ ಎನ್ನುವ ಮೂಲಕ ವೇದಿಕೆ ಮೇಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ, ಡಿ.ಕೆ. ಶಿವಕುಮಾರ್ ಪರೋಕ್ಷವಾಗಿ ಟಾಂಗ್ ಕೊಟ್ಟರು. ಹಾವೇರಿಗೆ ಬಹಳ ಪ್ರೀತಿಯಿಂದ ಬಂದಿದ್ದೇನೆ. ಇಲ್ಲಿಯ ಜಿಲ್ಲೆ ಆರು ಜನ ಕಾಂಗ್ರೆಸ್ ಶಾಸಕರನ್ನು ಕೊಟ್ಟು ಶಕ್ತಿ ತುಂಬಿದ್ದೀರಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಇದೇ ವೇಳೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಧಿಕಾರ ನಶ್ವರ, ಸಾಧನೆಗಳು ಅಜರಾಮರ. ಮತದಾರರೇ ಈಶ್ವರ. ಮತದಾರರ ಸೇವೆ ಮಾಡಬೇಕಾದ್ದು ನಮ್ಮ ಕರ್ತವ್ಯ ಇದು ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯನವರ ನೇತೃತ್ವದ

■ 6ನೇ ಪುಟಕ್ಕೆ

'ಮಿತ್ರ'ನ ಮಿಂಚು –ಸತೀಶ್ ಆಚಾರ್ಯ



ಪಾನಮತ್ತ ನಾಲ್ವರಿಂದ ಹಾಡಹಗಲೇ ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಹಲ್ಲೆ

ಮೈಸೂರು, ಜ.7(ಆರ್‌ಕೆ)– ಪಾನಮತ್ತ ನಾಲ್ವರು ಯುವಕರು ಹಾಡಹಗಲೇ ಕರ್ತವ್ಯದಲ್ಲಿದ್ದ ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ನಾರ್ತ್–ಈಸ್ಟ್ ಆಫ್ ಎನ್.ಆರ್.ಮೊಹಲ್ಲಾದಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಎಸ್‌ಬಿ ಕಾನ್‌ಸ್ಟೇಬಲ್, ಕೆಸರೆ ನಿವಾಸಿ ಸಿ.ಚಂದ್ರಶೇಖರ್(51) ಹಲ್ಲೆಗೊಳಗಾದವರಾಗಿದ್ದಾರೆ. ಇಂದು ಬೆಳಿಗ್ಗೆ 10 ಗಂಟೆಗೆ ಮನೆಯಿಂದ ಬೈಕ್‌ನಲ್ಲಿ ಠಾಣೆಗೆ ಹೊರಟಿದ್ದ ಚಂದ್ರಶೇಖರ್ ಅವರನ್ನು ನಾರ್ತ್–ಈಸ್ಟ್ ಆಫ್ ಎನ್.ಆರ್.ಮೊಹಲ್ಲಾದಲ್ಲಿ, ರಾಜೀವ್‌ನಗರಕ್ಕೆ ಹೋಗುವ ಮಾರ್ಗದಲ್ಲಿನ ಕ್ಯಾಂಡಿ ಕಾಟನ್ ಅಂಗಡಿ ಮುಂಭಾಗ ಬೆಳಿಗ್ಗೆ 10.20ರ ವೇಳೆಗೆ ಪಾನಮತ್ತರಾಗಿದ್ದ ನಾಲ್ವರು ಚಂದ್ರಶೇಖರ್ ಬೈಕ್ ಅಡ್ಡಗಟ್ಟಿ ಏಕಾಏಕಿ ಹಲ್ಲೆ ನಡೆಸಿದ್ದಾರೆ.

■ 6ನೇ ಪುಟಕ್ಕೆ



ಸಿ.ಚಂದ್ರಶೇಖರ್

ಬಾಬಾ ಸಾಹೇಬ್–ಸಮತೆಯೆಡೆಗೆ ನಡಿಗೆ ಆಶಯದೊಂದಿಗೆ } ಜ.11ರಿಂದ ಬಹುರೂಪಿ ರಾಷ್ಟ್ರೀಯ ರಂಗೋತ್ಸವ

- ರಂಗಾಯಣದಲ್ಲಿ ನಾಟಕೋತ್ಸವದ ಪೋಸ್ಟರ್ ಬಿಡುಗಡೆ
- ಪ್ರತಿದಿನ ಬಹುಭಾಷಾ ನಾಟಕೋತ್ಸವ, ವಿಚಾರ ಸಂಕಿರಣ, ಚಲನಚಿತ್ರೋತ್ಸವ, ಜನಪದ ಸಂಭ್ರಮ, ಪುಸ್ತಕ ಮೇಳ, ಕರಕುಶಲ ಮೇಳ, ಪ್ರಾತ್ಯಕ್ಷಿಕೆ

ಮೈಸೂರು, ಜ.7(ಜಿಎ)–ಮೈಸೂರಿನ ರಂಗಾಯಣದ ಆವರಣದಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ವೇದಿಕೆ ಸಿದ್ಧವಾಗುತ್ತಿದ್ದು, 'ಬಾಬಾ ಸಾಹೇಬ್–ಸಮತೆಯೆಡೆಗೆ ನಡಿಗೆ' ಆಶಯದಡಿ ಜ.11ರಿಂದ 18ರವರೆಗೆ ನಾಟಕೋತ್ಸವಕ್ಕೆ ಭಾರತೀಯ ರಂಗಭೂಮಿಯ ಹಿರಿಯ ಕಲಾವಿದೆ ಹೈಸ್ನಾಂ ಸಾವಿತ್ರಿ ದೇವಿ ಚಾಲನೆ ನೀಡಲಿದ್ದಾರೆ.

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಬುಧವಾರ ಬಹುರೂಪಿ ನಾಟಕೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಜ.11ರಿಂದ ಆರಂಭವಾಗುವ ಬಹುರೂಪಿ ನಾಟಕೋತ್ಸವ ಈ ಬಾರಿ 8 ದಿನಗಳ ಕಾಲ ರಂಗಾಸಕ್ತರನ್ನು ಮನರಂಜಿಸಲಿದೆ. ಬಹುಭಾಷಾ ನಾಟಕೋತ್ಸವ, ವಿಚಾರ ಸಂಕಿರಣ, ಚಲನಚಿತ್ರೋತ್ಸವ, ಜನಪದ ಸಂಭ್ರಮ, ಪುಸ್ತಕ ಮೇಳ, ಕರಕುಶಲ ಮೇಳ ಮತ್ತು ಪ್ರಾತ್ಯಕ್ಷಿಕೆ, ದೇಸಿ ಆಹಾರ ಮೇಳ, ಚಿತ್ರಕಲಾ ಪ್ರದರ್ಶನ ಹಾಗೂ ಮಕ್ಕಳ ನಾಟಕೋತ್ಸವ ರಂಗೋತ್ಸವದಲ್ಲಿ ಇರಲಿದೆ ಎಂದು ಮಾಹಿತಿ ನೀಡಿದರು.

ಬಹುರೂಪಿ ಬೆಳ್ಳಿ ಹಬ್ಬ ಆಚರಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಬಾರಿ ವಿಶೇಷವಾಗಿ ಆಯೋಜನೆ ಮಾಡಲಾಗಿದೆ. ಬಾಬಾ ಸಾಹೇಬ್–ಸಮತೆ ಯೆಡೆಗೆ ನಡಿಗೆ ಈ ಬಾರಿಯ ನಾಟಕೋತ್ಸವದ ಆಶಯವಾಗಿದ್ದು, ಮೈಸೂರು ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಅಂಬೇಡ್ಕರರ ಜೀವನ–ಯಶೋಗಾಥೆ ಕುರಿತು ಬೆಳಕು ಚೆಲ್ಲುವ ನಾಟಕಗಳ ಪ್ರದರ್ಶನ ಇರಲಿದೆ. ಈ ಬಾರಿಯೂ ಮಕ್ಕಳ ನಾಟಕೋತ್ಸವ ನಡೆಸಲಾಗುತ್ತಿದೆ. ನಾಟಕೋತ್ಸವಕ್ಕೆ ಸರ್ಕಾರದಿಂದ 1 ಕೋಟಿ ರೂ. ಅನುದಾನ ನೀಡಲಾಗಿದೆ. ಕಳೆದ ಬಾರಿ 25 ಲಕ್ಷ ಕಲ್ಪಿಸಲಾಗಿತ್ತು ಎಂದು ತಿಳಿಸಿದರು.

ಬಹುರೂಪಿ ಆರಂಭ: ಜ.11ರಂದು ಚಲನಚಿತ್ರೋತ್ಸವದ ಉದ್ಘಾಟನೆಯೊಂದಿಗೆ ಈ ಬಾರಿಯ ಬಹುರೂಪಿ ಚಾಲನೆ ಪಡೆದುಕೊಳ್ಳಲಿದೆ. ಅಂದು ಬೆಳಗ್ಗೆ 10.30ಕ್ಕೆ ಭೂಮಿಗೀತದಲ್ಲಿ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಚಲನಚಿತ್ರೋತ್ಸವ ಉದ್ಘಾಟಿಸುವರು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ.ನಾಗರಾಜಮೂರ್ತಿ ಸೇರಿದಂತೆ ಹಲವರು ಪಾಲ್ಗೊಳ್ಳುವರು. ಸಂಜೆ 6 ಗಂಟೆಗೆ ಕಿಂದರಿ ಜೋಗಿ ಆವರಣದಲ್ಲಿ

■ 6ನೇ ಪುಟಕ್ಕೆ





ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಬುಧವಾರ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಮತ್ತೊಂದು ಚಿತ್ರದಲ್ಲಿ ನಾಟಕೋತ್ಸವಕ್ಕೆ ರಂಗಾಯಣದ ಮುಖ್ಯದ್ವಾರ ಸಜ್ಜುಗೊಂಡಿರುವುದು

> ಬಹುರೂಪಿ ಬಳಿಕ ರಂಗಾಯಣ ನವೀಕರಣ ಕಾಮಗಾರಿ ಆರಂಭವಾಗಲಿದೆ. ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಂಪುಟ ಸಭೆಯಲ್ಲಿ ರಂಗಾಯಣ ನವೀಕರಣಕ್ಕೆ 14.5 ಕೋಟಿ ಅನುದಾನ ಮಂಜೂರಾಗಿದೆ.
>
> -ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಜಂಟಿ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮೈಸೂರು ಮಿತ್ರ

ಸಾಹಿತಿಗಳಾದ ಡಾ.ಕೆ.ಲೀಲಾ ಪ್ರಕಾಶ್, ಡಾ. ಜಯಪ್ಪ ಹೊನ್ನಾಳಿಗೆ 'ವಿಶ್ವ ಮಾನವ' ಪ್ರಶಸ್ತಿ

ಮೈಸೂರು, ಜ.7(ಜಿಎ)– ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನೋತ್ಸವದ ಅಂಗವಾಗಿ ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ಖ್ಯಾತ ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್ ಮತ್ತು ಕವಿ ಡಾ.ಜಯಪ್ಪ ಹೊನ್ನಾಳಿ ಅವರಿಗೆ 'ವಿಶ್ವ ಮಾನವ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಹೂಟಗಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡಾಂಬೆ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ. ರಾಜಶೇಖರ್ ಮತ್ತು ಶಾಲೆ ಮುಖ್ಯ ಶಿಕ್ಷಕರಾದ ಸಂಗೀತ ಹಾಗೂ ಇತರೆ ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ಕನ್ನಡಾಂಬೆ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್ ಮಾತನಾಡಿ, ರಾಷ್ಟ್ರ ಕಂಡ ಅಪ್ರತಿಮ ಕವಿಗಳಾದ ಕುವೆಂಪು ಅವರ ಜನ್ಮದಿನೋತ್ಸವದ ಅಂಗವಾಗಿ ನಮ್ಮ ವೇದಿಕೆಯಿಂದ ಈ ವರ್ಷ ವಿಶ್ವ ಮಾನವ ಪ್ರಶಸ್ತಿ ನೀಡುವ ಬಗ್ಗೆ ಚಿಂತನೆ ಮಾಡಿ, ಅದಕ್ಕಾಗಿ ಪ್ರಶಸ್ತಿಯ ಘನತೆಗೆ ತಕ್ಕ ಸಾಧಕರಾದ ಕವಿ, ಸಾಹಿತಿ, ವಾಗ್ಮಿ ಡಾ.ಜಯಪ್ಪ ಹೊನ್ನಾಳಿ ಮತ್ತು ಡಾ.ಲೀಲಾ ಪ್ರಕಾಶ್ ಅವರನ್ನು ಅಂತಿಮವಾಗಿ ಆಯ್ಕೆ ಮಾಡಿದ್ದೇವೆ ಎಂದರು.



ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನೋತ್ಸವದ ಅಂಗವಾಗಿ ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ಖ್ಯಾತ ಸಾಹಿತಿ ಡಾ.ಕೆ.ಲೀಲಾಪ್ರಕಾಶ್ ಮತ್ತು ನಾಡಿನ ಸುಪ್ರಸಿದ್ಧ ಕವಿ ಡಾ.ಜಯಪ್ಪ ಹೊನ್ನಾಳಿ ಅವರಿಗೆ 'ವಿಶ್ವ ಮಾನವ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಂತ್ರಮಾಂಗಲ್ಯದ ಮೂಲಕ ಆಡಂಬರದ ವಿವಾಹಗಳಿಗೆ ಕಡಿವಾಣ ಹಾಕಿದ ಕುವೆಂಪು ಅವರು ನಿಜವಾದ ಸಮಾಜ ಸುಧಾರಕರಾಗಿದ್ದಾರೆ. ಅವರ ಸಾಹಿತ್ಯ, ಲೇಖನ, ಕೃತಿಗಳು ವಿಶ್ವಮಾನವರಾಗಲು ಪ್ರೇರಣೆ ನೀಡುತ್ತವೆ. ಈ ನಿಟ್ಟಿನಲ್ಲಿ ಮಕ್ಕಳು ಈಗಿನಿಂದಲೇ ಕುವೆಂಪು ಅವರ ಸಾಹಿತ್ಯವನ್ನು ಓದುವ ಮೂಲಕ ವಿಶ್ವಮಾನವರಾಗಿ ಬೆಳೆಯಬೇಕು ಎಂದು ಹೇಳಿದರು.

ಪ್ರಶಸ್ತಿ ಪುರಸ್ಕೃತರಾದ ಡಾ.ಜಯಪ್ಪ ಹೊನ್ನಾಳಿ ಅವರು ಮಾತನಾಡಿ, ರಸಋಷಿ, ಮಹಾ ದಾರ್ಶನಿಕರು ಮತ್ತು ಸ್ವತಃ ವಿಶ್ವಮಾನವರಾಗಿ ಬದುಕಿದ ರಾಷ್ಟ್ರಕವಿ ಕುವೆಂಪು ಅವರ ಹೆಸರಿನಲ್ಲಿ ವಿಶ್ವ ಮಾನವ ಪ್ರಶಸ್ತಿ ನೀಡುವ ಮೂಲಕ ಕನ್ನಡಾಂಬೆ ರಕ್ಷಣಾ ವೇದಿಕೆ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ. ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ಭಾರತದ ಯಾವ ಭಾಷೆಗೂ ಸಿಗದ ಗೌರವವನ್ನು ಕನ್ನಡ

ಕುವೆಂಪು ಸಾಹಿತ್ಯ ಓದಿ ವಿಶ್ವ ಮಾನವರಾಗಲು ಕರೆ

ಭಾಷೆಗೆ ದೊರಕಿಸಿಕೊಟ್ಟಿದ್ದಾರೆ ಎಂದರು.

ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತದ ಯಾವುದೇ ಭಾಷೆಯ ಸಾಹಿತಿಗೆ ಸಲ್ಲಲಾರದಷ್ಟು ಪ್ರಶಸ್ತಿಗಳು ಲಭಿಸಿವೆ. ತಮ್ಮ ಸಾಹಿತ್ಯದ ಮೂಲಕ ಕುವೆಂಪು ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇಂತಹ ಮಹಾನ್ ಸಮಾಜ ಸುಧಾರಕರ ಹೆಸರಿನಲ್ಲಿ ನಮಗೆ ವಿಶ್ವ ಮಾನವ ಪ್ರಶಸ್ತಿ ನೀಡಲಾಗಿದ್ದು, ಸಮಾಜ ನಮ್ಮನ್ನು ನಿಜವಾಗಿ ಗುರುತಿಸಿದೆ. ಸಮಾಜ ನಮ್ಮ ಮೇಲಿಟ್ಟಿರುವ ನಿರೀಕ್ಷೆಯನ್ನು ನಾವು ಹುಸಿಗೊಳಿಸುವುದಿಲ್ಲ ಎಂಬ ವಾಗ್ದಾನವನ್ನು ಮಾಡಿ ಪ್ರಶಸ್ತಿ ಸ್ವೀಕರಿಸಿದ್ದೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆಯ ಪದಾಧಿಕಾರಿಗಳಾದ ಶಿವಕುಮಾರ್, ಹೂಟಗಳ್ಳಿ ಗ್ರಾಪಂ ಸದಸ್ಯ ನಾಗೇಶ್, ಲೂಯಿಸ್, ಹುಣಸೂರು ಪರಮೇಶ, ವತ್ಸಲ, ಲೋಕೇಶ, ವಿಷ್ಣು, ಮಂಜುಳ, ನೇಹ, ರಶ್ಮಿಸಿಂಗ್, ತಾರ, ಭಾಗ್ಯ, ಜಯಲಕ್ಷ್ಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದರೋಡೆಗೆ ಹೊಂಚು ಹಾಕುತ್ತಿದ್ದ ಐವರ ಬಂಧನ

ಮೈಸೂರಿನ ಜಯಲಕ್ಷ್ಮೀಪುರಂ ಪ್ರೀಮಿಯರ್ ಮೆಟ್ರೋಪಾಲಿಸ್ ಅಪಾರ್ಟ್‌ಮೆಂಟ್ ಬಳಿ ಜನವರಿ 4ರ ಮುಂಜಾನೆ ರಾತ್ರಿ ಗಸ್ತು ಪೊಲೀಸರಿಗೆ ಸಿಕ್ಕಿಬಿದ್ದ ಖದೀಮರು

ಮೈಸೂರು, ಜ.7(ಆರ್‌ಕೆ)– ಜ.4ರಂದು ಮುಂಜಾನೆ ಮೈಸೂರಿನ ಜಯಲಕ್ಷ್ಮೀಪುರಂ ಪ್ರೀಮಿಯರ್ ಮೆಟ್ರೋ ಪಾಲಿಸ್ ಅಪಾರ್ಟ್‌ಮೆಂಟ್ಸ್ (Premier Metropolis Apartments) ಬಳಿ ದರೋಡೆಗೆ ಹೊಂಚು ಹಾಕುತ್ತಿದ್ದ ಐವರನ್ನು ಎನ್.ಆರ್. ಉಪ ವಿಭಾಗದ ಎಸಿಪಿ ತಂಡ ಹಾಗೂ ಜಯಲಕ್ಷ್ಮೀಪುರಂ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ವಿನಾಯಕನಗರ ನಿವಾಸಿಗಳಾದ ಪಿ.ಎಸ್.ಕೃಷ್ಣ(29) ಅಲಿಯಾಸ್ ಅಂಡೆ, ಅಮರ್‌ನಾಥ್(31) ಅಲಿಯಾಸ್ ವಿನು, ಎಸ್.ಹರೀಶ್ (36), ಸಚಿನ್(25) ಹಾಗೂ ಮದನ್ (30) ಅಲಿಯಾಸ್ ಮೈಕಾ ಬಂಧಿತರಾಗಿದ್ದು, ಅವರನ್ನು ವಿಚಾರಣೆ ನಡೆಸಿದ ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಜನವರಿ 4 ರಂದು ಮುಂಜಾನೆ ಗಸ್ತಿನಲ್ಲಿದ್ದ ಎನ್ ಆರ್ ಉಪ ವಿಭಾಗದ ಎಸಿಪಿ ಕೆ.ಟಿ.ಮ್ಯಾಥ್ಯೂ ಥಾಮಸ್ ಅವರಿಗೆ ಬಂದ ಮಾಹಿತಿ ಆಧರಿಸಿ ಅವರ ತಂಡದ ಪೊಲೀಸರು ಜಯಲಕ್ಷ್ಮೀಪುರಂ ಪ್ರೀಮಿಯರ್ ಮೆಟ್ರೋಪಾಲಿಸ್ ಅಪಾರ್ಟ್‌ಮೆಂಟ್ಸ್ ಮುಂಭಾಗ ಖಾಲಿ ಜಾಗದ ಕಚ್ಚಾ ರಸ್ತೆಯಲ್ಲಿ ಐವರು ಲಾಂಗ್, ಮಚ್ಚು, ಹಗ್ಗ ಮತ್ತು ಖಾರದಪುಡಿಯೊಂದಿಗೆ ಸಾರ್ವಜನಿಕರನ್ನು ದೋಚಲು ಹೊಂಚು ಹಾಕುತ್ತಿದ್ದಾರೆಂಬ ಮಾಹಿತಿ ಲಭಿಸಿದೆ.

ತಕ್ಷಣ ಕಾರ್ಯಪ್ರವೃತ್ತರಾದ ಎಸಿಪಿ ರಾತ್ರಿ ಗಸ್ತು ತಂಡದ ಪೊಲೀಸರು, ಜಯಲಕ್ಷ್ಮೀಪುರಂ ಇನ್ಸ್‌ಪೆಕ್ಟರ್ ಕುಮಾರ್, ಸಿಬ್ಬಂದಿಗಳನ್ನು ಸ್ಥಳಕ್ಕೆ ಕರೆಸಿಕೊಂಡು ಐವರನ್ನು ಬಂಧಿಸಿದ್ದಾರೆ. ಠಾಣೆಯಲ್ಲಿ ವಿಚಾರಣೆಗೊಳಪಡಿಸಿದಾಗ ನಿರ್ಜನ ಪ್ರದೇಶದಲ್ಲಿ ಹೊಂಚು ಹಾಕಿ ಸಾರ್ವಜನಿಕರನ್ನು ದೋಚಲು ಉದ್ದೇಶಿಸಿದ ವಿಚಾರ ಬಯಲಾಗಿದೆ. ಪ್ರಕರಣ ದಾಖಲಿಸಿಕೊಂಡ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಆರೋಪಿಗಳಿಂದ ಕೃತ್ಯಕ್ಕೆ ಬಳಸಲು ತಂದಿದ್ದ ಆಯುಧಗಳನ್ನು ವಶಕ್ಕೆ ಪಡೆದರು.

ಎಸಿಪಿ ಮ್ಯಾಥ್ಯೂ ಥಾಮಸ್ ತಂಡದಲ್ಲಿ ಎಎಸ್‌ಐ ಲಿಂಗರಾಜಪ್ಪ, ಹೆಡ್ ಕಾನ್ಸ್‌ಟೇಬಲ್‌ಗಳಾದ ಸುರೇಶ್, ಜೀವನ್ ಕಾನ್ಸ್‌ಟೇಬಲ್‌ಗಳಾದ ಹನುಮಂತ ಕಲ್ಲೇದ, ನರಸಿಂಗರಾವ್, ವಾಹನ ಚಾಲಕರಾದ ಮಂಜುನಾಥ್, ಇನ್ಸ್‌ಪೆಕ್ಟರ್ ಕುಮಾರ್ ತಂಡದ ಸಿಬ್ಬಂದಿಗಳಾದ ಕುಂಬಾರ, ಸೋಮಣ್ಣ, ಸಚಿನ್, ಕುಮಾರ, ಅಭಿ, ರವಿ, ಶ್ರೀನಿವಾಸ್ ಹಾಗೂ ದೇವರಾಜ್ ಅವರುಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಜ. 11 ರಂದು ಸಂಕ್ರಾಂತಿ ಚುಟುಕು ಕವಿಗೋಷ್ಠಿ

ಮೈಸೂರು, ಜ. 7–ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಮತ್ತು ಬೆಂಗಳೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಸಂಯುಕ್ತ ಆಶ್ರಯದಲ್ಲಿ ಜ. 11 ರಂದು ಬೆಳಗ್ಗೆ 10 ಗಂಟೆಗೆ ಸಂಕ್ರಾಂತಿ ಚುಟುಕು ಕವಿಗೋಷ್ಠಿಯನ್ನು ವಿನಯ ಮಾರ್ಗದಲ್ಲಿರುವ ಹಳ್ಳೂರು ಹನುಮಂತಪ್ಪ ವರಮಹಾಲಕ್ಷಮ್ಮ ಸ್ಮಾರಕ ವೇದಿಕೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್ ಉದ್ಘಾಟಿಸುವರು. ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ರತ್ನ ಹಾಲಪ್ಪಗೌಡ ಅಧ್ಯಕ್ಷತೆ ವಹಿಸುವರು.

ಮೈಸೂರು ವಾಸವಿ ಮಹಿಳಾ ಮಂಡಳಿಯ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿ ದಿನೇಶ್, ಹಾಸನ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾನಂ ಲೋಕೇಶ್, ಬೆಂಗಳೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಆರ್. ವಿಜಯ ಸಮರ್ಥ ಮತ್ತು ಬಿಇಎಲ್‌ನ ವಿಶ್ರಾಂತ ಜನರಲ್ ಮ್ಯಾನೇಜರ್ ಮಲ್ಲರಾಜೇ ಅರಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸಮಾರಂಭದಲ್ಲಿ ಪಾಲ್ಗೊಳ್ಳುವ ಚುಟುಕು ಕವಿಗಳಿಗೆ ಪ್ರಮಾಣ ಪತ್ರ, ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಗುವುದು. ಇದೇ ವೇಳೆ ಹಿರಿಯ ಸಮಾಜ ಸೇವಕ ಡಾ. ಪಿ.ಹೆಚ್. ರಾಘವೇಂದ್ರ ಶೆಟ್ಟಿ ಅವರನ್ನು ಸನ್ಮಾನಿಸಲಾಗುವುದು. ವಿವರಗಳಿಗೆ ಮೊ. 98863 44524 ಸಂಪರ್ಕಿಸಬಹುದು.

ಪೀಠೋಪಕರಣ ಕೊಡುಗೆ



ಮೈಸೂರು ತಾಲೂಕು ದೊಡ್ಡಮಾರಗೌಡನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಉದ್ಯಮಿ ಹಾಗೂ ಹೆಚ್ ಎಂ ಐ ಫ್ರೂಟ್ಸ್ ಮಾಲೀಕರಾದ ಮೋಹಿಯುದ್ದಿನ್‌ರವರು ಇತ್ತೀಚೆಗೆ ಲಕ್ಷ ರೂ. ಮೌಲ್ಯದ ಪೀಠೋಪಕರಣಗಳನ್ನು ಕೊಡುಗೆಯಾಗಿ ನೀಡಿದ್ದರು. ಶಾಲೆ ವತಿಯಿಂದ ಉದ್ಯಮಿ ಮೋಹಿಯುದ್ದಿನ್‌ರವರನ್ನು ಮಂಗಳವಾರ ಶಾಲು ಹೊದಿಸಿ, ಫಲಪುಷ್ಪ ನೀಡುವ ಮೂಲಕ ಸನ್ಮಾನಿಸಲಾಯಿತು. ಡಿಎಂಜಿ ಹಳ್ಳಿ ಗ್ರಾಮ ಪಂಚಾಯಿತಿ ಪಿಡಿಓ ರುಕ್ಮಾಂಗದ, ಗ್ರಾಮ ಪಂಚಾಯಿತಿ ಸದಸ್ಯರಾದ ಡಿ.ಬಿ.ಶಂಕರ್, ಪುಟ್ಟಸ್ವಾಮಿ, ಮುಖಂಡರಾದ ಬಿ.ನಾಗರಾಜು, ಬಿ.ಸಿ.ಕುಮಾರ್, ಬಸಪ್ಪ, ಮರಂಕಯ್ಯ, ಚಿಕ್ಕಸ್ವಾಮಿ ಗೌಡ, ಚಾಮಯ್ಯ, ಡಿ.ರವಿ, ನಾಗಣ್ಣ, ಬಸವರಾಜು, ಸಿದ್ದಯ್ಯ, ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಸೀತಾ, ಪ್ರೌಢಶಾಲೆ ಮುಖ್ಯ ಶಿಕ್ಷಕಿ ಉಮಾ, ಸಹಶಿಕ್ಷಕ ಕುಮಾರ್ ಉಪಸ್ಥಿತರಿದ್ದರು.

ಮೈಸೂರಿಗೆ ದೈವಜ್ಞ ಸ್ವಾಮೀಜಿಗಳ ಆಗಮನ

ಮೈಸೂರು, ಜ. 7– ಸರ್ವಾಂಗೀಣ ವಿಕಾಸ, ಸಮಾಜ ಸಂಘಟನೆ ಹಾಗೂ ಧಾರ್ಮಿಕ ಭಾವನೆಗಳ ಸಂವರ್ಧನೆಗಾಗಿ ನಾಲ್ಕು ದಶಕಗಳ ಹಿಂದೆ ಸ್ಥಾಪಿಸಲಾದ ದೈವಜ್ಞ ಶ್ರೀ ಮಠದ ಮಠಾಧೀಶರಾದ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಮಹಾಸ್ವಾಮೀಜಿ ಹಾಗೂ ಶ್ರೀ ಸುಜ್ಞಾನೇಶ್ವರ ಭಾರತೀ ಸ್ವಾಮೀಜಿ ಮೈಸೂರಿನ ದೈವಜ್ಞ ಭವನಕ್ಕೆ ಜ. 9 ರಂದು ಶುಕ್ರವಾರ ಸಂಜೆ 4ಕ್ಕೆ ಆಗಮಿಸಲಿದ್ದಾರೆ ಎಂದು ಸಮಾಜದ ಪ್ರಕಟಣೆ ತಿಳಿಸಿದೆ.

ಸನ್ಮಾನ

ರಾಷ್ಟ್ರಕವಿ ಕುವೆಂಪು ಜಯಂತಿ ಅಂಗವಾಗಿ ಮೈಸೂರಿನ ಜೆ.ಕೆ. ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಮತ್ತು ಕಾಂಗ್ರೆಸ್ ಮುಖಂಡ ಚೇತನ್ ವಿಷಕಂಠೇಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರು ಜೈಲು ಬಳಿ ಬೀದಿ ನಾಯಿಗಳ ಹಾವಳಿ

ಮೈಸೂರು, ಜ.7(ಬಿಎಲ್‌ಯು)– ಮೈಸೂರು ಜೈಲು ಬಳಿ ಬೀದಿ ನಾಯಿಗಳ ಹಾವಳಿ ಅಲ್ಲಿನ ಸಿಬ್ಬಂದಿಗಳನ್ನು ಭಯಭೀತಗೊಳಿಸಿದೆ.

ಮೈಸೂರು ಜೈಲಿನ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಪುಲಕೇಶಿ ರಸ್ತೆಯಲ್ಲಿ ಫಿಶ್ ಹಾಗೂ ಚಿಕನ್ ಅಂಗಡಿಗಳಿವೆ. ಅಲ್ಲಿ ಬಿಸಾಡುವ ಮಾಂಸ ಸೇವಿಸುವ ಈ ಬೀದಿ ನಾಯಿಗಳು, ಜೈಲಿನ ಹೊರ ಆವರಣದಲ್ಲಿ ಬೀಡು ಬಿಡುತ್ತವೆ.

ಸುಮಾರು 60ಕ್ಕೂ ಹೆಚ್ಚು ಬೀದಿ ನಾಯಿಗಳ ದಂಡೇ ಇಲ್ಲಿದ್ದು, ಜೈಲು ಸಿಬ್ಬಂದಿಗಳ ಮೇಲೆ ಆಗಾಗ್ಗೆ ದಾಳಿ ಮಾಡುತ್ತವೆ. ಜೈಲು ಸಿಬ್ಬಂದಿ ಕ್ವಾರ್ಟರ್ಸ್ ಕೂಡ ಅಲ್ಲೇ ಇದ್ದು, ಅವರ ಮಕ್ಕಳ ಮೇಲೂ ದಾಳಿ ಮಾಡಿ ಗಾಯಗೊಳಿಸಿವೆ. ಕಳೆದ ಎರಡು ದಿನಗಳ ಹಿಂದೆ 5 ವರ್ಷದ ಮಗು ಮೇಲೆ ದಾಳಿ ಮಾಡಿ ಗಾಯಗೊಳಿಸಿದೆ.

ಜೈಲಿನಲ್ಲಿ ಖೈದಿಗಳನ್ನು ಭೇಟಿ ಮಾಡಲು ಬರುವ ಕುಟುಂಬ ಸದಸ್ಯರು, ಸಂಬಂಧಿಗಳು, ತಾವು ತಂದಂತಹ ತಿಂಡಿ ಪದಾರ್ಥಗಳ ಮೇಲೂ ಈ ಬೀದಿ ನಾಯಿಗಳು ದಾಳಿ ಮಾಡುತ್ತಿವೆ. ಈ ಸಂಬಂಧ ನಗರ ಪಾಲಿಕೆಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಜೈಲು ಸಿಬ್ಬಂದಿ ಸಮಸ್ಯೆ ತೋಡಿಕೊಂಡಿದ್ದಾರೆ.

ಕುವೆಂಪುನಗರದ ಬಸ್ ಪ್ರಯಾಣಿಕರ ತಂಗುದಾಣದಲ್ಲಿ 'ಆಕಾಶವಾಣಿ'!



ಬಸ್ ಪ್ರಯಾಣಿಕರ ತಂಗುದಾಣದಲ್ಲಿ 'ಆಕಾಶವಾಣಿ' ಪ್ರಸಾರ ಸೌಕರ್ಯಕ್ಕೆ ಶಾಸಕ ಶ್ರೀವತ್ಸ ಇತ್ತೀಚೆಗೆ ಚಾಲನೆ ನೀಡಿದರು.

ಮೈಸೂರು, ಜ.7–ಮೈಸೂರಿನ ಕುವೆಂಪುನಗರದ ಎನ್–ಬ್ಲಾಕ್ ಮುಖ್ಯ ರಸ್ತೆಯಲ್ಲಿ ನಿವೃತ್ತ ಎಲ್‌ಐಸಿ ಅಧಿಕಾರಿ ವಿಜಯೇಂದ್ರ ಬೂಕನಕೆರೆ ಅವರು ತಮ್ಮ ತಂದೆ ಸ್ಮರಣಾರ್ಥ ನಿರ್ಮಿಸಿರುವ ಹೋರಿ ಸುಬ್ಬೇಗೌಡ ಬೂಕನಕೆರೆ ಸ್ಮಾರಕ ಬಸ್ ಪ್ರಯಾಣಿಕರ ತಂಗುದಾಣದಲ್ಲಿ 'ಆಕಾಶ ವಾಣಿ' ಪ್ರಸಾರ ಸೌಲಭ್ಯ ಕಲ್ಪಿಸಿದ್ದು, ಅದಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ ಚಾಲನೆ ನೀಡಿದರು.

ಆಕಾಶವಾಣಿ ಮೈಸೂರು ಕೇಂದ್ರದ 91ನೇ ವರ್ಷಾಚರಣೆ ಪ್ರಯುಕ್ತ ಕೇಳುಗ ಅಭಿಮಾನಿಯೂ ಆದ ಬೂಕನಕೆರೆ ವಿಜೇಂದ್ರ ಕಲ್ಪಿಸಿರುವ ರೇಡಿಯೊ ವ್ಯವಸ್ಥೆ ಇದು. ಸ್ಥಳೀಯರು ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಮುಂದಿನ ದಿನಗಳಲ್ಲಿ ಎಲ್ಲಾ ಬಸ್ ತಂಗುದಾಣಗಳಲ್ಲಿ ಇದೇ ಮಾದರಿಯ ಸೌಲಭ್ಯ ಒದಗಿಸಲಾಗುವುದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಭರವಸೆ ನೀಡಿದರು.

'ಸಮುದ್ಯತಾ'– ಮೈಸೂರು ಆಕಾಶವಾಣಿಯ ಕೇಳುಗರ ಬಳಗದ ಸಕ್ರಿಯ ಸದಸ್ಯರಾಗಿರುವ ವಿಜಯೇಂದ್ರರು ಮಾತನಾಡಿ, ಚೆಲುವಾಂಬ ಉದ್ಯಾನ ಹಾಗೂ ಪುರಭವನದಲ್ಲಿ ರೇಡಿಯೊ ವ್ಯವಸ್ಥೆ ಇದ್ದದ್ದನ್ನು ನೋಡಿದ್ದೆ. ಅದೇ ರೀತಿ ಬಸ್ ಪ್ರಯಾಣಿಕರ ತಂಗುದಾಣದಲ್ಲಿಯೂ ಕಲ್ಪಿಸುವ ಕನಸು ನನಸಾಗಿದೆ. ಸಮಾಜಕ್ಕಾಗಿ ಅಳಿಲು ಸೇವೆ ಸಲ್ಲಿಸಬೇಕೆಂಬುದು ಮೊದಲಿಂದಲೂ ನನ್ನ ಬಯಕೆಯಾಗಿದೆ ಎಂದರು.

ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ತಾಂತ್ರಿಕ ವಿಭಾಗದ ಸಿ.ರಂಜಿತ್, ಕೆಎಸ್‌ಆರ್‌ಟಿಸಿ ಡಿಪೊ ವ್ಯವಸ್ಥಾಪಕ ಚೇತನ್, ಲೇಖಕ ಕಾಳಿಹುಂಡಿ ಶಿವಕುಮಾರ್, ಬಳಗದ ಗೋವಿಂದಾಚಾರ್, ಕಾಂಗ್ರೆಸ್ ಮುಖಂಡ ವಿಕ್ರಾಂತ್ ಪಿ.ದೇವೇಗೌಡ ಭಾಗವಹಿಸಿದ್ದರು.

ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ



ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಗಣ್ಯರಿಂದ ಚಾಲನೆ

ಮೈಸೂರು, ಜ.7– ಬೋಧನೆ ಮತ್ತು ಮಾರ್ಗದರ್ಶನಕ್ಕಾಗಿ ತರಗತಿ ಸಂವಹನ ವಿಷಯ ಕುರಿತು ಮೂರು ದಿನಗಳ ಅಧ್ಯಾಪಕರ ಅಭಿವೃದ್ಧಿ (FDP) ಕಾರ್ಯಕ್ರಮವನ್ನು ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವು ಅಧ್ಯಾಪಕರ ಕೌಶಲ್ಯಗಳನ್ನು ಹೆಚ್ಚಿಸುವುದು ಹಾಗೂ ಬೋಧನಾ ಮಾರ್ಗದರ್ಶನ ಕ್ರಮಗಳನ್ನು ಬಲಪಡಿಸಲು ಸಹಕಾರಿಯಾಗಿದೆ.

ಡಾ. ಕೆ. ಮಂಟೇಲಿಂಗು, ನಿರ್ದೇಶಕರು, ಸಿಡಿಸಿ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಗೌರವ ಕಾರ್ಯದರ್ಶಿಗಳು ಮಹಾಜನ ವಿದ್ಯಾಸಂಸ್ಥೆ ಕಾರ್ಯಕ್ರಮ ಉದ್ಘಾಟಿಸಿದರು.

ಡಾ. ಕೆ. ಮಂಟೇಲಿಂಗು ಮಾತನಾಡಿ, ಸಾಮಾಜಿಕ ಮಾಧ್ಯಮಗಳು ವಿದ್ಯಾರ್ಥಿಗಳ ಮೇಲೆ ಒಳ್ಳೆಯ ಹಾಗೂ ಕೆಟ್ಟ ಪ್ರಭಾವಗಳು ಬೀರುತ್ತಿವೆ ಪ್ರತಿಯೊಬ್ಬರು ಅವರವರ ಇಚ್ಛೆಯಂತೆ ಬಳಸಿಕೊಳ್ಳುತ್ತಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಒಳ್ಳೆಯ ವಿಷಯಗಳನ್ನು ಹೆಚ್ಚಾಗಿ ಬಳಸಿಕೊಳ್ಳದೇ ಅಡ್ಡ ಪರಿಣಾಮದ ವಿಷಯಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಅಧ್ಯಾಪಕರು ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಧನಾತ್ಮಕವಾಗಿ ಮಾರ್ಗದರ್ಶನ ಮಾಡಬೇಕು. ಈ ಮೂಲಕ ಉತ್ತಮ ಸಮಾಜವನ್ನು ಕಟ್ಟಬಹುದಾಗಿದೆ ಎಂದರು.

ಡಿ. ವಿಷ್ಣುಪ್ರಸಾದ್, ಡೆಪ್ಯುಟಿ ಜನರಲ್ ಮ್ಯಾನೇಜರ್, ಐಸಿಟಿ ಅಕಾಡೆಮಿ ಮಾತನಾಡಿ, ಈ ಮೂರು ದಿನದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ವಿವರಿಸಿದರು.

ಕೈಗಾರಿಕಾ ಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರದ ಮಧ್ಯ ಇರುವ ಅಂತರವನ್ನು ತುಂಬುವಲ್ಲಿ ಐಸಿಟಿ ಅಕಾಡೆಮಿಯ ಪಾತ್ರವನ್ನು ಕೂಲಂಕುಷವಾಗಿ ತಿಳಿಸಿಕೊಟ್ಟರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಗುರು ಮತ್ತು ಗೋವಿಂದನ ಬಗ್ಗೆ ವಿವರಿಸುತ್ತಾ, ಮೊದಲು ಗುರುವಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ. ನಂತರ ಗೋವಿಂದನ ಸ್ಮರಣೆಯನ್ನು ಮಾಡುತ್ತೇವೆ ಎಂದು ತಿಳಿಸಿದರು.

ಅಧ್ಯಾಪಕರು ಕಾಲಕ್ಕೆ ತಕ್ಕಂತೆ ತಮ್ಮ ಕೌಶಲ್ಯವನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕು ಆ ಮೂಲಕ ಅದರ ಪ್ರಯೋಜನವು ವಿದ್ಯಾರ್ಥಿಗಳಿಗೆ ತಲುಪುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಅರ್ಜುನ್‌ವಿಜಯನ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ರಾಧೇಶ್ ಎ ಉಪಸ್ಥಿತರಿದ್ದರು.

ವಿರೂಪಾಕ್ಷ ಶೆಟ್ಟಿ ನಿಧನ



ಮೈಸೂರು, ಜ.7– ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಪಟೇಲ್ ದೊಡ್ಡಣ್ಣ ಶೆಟ್ಟಿ ಅವರ ಪುತ್ರ ವಿರೂಪಾಕ್ಷ ಶೆಟ್ಟಿ ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಟ್ಟದಪುರದಲ್ಲಿ ನಾಳೆ (ಜ.8) ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.1.2026 ಗುರುವಾರ, ಮಳೆ ನಕ್ಷತ್ರ: ಮೂಲ, 29.12.2025ರಿಂದ 10.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** ಸಿಲ್ಕ್ ಫ್ಯಾಬ್, ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ರಿಂಗ್ ರಸ್ತೆ, ಬೆಳಗ್ಗೆ 11 ರಿಂದ.
- **ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ :** ಪ್ರೊ. ಬಿ.ಕೆ. ಶಿವಣ್ಣ ದತ್ತಿ ಉಪನ್ಯಾಸ ಹಾಗೂ ರಾಜ್ಯ ಮಟ್ಟದ ರಾಸೇಯೋ ಕಾರ್ಯಕ್ರಮಾಧಿಕಾರಿಗಳಿಗೆ ಪುನಶ್ಚೇತನ ಕಾರ್ಯಾಗಾರ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಪ್ರಾಸ್ತಾವಿಕ ನುಡಿ : ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಪ್ರೊ. ಬಿ.ಎಸ್. ಜಯದೇವ ಅವರಿಂದ ದತ್ತಿ ಉಪನ್ಯಾಸ, ಉಪಸ್ಥಿತರು : ವಿಶ್ರಾಂತ ರಾಸೇಯೋ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ಬಿ.ಕೆ. ಶಿವಣ್ಣ, ಸ್ಥಳ: ಎನ್‌ಎಸ್‌ಎಸ್ ಭವನ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ :** ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ, ಉದ್ಘಾಟನೆ : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಮನೆಗೊಂದು ಗ್ರಂಥಾಲಯ, ಜಿಲ್ಲಾ ಸಮಿತಿ ಸಂಚಾಲಕ ಎಂ. ಚಂದ್ರಶೇಖರ್, ಉಪಸ್ಥಿತರು : ಡಾ. ಎಂ.ಜಿ.ಆರ್. ಅರಸ್, ಚುಟುಕು ಸಿರಿ ಡಾ. ರತ್ನಹಾಲಪ್ಪಗೌಡ, ವಿಶ್ರಾಂತ ಹಿರಿಯ ಅಂಚೆ ಅಧೀಕ್ಷಕ ಡಿ. ಶಿವಯ್ಯ, ಡಾ. ರಾಕೇಶ್ ರಾಜೇ ಅರಸ್, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಸ್ಥಳ: ಶಾಂತಿನಿವಾಸ, ರಾಜೀವ್‌ನಗರ 3ನೇ ಹಂತ, ಬೆಳಗ್ಗೆ 11ಕ್ಕೆ.
- **ಜ್ಞಾನ ವಿಜ್ಞಾನ ಸಾಮ್ರಾಟ್ ಪ್ರೊ. ಕೆ.ಎಸ್. ರಂಗಪ್ಪ ಅಭಿಮಾನಿ ಬಳಗ :** ಸನ್ಮಾನ ಮತ್ತು 10ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಶರಣಪ್ಪ ವಿ. ಹಲಸೆ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಹೇಮಂತಕುಮಾರ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ನಿವೃತ್ತ ಎಂಡಿ ಡಾ. ರಾಜು, ಕರಾಮುವಿವಿ ಪರೀಕ್ಷಾಂಗ ಕುಲಸಚಿವ ಡಾ.ಸಿ.ಎನ್. ಆನಂದಕುಮಾರ್, ನಿವೃತ್ತ ಪ್ರಾಧ್ಯಾಪಕ ಪ್ರೊ. ಶ್ರೀಕಂಠಸ್ವಾಮಿ, ಪ್ರಾಧ್ಯಾಪಕರಾದ ಪ್ರೊ. ಎಂ.ಎಸ್. ಚಂದ್ರಶೇಖರ್, ಪ್ರೊ. ಚಂದ್ರನಾಯಕ್, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 12ಕ್ಕೆ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ವ್ಯವಸ್ಥಾಪಕರು :** ಶ್ರೀಚಾಮುಂಡೇಶ್ವರಿ ಅಮ್ಮನವರ ಕೊಠಾರೋತ್ಸವ ವೈಭವ, ಹೆಸರಾಂತ ಕಲಾವಿದರ ಸಂಗೀತೋತ್ಸವ, ಕನ್ನಡ ಚಿತ್ರರಂಗದ ಖ್ಯಾತ ಹಿನ್ನೆಲೆ ಗಾಯಕಿ ಡಾ. ಶಮಿತಾ ಮಲ್ನಾಡ್ ಅವರಿಂದ ಭಕ್ತಿ ಸಂಗೀತ ಗಾಯನ, ಸ್ಥಳ: ಚಾಮುಂಡಿಬೆಟ್ಟದ ದೇವಸ್ಥಾನದ ಒಳಗೆ, ಸಂಜೆ 6 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಎ.ಎನ್. ಶೀಲಾ ಹಾಗೂ ಎ.ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಲಾಜಿ ಶಂಕರ್–ಹಾಡುಗಾರಿಕೆ – ಮುತ್ತುಸ್ವಾಮಿ ದೀಕ್ಷಿತರ ರಚನೆಗಳು, 11.00 ಸುತ್ತ ಮುತ್ತ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 6.50 ಕೃಷಿರಂಗ–ತೋಟಗಾರಿಕಾ ಶಿಕ್ಷಣದ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಕೆ. ರಾಮೇಗೌಡ ಮತ್ತು ಪ್ರಥಮ ಬಿ.ಎಸ್.ಸಿ. ತೋಟಗಾರಿಕಾ ವಿದ್ಯಾರ್ಥಿ ಬಿ.ಎಸ್. ಗೌರಿಶಂಕರ್. ಪ್ರಸ್ತುತಿ– ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ– ಹಲೋ ಯುವವಾಣಿ ನೇರ ಫೋನ್ ಇನ್ ಕಾರ್ಯಕ್ರಮ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತು ಸಾಮಾನ್ಯ ಜ್ಞಾನ ರಸಪ್ರಶ್ನೆ, ಕಾರ್ಯಕ್ರಮ, ನಡೆಸಿಕೊಡುತ್ತಾರೆ–ನಿವೇದಿತಾ . ಹೆಚ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಂಬೆ ಸಿಸ್ಟರ್ಸ್– ಯುಗಳ ಗಾಯನ–ತ್ಯಾಗರಾಜರ ರಚನೆಗಳು, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್– 2025, ಪಂಡಿತ್ ಸಂತೋಷ್ ನಹರ್–ವೈಯೋಲಿನ್ ವಾದನ

ಮೈಸೂರು ಮಹಾನಗರ ಪಾಲಿಕೆ ಬಜೆಟ್ ತಯಾರಿ; ನಿತೇಶ್ ಪಾಟೀಲರಿಂದ ಪೂರ್ವಭಾವಿ ಸಭೆ

ಮಾಜಿ ಮೇಯರ್, ಮಾಜಿ ಕಾರ್ಪೋರೇಟರ್‌ಗಳಿಂದ ಸಲಹೆ, ಅಭಿಪ್ರಾಯ ಸಂಗ್ರಹ

- ಇ– ಖಾತಾಗಾಗಿ ಜನರ ಅಲೆದಾಟ
- ಹೊಸ ಬಾಟಲ್‌ಗೆ ಹಳೇ ವೈನ್ ಹಾಕಬೇಡಿ
- ಅರ್ಧದಷ್ಟು ವ್ಯಾಪಾರಸ್ಥರು ಉದ್ದಿಮೆ ರಹದಾರಿ ಪಡೆದಿಲ್ಲ
- ದಂಡ ಪಾವತಿಯೊಂದಿಗೆ ಸಿಆರ್ ಪಡೆಯಲು ಅಧಿಕಾರಿಗಳ ಸಮ್ಮತಿ ಇಲ್ಲ

ಮೈಸೂರು, ಜ.7(ಬಿಎಲ್‌ಯು)– ಮೈಸೂರು ಮಹಾನಗರ ಪಾಲಿಕೆ ಬಜೆಟ್ ತಯಾರಿ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಮಾಜಿ ಕಾರ್ಪೋರೇಟರ್‌ಗಳು ಹಾಗೂ ಮಾಜಿ ಮೇಯರ್‌ಗಳ ಮಹತ್ವದ ಸಭೆಯನ್ನು ಇಂದು ಏರ್ಪಡಿಸಲಾಗಿತ್ತು. ಮೈಸೂರಿನ ಪ್ರಾದೇಶಿಕ ಆಯುಕ್ತರೂ ಆದ ಮೈಸೂರು ನಗರ ಪಾಲಿಕೆಯ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರು ಬಜೆಟ್ ಸಂಬಂಧ ಅಭಿಪ್ರಾಯ ಸಂಗ್ರಹಿಸಿದರು.

ಮೈಸೂರು ನಗರ ಪಾಲಿಕೆ ಸಭಾಂಗಣದಲ್ಲಿ ಇಂದಿನ ಬಜೆಟ್ ಪೂರ್ವ ಸಭೆಯಲ್ಲಿ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಕೂಡ ಹಾಜರಿದ್ದರು.

ಜನರ ಅಲೆಸುವುದು ತಪ್ಪಿಲ್ಲ: ಈ ವೇಳೆ ಮಾತನಾಡಿದ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಇ–ಖಾತಾ ಮಾಡಿ ಕೊಡಲು ಸರ್ವರ್ ಸಮಸ್ಯೆ ಇದೆ ಎಂದು ಜನರನ್ನು ಅಲೆಸುತ್ತಿದ್ದಾರೆ. ಮನೆ ಮಾರಾಟ, ಹೊಸ ಮನೆ ನಿರ್ಮಾಣ ನಕ್ಷೆ ಸೇರಿದಂತೆ ಇತರೆ ಕೆಲಸ–ಕಾರ್ಯಗಳಿಗೆ ಇ–ಖಾತಾ ಅತ್ಯವಶ್ಯ. ಅತ್ತ ಅಧಿಕಾರಿಗಳು, ಜನರನ್ನು ಅಲೆಸುತ್ತಿದ್ದಾರೆ ಎಂದು ದೂರಿದರು.

ಹಳೆ ಬಾಟಲ್‌ಗೆ ಹೊಸ ವೈನ್ ಹಾಕಿದಂತೆ ಇಷ್ಟು ವರ್ಷ ಮಂಡನೆಯಾದಂತೆ ಈ ಬಾರಿಯ ಬಜೆಟ್ ಆಗಬಾರದು. ಹೊಸ ಬಾಟಲ್‌ಗೆ ಹೊಸ ವೈನ್ ಹಾಕಬೇಕು ಎಂದು ಸಲಹೆ ನೀಡಿದ ಅವರು, ಅಭಿವೃದ್ಧಿ ಬಳಿಕ ಮುಡಾ ಹಾಗೂ ಖಾಸಗಿ ಬಡಾವಣೆಗಳನ್ನು ನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಬೇಕು. ಅಲ್ಲಿ ಮೂಲಭೂತ ಸೌಕರ್ಯ ಕಲ್ಪಿಸದೆ ಇದ್ದರೆ ಅವರಿಂದ ಹಣ ಪಾವತಿಸಿಕೊಂಡು ಬಡಾವಣೆ ಅಭಿವೃದ್ಧಿಪಡಿಸಬೇಕು, ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಸಲಹೆಯಿತ್ತರು.

ಅಂಗಡಿ, ನಿವೇಶನ ಸೇರಿದಂತೆ ಆಸ್ತಿಗಳನ್ನು ನಗರ ಪಾಲಿಕೆಯಿಂದ ಬಾಡಿಗೆಗೆ ಪಡೆದವರು ಸುಮಾರು 10 ರಿಂದ 20 ವರ್ಷಗಳಿಂದ ಬಾಡಿಗೆ ಪಾವತಿಸಿಲ್ಲ, ದಂಡ ಪಾವತಿಸಿ ಸಿಆರ್ ಪಡೆಯಲು ಜನರು ಮುಂದಾದರೂ ನಗರ ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಸಮ್ಮತಿಸುತ್ತಿಲ್ಲ, ಸ್ವಚ್ಚ ಸರ್ವೇಕ್ಷಣೆಯಲ್ಲಿ ಮೈಸೂರು ಅಗ್ರಸ್ಥಾನ ಪಡೆಯಲು ನಗರ ಪಾಲಿಕೆಯ 3,500 ನೌಕರರಲ್ಲಿ ಬದ್ಧತೆ ಇಲ್ಲ ಎಂದು ಆಪಾದಿಸಿದರು..

ನೌಕರರಿಗೆ ವೇತನ ನೀಡಲು ಸ್ಥಳೀಯ ಸಂಸ್ಥೆಗಳು ಶೇಕಡ 20ರಷ್ಟು ಹಣ ಭರಿಸಬೇಕು ಎಂದು ಸರ್ಕಾರ ಆದೇಶಿಸಿದೆ. ಆದರೆ ಸ್ಥಳೀಯ ಸಂಸ್ಥೆಗಳಿರುವುದು ನಗರವನ್ನು ನಿರ್ವಹಣೆ ಮಾಡುವುದಕ್ಕೇ ಹೊರತು ಲಾಭ ಮಾಡಲು ಅಲ್ಲ. ಆದರೂ ನಗರ ಪಾಲಿಕೆಯಿಂದ ಸರ್ಕಾರಕ್ಕೆ ಆದಾಯ ಸಂದಾಯವಾಗುತ್ತದೆ. ಆದರೆ 15 ನೇ ಹಣಕಾಸು ಆಯೋಗದಿಂದ ನಗರ ಪಾಲಿಕೆಗೆ ಯಾವ ಅನುದಾನವೂ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದಾಖಲಾತಿ ಇಲ್ಲ: ಇದೇ ವೇಳೆ ಮಾತನಾಡಿದ ಮಾಜಿ ಮೇಯರ್ ಭೈರಪ್ಪ, ಮೈಸೂರಿನ ಹಳೇ ಬಡಾವಣೆಯ ಬಹಳಷ್ಟು ಮನೆ ಅಥವಾ ನಿವೇಶನಕ್ಕೆ ಸೂಕ್ತ ದಾಖಲಾತಿ ಇಲ್ಲ. ಇದರಿಂದ ಇ–ಖಾತೆ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಬಡಾವಣೆಗೆ ಇರುವ ದಾಖಲಾತಿ ಆಧಾರದ ಮೇಲೆ ಇ–ಖಾತೆ ನೀಡಬೇಕು ಎಂದು ಸಲಹೆ ನೀಡಿದರು.



ಮೈಸೂರು ನಗರ ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ಪ್ರಾದೇಶಿಕ ಆಯುಕ್ತರೂ ಆದ ನಗರ ಪಾಲಿಕೆಯ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರು ಮಾಜಿ ಮೇಯರ್ ಹಾಗೂ ಮಾಜಿ ಕಾರ್ಪೋರೇಟರ್‌ಗಳ ಜೊತೆ ಬಜೆಟ್ ಪೂರ್ವಭಾವಿ ಸಭೆ ನಡೆಸಿದರು.

ಟೇಸ್ಟ್ ಪೌಡರ್ ಬಳಸಿ ಆಹಾರ ತಯಾರಿಕೆ

ಮೈಸೂರು ನಗರದ ಫುಟ್‌ಪಾತ್ ಫಾಸ್ಟ್ ಫುಡ್‌ಗಳಲ್ಲಿ ತಯಾರಿಸುವ ಆಹಾರ ಪದಾರ್ಥಗಳಲ್ಲಿ ಟೇಸ್ಟ್ ಪೌಡರ್ ಬಳಕೆ ಮಾಡುತ್ತಿದ್ದು, ಇದರಿಂದ ಜನರಲ್ಲಿ ಅಂಗಾಂಗ ವೈಫಲ್ಯ ಸಮಸ್ಯೆ ಎದುರಾಗುತ್ತಿದೆ ಎಂದು ಮಾಜಿ ಮೇಯರ್ ಮೋದಾಮಣಿ ಆತಂಕ ವ್ಯಕ್ತಪಡಿಸಿದರು. ರಸ್ತೆ ಬದಿ ತಲೆ ಎತ್ತಿರುವ ನೂರಾರು ವೆಜ್–ನಾನ್ ವೆಜ್ ಫಾಸ್ಟ್ ಫುಡ್‌ಗಳಲ್ಲಿ ಸ್ವಚ್ಛತೆ ಇಲ್ಲ. ಇದರಿಂದ ಇದನ್ನು ಸೇವಿಸುವ ಜನರಲ್ಲಿ ತೀವ್ರ ಅನಾರೋಗ್ಯ ಬಾಧಿಸುತ್ತಿದೆ ಎಂದು ಮೋದಾಮಣಿ ತಿಳಿಸಿದರು.

ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣವನ್ನು ನಿರ್ವಹಣೆ ಮಾಡಲು ಲಯನ್ಸ್ ಕ್ಲಬ್‌ನವರು ಮುಂದೆ ಬಂದಿದ್ದಾರೆ. ಇದಕ್ಕೆ ನಗರ ಪಾಲಿಕೆ ಸಮ್ಮತಿ ನೀಡಬೇಕು. ಇದೇ ಕ್ರೀಡಾಂಗಣದಲ್ಲಿರುವ ಕನ್ನಡ ಭವನಕ್ಕೆ ಕುರ್ಚಿ ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದರು.

ಮೈಸೂರಿನ ಅರ್ಧದಷ್ಟು ವ್ಯಾಪಾರಸ್ಥರು ಉದ್ದಿಮೆ ರಹದಾರಿ ಪಡೆದಿಲ್ಲ. ಇದರಿಂದ ನಗರ ಪಾಲಿಕೆಗೆ ನಷ್ಟವಾಗುತ್ತಿದೆ. ಈ ಮೊದಲು ಮನೆ ಮನೆಗೆ ಹೋಗಿ ಕಂದಾಯ ಬಾಕಿ ವಸೂಲಿ ಮಾಡಲಾಗುತ್ತಿತ್ತು. ಆದರೆ ಈಗ ಅಧಿಕಾರಿಗಳು ಇದನ್ನು ಸ್ಥಗಿತ ಮಾಡಿದ್ದಾರೆ ಎಂದು ಭೈರಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ದೇವರಾಜ ಮಾರುಕಟ್ಟೆ ಪುನರ್ ನಿರ್ಮಾಣ: ಮೈಸೂರಿನ ದೇವರಾಜ ಮಾರುಕಟ್ಟೆಯನ್ನು ಪುನರ್ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ ಪುನರ್ ನಿರ್ಮಾಣ ಬಳಿಕ ಹಾಲಿ ಇರುವ ಮಾರುಕಟ್ಟೆಯ ಮಳಿಗೆ ಬಾಡಿಗೆದಾರರಿಗೆ ಖಾತಾ ಮಾಡಿಕೊಡಬೇಕು. ಈ ಮೂಲಕ ಅವರಿಂದ ಹೆಚ್ಚಿನ ಬಾಡಿಗೆ ವಸೂಲಿ ಮಾಡಬೇಕು. ನಮ್ಮ ಈ ಪ್ರಸ್ತಾಪಕ್ಕೆ ವ್ಯಾಪಾರಸ್ಥರು ಕೂಡ ಒಪ್ಪಿದ್ದಾರೆ ಎಂದು ಮಾಜಿ ಮೇಯರ್ ಆರ್.ಲಿಂಗಪ್ಪ ತಿಳಿಸಿದರು.

ಮಾಜಿ ಮೇಯರ್ ಹಾಗೂ ಮಾಜಿ ಕಾರ್ಪೋರೇಟರ್‌ಗಳ ಸಲಹೆಯನ್ನು ಆಲಿಸಿದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರು, ಬಜೆಟ್ ತಯಾರಿಸುವ ವೇಳೆ ನಿಮ್ಮ ಸಲಹೆಯನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಅಲ್ಲದೆ ನೀವು ಹೇಳಿರುವ ಕೆಲವು ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ವಿಶ್ವನಾಥ್, ಪುಷ್ಪಾವತಿ ಸೇರಿದಂತೆ ಹಲವರು ತಮ್ಮದೆ ಸಲಹೆಗಳನ್ನು ನೀಡಿದರು.

ಉಪ ಆಯುಕ್ತ ಸೋಮಶೇಖರ್, ಹೆಚ್ಚುವರಿ ಆಯುಕ್ತೆ ಕುಸುಮಾ ಕುಮಾರಿ, ಸೂಪರಿಂಟೆಂಡೆಂಟ್ ಇಂಜಿನಿಯರ್ ಮಂಜು, ಮುಖ್ಯ ಲೆಕ್ಕಾಧಿಕಾರಿ ಶ್ವೇತಾ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

ಇಂಧೋರ್ ನಗರ ಪಾಲಿಕೆಯಂತೆ ಎಐ ಆಧಾರಿತ ಸ್ವಚ್ಛತಾ ಕಾರ್ಯ ಕೈಗೊಳ್ಳಿ

ಸ್ವಚ್ಛ ಸರ್ವೇಕ್ಷಣೆಯಲ್ಲಿ ಸತತ ಅಗ್ರ ಸ್ಥಾನ ಪಡೆದಿರುವ ಇಂಧೋರ್ ನಗರ ಪಾಲಿಕೆ ಮಾದರಿಯಲ್ಲಿ ಎಐ ಆಧಾರಿತ ಕಂಟ್ರೋಲ್ ಕಮಾಂಡಿಂಗ್ ಸೆಂಟರ್ ಸ್ಥಾಪಿಸಬೇಕು ಎಂದು ಮಾಜಿ ಮೇಯರ್ ಶಿವಕುಮಾರ್ ಸಲಹೆ ನೀಡಿದರು.

ನಗರವನ್ನು ಸ್ವಚ್ಛವಾಗಿಡಲು ಇಂಧೋರ್‌ನಲ್ಲಿ ಬೆಳಿಗ್ಗೆ ಮತ್ತು ಸಂಜೆ ವೇಳೆ ಕಸ ಸಂಗ್ರಹಿಸಲಾಗುತ್ತದೆ. ಕಸ ಸಂಗ್ರಹಿಸುವವರು ಮನೆಯವರಿಂದ ಪಡೆಯುವ ಕ್ಯೂ ಆರ್ ಕೋಡ್ ದಾಖಲಾತಿ ಪಡೆಯಲಿದ್ದು, ಅದು ಕಂಟ್ರೋಲ್ ಕಮಾಂಡಿಂಗ್ ಸೆಂಟರ್‌ನಲ್ಲಿ ನಮೂದಾಗುತ್ತದೆ, ಜೊತೆಗೆ ಕಸ ಸಂಗ್ರಹಿಸುವ ವಾಹನದ ಪ್ರತಿ ಮೂವೆಂಟ್ ಅನ್ನು ಅಲ್ಲಿ ಟ್ರ್ಯಾಕ್ ಮಾಡಲಾಗುತ್ತದೆ ಎಂದು ವಿವರಿಸಿದರು.

ಕಸವನ್ನು ತೂಕ ಮಾಡಿ, ಗೊಬ್ಬರ ಮಾಡುವ ವಿವರ ಕೂಡ ಕಮಾಂಡಿಂಗ್ ಸೆಂಟರ್‌ನಲ್ಲಿ ಇರುತ್ತದೆ. ಆರ್‌ಟಿಒ ಜೊತೆ ನಗರ ಪಾಲಿಕೆ ಒಪ್ಪಂದ ಮಾಡಿಕೊಂಡಿದ್ದು, ಯಾರಾದರೂ ರಸ್ತೆಯಲ್ಲಿ ಕಸ ಎಸೆದರೆ ಎಐ ಆಧಾರಿತ ತಂತ್ರಜ್ಞಾನದಿಂದ ಆ ವಾಹನದ ವಿವರವು ಆರ್‌ಟಿಒ ಮೂಲಕ ಕಮಾಂಡಿಂಗ್ ಸೆಂಟರ್‌ಗೆ ರವಾನೆಯಾಗುತ್ತದೆ. ತರುವಾಯ ಕಸ ಎಸೆದ ವಾಹನದ ಮಾಲೀಕನಿಗೆ ನೋಟಿಸ್ ರವಾನೆಯಾಗಲಿದ್ದು, ದಂಡ ವಸೂಲಿ ಮಾಡಲಾಗುತ್ತದೆ. ಇದರಿಂದ ಜನರಿಗೆ ಕಸ ಎಸೆಯುವುದಕ್ಕೆ ಕಡಿವಾಣ ಹಾಕಿದಂತಾಗುತ್ತದೆ.

ಅಭಿವೃದ್ಧಿ ಕಾಮಗಾರಿಗೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ತಯಾರಿಸಿಕೊಂಡಿದ್ದಾರೆ. ಜಾಬ್ ಕಾರ್ಡ್ ಪಡೆದ ಗುತ್ತಿಗೆದಾರ ಕಾಮಗಾರಿಯ ವಿವರವನ್ನು ಫೋಟೋ ಸಹಿತ ಆಗಾಗ್ಗೆ ಅಪ್‌ಡೇಟ್ ಮಾಡಬೇಕು, ಥರ್ಡ್ ಪಾರ್ಟಿ ತಪಾಸಣೆಯ ವರದಿ ಕೂಡ ನೀಡಬೇಕು. ಇದರಿಂದ ಕಾಮಗಾರಿಯಲ್ಲಿ ಗುಣಮಟ್ಟ ಹಾಗೂ ಪಾರದರ್ಶಕತೆ ಇರುತ್ತದೆ. ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರ ಒಂದು ವರ್ಷದವರೆಗೆ ನಿರ್ವಹಣೆ ಮಾಡಬೇಕು. ಒಂದು ವೇಳೆ ಕಳಪೆ ಕಾಮಗಾರಿಯಿಂದ ಮತ್ತೆ ಅದೇ ಕಾಮಗಾರಿ ಕೈಗೊಂಡರೆ ಸಾಫ್ಟ್‌ವೇರ್ ಅದನ್ನು ಸ್ವೀಕರಿಸುವುದಿಲ್ಲ ಎಂದು ಹೇಳಿದರು.

ಇಂಧೋರ್ ಹಾಗೂ ಚಂಡೀಗಢದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ನಗರ ಪಾಲಿಕೆಯ ಕೆಲಸ ಕಾರ್ಯವನ್ನು ನಿರ್ವಹಣೆ ಮಾಡುತ್ತಿದ್ದು, ಇದರಿಂದ ಸ್ವಚ್ಛ ಸರ್ವೇಕ್ಷಣೆಯಲ್ಲಿ ಅವರು ಅಗ್ರಸ್ಥಾನ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಎರಡು ವರ್ಷದಿಂದ 430 ಕೋಟಿ ತೆರಿಗೆ ಸಂಗ್ರಹ

ಮೈಸೂರು ನಗರ ಪಾಲಿಕೆಯಲ್ಲಿ 2023–24 ನೇ ಸಾಲಿನಲ್ಲಿ 180 ಕೋಟಿ ತೆರಿಗೆ ಸಂಗ್ರಹಿಸಲಾಗಿದೆ. 2024–25ನೇ ಸಾಲಿನಲ್ಲಿ 250 ಕೋಟಿ ತೆರಿಗೆ ಸಂಗ್ರಹಿಸಲಾಗಿದೆ. ಈ ಮೂಲಕ ತೆರಿಗೆ ಸಂಗ್ರಹದಲ್ಲಿ ಶೇಕಡ 85 ರಷ್ಟು ಗುರಿ ಸಾಧಿಸಿದ್ದೇವೆ ಎಂದು ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ತಿಳಿಸಿದರು.

15ನೇ ಹಣಕಾಸು ಆಯೋಗದಿಂದ ಮೈಸೂರು ನಗರ ಪಾಲಿಕೆಗೆ ಕಳೆದ ವರ್ಷ 60 ಕೋಟಿ ಹಾಗೂ ಈ ವರ್ಷ 60 ಕೋಟಿ ಸೇರಿ ಸುಮಾರು 120 ಕೋಟಿ ರೂಪಾಯಿ ಬರಬೇಕಿದೆ ಎಂದು ಹೇಳಿದರು.

ಮೈಸೂರು ನಗರ ಪಾಲಿಕೆಯನ್ನು ಗ್ರೇಟರ್ ಮೈಸೂರು ಮಾಡುವ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿಲ್ಲ. ಸರ್ಕಾರ ಅನುಮೋದನೆ ನೀಡಿರುವುದು ಮೈಸೂರು ಗ್ರೇಡ್ 1ಗೆ ಎಂದು ಶೇಕ್ ತನ್ವೀರ್ ಆಸೀಫ್ ಸ್ಪಷ್ಟಪಡಿಸಿದರು.

ದೇವರಾಜ ಅರಸರಿಗೆ ಸಿದ್ದರಾಮಯ್ಯ ಸಾಟಿಯಲ್ಲ

ಬೆಂಗಳೂರು,ಜ.7– ದೇವರಾಜ ಅರಸು ಅವರಿಗೆ ಸಿದ್ದರಾಮಯ್ಯ ಸಾಟಿಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ.



ಸದಾಶಿವನಗರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ದೇವರಾಜ ಅರಸು ಅವರ ದಾಖಲೆಯನ್ನು ಸಿದ್ದರಾಮಯ್ಯ ಮುರಿದಿದ್ದಾರೆ ಎಂಬುದು ಇಟ್ ಇಸ್ ದ ಜೋಕ್ ಆಫ್ ದಿ ಇಯರ್ 2026 ಎಂದು ವ್ಯಂಗ್ಯವಾಡಿದರು.

ದೇವರಾಜ ಅರಸು ಅವರು ನನ್ನಂತಹ ಬಹಳ ಜನ ಯುವಕರನ್ನು ಬೆಳೆಸಿದರು. ಬಹುಶಃ ದೇವರಾಜ ಅರಸು ಹಾಗೂ ಇಂದಿರಾ ಗಾಂಧಿಯವರನ್ನು ಸಿದ್ದರಾಮಯ್ಯನಷ್ಟು ಬೈದವರು ಯಾರೂ ಇಲ್ಲ. ಈಗ ದೇವರಾಜ ಅರಸು ಬಗ್ಗೆ ಮಾತನಾಡುತ್ತಾರೆ ಎಂದು ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

ದೇವರಾಜ ಅರಸು ಅವರು ಹಾವನೂರು ಆಯೋಗದ ವರದಿ ಅನುಷ್ಠಾನಗೊಳಿಸಿದರು. ಇಂದು ಹಿಂದುಳಿದ ವರ್ಗದವರ ಮನೆಯಲ್ಲಿ ಅಸಿಸ್ಟೆಂಟ್ ಕಮಿಷನರ್, ಡಿಸಿ, ತಹಸೀಲ್ದಾರ್ ಮೊದಲಾದ ಅಧಿಕಾರಿಗಳು ಇದ್ದರೆ, ಅದಕ್ಕೆ ದೇವರಾಜ ಅರಸು ಹಾಗೂ ಹಾವನೂರು ಆಯೋಗದ ವರದಿ ಕಾರಣ. ನೀವೇನ್ರಿ ಹಿಂದುಳಿದವರ ಸಮೀಕ್ಷೆ ಮಾಡ್ತೀನಿ ಎಂದು 10 ವರ್ಷ ತಲೆದೆಸೆಗೆ ಹಾಕಿಕೊಂಡು ಮಲಗಿದ್ರಿ, ರಾಹುಲ್ ಗಾಂಧಿ ಹೇಳಿದರೆಂದು ಅದನ್ನು ಬೀಸಾಕ್ಬಿಟ್ರಿ. ಯಾವ ಅಹಿಂದಾ ಲೀಡರ್ ಅಪ್ಪ ನೀನು ಎಂದು ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

ದೇವರಾಜ ಅರಸು ಅವರಿಗೆ ಸಿದ್ದರಾಮಯ್ಯ ಸಮ ಎಂದು ಹೇಳುವುದು ನಗೆಪಾಟಲು. ಕಾಂಗ್ರೆಸ್ ಎಂದರೆ ಅದೇ ಅಹಿಂದಾ, ನೀನು ಕಾಂಗ್ರೆಸ್ ಬಗ್ಗೆ ಮಾತೆ ಆಡುತ್ತಿಲ್ಲವಲ್ಲ ಸಿದ್ದರಾಮಯ್ಯ ಎಂದರು.

ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಬೇಕು ಎಂಬ ಮಾತುಗಳು ಕೇಳಿಬರುತ್ತಿವೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯನಿಗೆ ಯಾವ ಕೃತಜ್ಞತೆ ಇಲ್ಲ. ಯುವಕರನ್ನು ಬೆಳೆಸಬೇಕೆಂಬುದೂ ಅವರಲ್ಲಿ ಇಲ್ಲ. ತಾನಾಯಿತು ತನ್ನ ಮಗ ಆಯಿತು ಎನ್ನುವುದಕ್ಕೆ ಸೀಮಿತವಾಗಿದ್ದಾರೆ. ನಮ್ಮನ್ನೆಲ್ಲ ತುಳಿದಿದ್ದಾರೆ. ಹಾಗಾಗಿ ಯಾವ ಕೃತಜ್ಞತೆ ಇಲ್ಲ ಎಂದು ವಾಗ್ದಾಳಿ ನಡೆಸಿದರು. ರಾಜ್ಯದಲ್ಲಿ ದೊಡ್ಡ ಕೋಲಾಹಲ ನಡೆಯುತ್ತಿದ್ದು, ಶಾಂತಿ, ಸುಭಿಕ್ಷೆ ಇಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲ. ಪೊಲೀಸರ ಪರಿಸ್ಥಿತಿ ಕೆಟ್ಟದಾಗಿದ್ದು, ಪೋಸ್ಟಿಂಗ್‌ಗಳಿಗೆ ದುಡ್ಡು ಕೊಡುವುದರಲ್ಲಿ ಹೈರಾಣು ಆಗಿದ್ದಾರೆ ಎಂದು ಆರೋಪಿಸಿದರು.

ಆರು ತಿಂಗಳಿಗಿಂತ ಅಧಿಕ ಅವಧಿ ಭೂ ವ್ಯಾಜ್ಯ ಇತ್ಯರ್ಥಕ್ಕೆ ಮಾರ್ಚ್ ಗಡುವು

- ಉಪ ವಿಭಾಗಾಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಕಟ್ಟಾದೇಶ
- ರಾಜ್ಯದಲ್ಲಿ 19 ಸಾವಿರ ಪ್ರಕರಣ ಬಾಕಿ ಇವೆ

ಬೆಂಗಳೂರು, ಜ.7(ಕೆಎಂಶಿ)– ಆರು ತಿಂಗಳಿಗಿಂತ ಹೆಚ್ಚಿನ ಸಮಯದ ಭೂ ವ್ಯಾಜ್ಯ ಪ್ರಕರಣಗಳನ್ನು ಮಾರ್ಚ್ ಅಂತ್ಯದೊಳಗೆ ಇತ್ಯರ್ಥ ಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಕಟ್ಟಾದೇಶ ಮಾಡಿದ್ದಾರೆ.



ಪ್ರತಿ ಶನಿವಾರ ಎಸಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಕುರಿತು ಮೇಲ್ವಿಚಾರಣೆ ನಡೆಸುವಂತೆ ಕಂದಾಯ ಇಲಾಖಾ ಆಯುಕ್ತರಾದ ಮೀನಾ ನಾಗರಾಜ್ ಅವರಿಗೆ ಸೂಚಿಸಿದ್ದಾರೆ.

ಕಾಲಾನುಕಾಲಕ್ಕೆ ಸಭೆಗಳನ್ನು ನಡೆಸಿ ಎಚ್ಚರಿಕೆ ನೀಡಿದರೂ ಹಳೆಯ ಪ್ರಕರಣಗಳು ಇತ್ಯರ್ಥವಾಗದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಅಂತಹ ಪ್ರಕರಣಗಳ ಇತ್ಯರ್ಥಕ್ಕೆ ಮಾರ್ಚ್ ಗಡುವು ನೀಡಿದ್ದಾರೆ. ಭೂಮಿ ಬೆಲೆ ಗಗನಕ್ಕೇರಿರುವ ರಾಮನಗರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಬೆಂಗಳೂರು ನಗರದ ಸುತ್ತ ಮುತ್ತಲಿನ ಜಿಲ್ಲೆಗಳಲ್ಲೇ ಭೂ ವ್ಯಾಜ್ಯ ಪ್ರಕರಣಗಳು ತ್ವರಿತವಾಗಿ ಇತ್ಯರ್ಥಗೊಳ್ಳುತ್ತಿಲ್ಲ ಎಂದಿದ್ದಾರೆ.

ಹಿರಿಯ ಅಧಿಕಾರಿಗಳ ಜೊತೆ ಕೆಲವು ಜಿಲ್ಲೆಗಳ ಉಪವಿಭಾಗಾಧಿಕಾರಿಗಳ ಜೊತೆ ಸಭೆ ನಡೆಸಿದ ಸಚಿವರು, ರಾಜ್ಯಾದ್ಯಂತ 19,000 ಪ್ರಕರಣಗಳು ಬಾಕಿ ಉಳಿದಿವೆ.

ಇವುಗಳಲ್ಲಿ ಬೆಂಗಳೂರು ನಗರದ ಸುತ್ತಲಿನ ಜಿಲ್ಲೆಗಳದ್ದೇ ಸಿಂಹಪಾಲು, ಈ ವ್ಯಾಪ್ತಿಯಲ್ಲಿ ಬರುವ ಪ್ರಕರಣಗಳನ್ನು ಜನವರಿ ಅಂತ್ಯದೊಳಗೆ ಪರಿಹರಿಸಿ ಎಂದಿದ್ದಾರೆ.

ಈ ಜಿಲ್ಲೆಗಳಲ್ಲೇ 14,000 ಪ್ರಕರಣಗಳಿವೆ. ಉಳಿದ ಜಿಲ್ಲೆಗಳಲ್ಲಿ 6,000 ಪ್ರಕರಣಗಳಿವೆ. ರೈತರ ವಿಷಯದಲ್ಲಿ ನೀವು ವಿಳಂಬ ಮಾಡಬೇಡಿ. ಆದಷ್ಟೂ ನಿಗದಿತ ಸಮಯದಲ್ಲಿ ಇತ್ಯರ್ಥಕ್ಕೆ ಮುಂದಾಗಿ ಎಂದಿದ್ದಾರೆ.

ಮಿಸ್ಸಿಂಗ್, ವಿಲೇವಾರಿ ಆಗದ ಹಾಗೂ ಅನರ್ಹ ಜೊತೆಗೆ ಕಾಯ್ದಿರಿಸಿ ಪ್ರಕರಣಗಳನ್ನು ಆದ್ಯತೆ ಮೇಲೆ ಪರಿಹರಿಸಿ, ನಿಮಗೆ ಮುಂದಿನ ಸವಾಲು ಮತ್ತು ಪರಿಹಾರದ ಬಗ್ಗೆ ಅರಿವಿದೆ. ಭೂ ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸಾಧ್ಯವಾಗುತ್ತದೆ.

ಆದ್ಯತೆ ಮೇರೆಗೆ ನ್ಯಾಯಾಲಯ ಕಲಾಪ ನಡೆಸಿ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿ, ವರ್ಷಾಂತ್ಯದೊಳಗೆ ಪ್ರಕರಣಗಳ ವಿಲೇವಾರಿ ಮಾಡಿ ಎಂದಿದ್ದಾರೆ.

ನಾಳೆಯಿಂದ ಮಹಿಳಾ ಪ್ರೀಮಿಯರ್ ಲೀಗ್

ಆರ್‌ಸಿಬಿ-ಮುಂಬೈ ಇಂಡಿಯನ್ಸ್ ಆರಂಭಿಕ ಮುಖಾಮುಖಿ





ಡಬ್ಲ್ಯೂಪಿಎಲ್ ಟ್ರೋಫಿ ಅನಾವರಣಗೊಳಿಸಿದ ಹರ್ಮನ್‌ಪ್ರೀತ್‌ಕೌರ್

ಮೈಸೂರು, ಜ.7(ವಿವಿಹೆಚ್)– 2026ರ ಡಬ್ಲ್ಯೂಪಿಎಲ್ (ಮಹಿಳಾ ಪ್ರೀಮಿಯರ್ ಲೀಗ್) ಆವೃತ್ತಿ ಇದೇ ಜನವರಿ 9ರ ಶುಕ್ರವಾರದಂದು ಪ್ರಾರಂಭವಾಗಲಿದೆ. ನವಿ ಮುಂಬೈನಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಸ್ಮೃತಿ ಮಂದಾನ ನೇತೃತ್ವದ ಆರ್‌ಸಿಬಿಯು ಹಾಲಿ ಚಾಂಪಿಯನ್ ಹರ್ಮನ್ ಪ್ರೀತ್ ಕೌರ್ ನೇತೃತ್ವದ ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲು ಸಜ್ಜಾಗಿದೆ.

28 ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಯಲ್ಲಿ 5 ತಂಡಗಳು 22 ಪಂದ್ಯಗಳನ್ನು ಆಡಲಿವೆ. ಈ ಬಾರಿಯೂ ಕೇವಲ ಎರಡೇ ಕ್ರೀಡಾಂಗಣದಲ್ಲಿ ಟೂರ್ನಿ ಆಯೋಜಿಸಲಾಗಿದ್ದು, ನವಿ ಮುಂಬೈನ ಡಿವೈ ಪಾಟೀಲ್ ಮತ್ತು ವಡೋದರಾದ ಬಿಸಿಎ ಕ್ರೀಡಾಂಗಣಗಳಲ್ಲಿ ಈ ಸೀಸನ್‌ನ ಎಲ್ಲಾ ಪಂದ್ಯಗಳು ನಡೆಯಲಿವೆ.

ನಾಲ್ಕನೇ ಆವೃತ್ತಿಯ ಈ ಪಂದ್ಯಾವಳಿಯಲ್ಲಿ ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ದೆಹಲಿ ಕ್ಯಾಪಿಟಲ್ಸ್, ಯುಪಿ ವಾರಿಯರ್ಸ್ ಮತ್ತು ಗುಜರಾತ್ ಜೈಂಟ್ಸ್ ತಂಡಗಳು ಕಣಕ್ಕಿಳಿಯಲಿದ್ದು, ಟ್ರೋಫಿಗಾಗಿ ಕಣ್ಣಿಟ್ಟಿದ್ದಾರೆ.

ಫೈನಲ್ಸ್ ಹಾದಿ ಬಲು ಕಠಿಣ: ಪ್ರತಿ ತಂಡಕ್ಕೂ 8 ಪಂದ್ಯಗಳಲ್ಲಿ ಪ್ರತಿಯೊಂದು ತಂಡವೂ ಪರಸ್ಪರ ಎರಡೆರಡು ಬಾರಿ ಮುಖಾಮುಖಿಯಾಗುತ್ತವೆ. ಪ್ರತಿ ತಂಡವು ಪಂದ್ಯಾವಳಿಯಲ್ಲಿ ಎಂಟು ಪಂದ್ಯಗಳನ್ನು ಆಡುತ್ತದೆ. ಲೀಗ್ ಹಂತ ಮುಗಿದ ನಂತರ, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ತಂಡವು ನೇರವಾಗಿ ಫೈನಲ್‌ಗೆ ಮುನ್ನಡೆದರೆ, 2 ಮತ್ತು 3ನೇ ಸ್ಥಾನದಲ್ಲಿರುವ ತಂಡಗಳು ಎಲಿಮಿನೇಟರ್ ಆಗಲಿದೆ. ಇಲ್ಲಿ ಗೆದ್ದ ತಂಡವು ಫೈನಲ್‌ಗೆ ಅರ್ಹತೆ ಪಡೆದು ಪ್ರಶಸ್ತಿ ಸುತ್ತಿನಲ್ಲಿ ಕಾದಾಡಲಿದೆ.

ಎರಡು ಡಬಲ್ ಹೆಡರ್ ಪಂದ್ಯ: ಒಂದೇ ದಿನ ಎರಡು ಪಂದ್ಯಗಳನ್ನು ಆಯೋಜಿಸುವುದಕ್ಕೆ ಡಬಲ್ ಹೆಡರ್ ಎಂದು ಕರೆಯಲಾಗುತ್ತದೆ. ಇನ್ನು ಈ ಬಾರಿ ಎರಡು ಡಬಲ್ ಹೆಡರ್ ಪಂದ್ಯಗಳಿದ್ದು, ಮೊದಲ ಡಬಲ್ ಹೆಡರ್ ಜನವರಿ 10 ರಂದು ನಡೆದರೆ, ಎರಡನೇ ಜನವರಿ 17 ರಂದು ಎರಡನೇ ಡಬಲ್ ಹೆಡರ್ ನಡೆಯಲಿದೆ.

ಈ ಬಾರಿಯ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿಯನ್ನು ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ಹಾಗೂ ಲೈವ್ ಸ್ಟ್ರೀಮಿಂಗ್ ಅನ್ನು ಜಿಯೋಸ್ಟಾರ್ ಅಪ್ಲಿಕೇಶನ್‌ನಲ್ಲಿ ವೀಕ್ಷಿಸಬಹುದಾಗಿದೆ.

ಡಬ್ಲ್ಯೂಪಿಎಲ್ ವೇಳಾಪಟ್ಟಿ

09-01-2026	ಮುಂಬೈ ಇಂಡಿಯನ್ಸ್ v/s ಆರ್‌ಸಿಬಿ (ನವಿ ಮುಂಬೈ)
10-01-2026	ಯುಪಿ v/s ಗುಜರಾತ್ ಜೈಂಟ್ಸ್ (ನವಿ ಮುಂಬೈ)
10-01-2026	ಮುಂಬೈ ಇಂಡಿಯನ್ಸ್ v/s ದೆಹಲಿ ಕ್ಯಾಪಿಟಲ್ಸ್ (ನವಿ ಮುಂಬೈ)
11-01-2026	ದೆಹಲಿ v/s ಗುಜರಾತ್ ಜೈಂಟ್ಸ್ (ನವಿ ಮುಂಬೈ)
12-01-2026	ಆರ್‌ಸಿಬಿ v/s ಯುಪಿ ವಾರಿಯರ್ಸ್ (ನವಿ ಮುಂಬೈ)
13-01-2026	ಮುಂಬೈ ಇಂಡಿಯನ್ಸ್ v/s ಗುಜರಾತ್ ಜೈಂಟ್ಸ್ (ನವಿ ಮುಂಬೈ)
14-01-2026	ಯುಪಿ ವಾರಿಯರ್ಸ್ v/s ದೆಹಲಿ (ನವಿ ಮುಂಬೈ)
15-01-2026	ಮುಂಬೈ ಇಂಡಿಯನ್ಸ್ v/s ಯುಪಿ (ನವಿ ಮುಂಬೈ)
16-01-2026	ಆರ್‌ಸಿಬಿ v/s ಗುಜರಾತ್ ಜೈಂಟ್ಸ್ (ನವಿ ಮುಂಬೈ)
17-01-2026	ಯುಪಿ v/s ಮುಂಬೈ ಇಂಡಿಯನ್ಸ್ (ನವಿ ಮುಂಬೈ)
17-01-2026	ದೆಹಲಿ ಕ್ಯಾಪಿಟಲ್ಸ್ v/s ಆರ್‌ಸಿಬಿ (ನವಿ ಮುಂಬೈ)
19-01-2026	ಗುಜರಾತ್ ಜೈಂಟ್ಸ್ v/s ಆರ್‌ಸಿಬಿ (ವಡೋದರಾ)
20-01-2026	ದೆಹಲಿ v/s ಮುಂಬೈ ಇಂಡಿಯನ್ಸ್ (ವಡೋದರಾ)
22-01-2026	ಗುಜರಾತ್ v/s ಯುಪಿ ವಾರಿಯರ್ಸ್ (ವಡೋದರಾ)
24-01-2026	ಆರ್‌ಸಿಬಿ v/s ದೆಹಲಿ ಕ್ಯಾಪಿಟಲ್ಸ್ (ವಡೋದರಾ)
26-01-2026	ಆರ್‌ಸಿಬಿ v/s ಮುಂಬೈ ಇಂಡಿಯನ್ಸ್ (ವಡೋದರಾ)
27-01-2026	ಗುಜರಾತ್ v/s ದೆಹಲಿ ಕ್ಯಾಪಿಟಲ್ಸ್ (ವಡೋದರಾ)
29-01-2026	ಯುಪಿ ವಾರಿಯರ್ಸ್ v/s ಆರ್‌ಸಿಬಿ (ವಡೋದರಾ)
30-01-2026	ಗುಜರಾತ್ v/s ಮುಂಬೈ ಇಂಡಿಯನ್ಸ್ (ವಡೋದರಾ)
01-02-2026	ಡೆಲ್ಲಿ v/s ಯುಪಿ ವಾರಿಯರ್ಸ್ (ವಡೋದರಾ)
03-02-2026	ಎಲಿಮಿನೇಟರ್ (ವಡೋದರಾ)
05-02-2026	ಫೈನಲ್ (ವಡೋದರಾ)

ಮುಂಬೈ ಪಾರುಪತ್ಯ: ಡಬ್ಲ್ಯೂಪಿಎಲ್ ಟೂರ್ನಿ ಈವರೆಗೆ ಮೂರು ಆವೃತ್ತಿಗಳನ್ನು ಕಂಡಿದ್ದು, ನಾಲ್ಕನೇ ಆವೃತ್ತಿಯ ಆರಂಭದ ಕ್ಷಣಗಣನೆಯಲ್ಲಿದೆ. ಮೂರು ಸೀಸನ್‌ನಲ್ಲಿ ಕೇವಲ ಇಬ್ಬರು ಚಾಂಪಿಯನ್‌ಗಳಿದ್ದು, ಒಂದು ಬಾರಿ ಆರ್‌ಸಿಬಿ ಗೆದ್ದು ಬೀಗಿದರೇ, ಉಳಿದ ಎರಡು ಬಾರಿ ಮುಂಬೈ ಇಂಡಿಯನ್ಸ್ ಚಾಂಪಿಯನ್ ಪಟ್ಟ ಅಲಂಕರಿಸಿದೆ. 2023ರಲ್ಲಿ ಮುಂಬೈ, 2024ರಲ್ಲಿ ಆರ್‌ಸಿಬಿ ಮತ್ತು 2025ರ ಲೀಗ್‌ನಲ್ಲಿ ಮುಂಬೈ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಆರ್‌ಸಿಬಿಗೆ ಆಘಾತ: ಆರ್‌ಸಿಬಿಯ ಆಲ್‌ರೌಂಡರ್ ಎಲಿಸ್ ಪೆರ್ರಿ ವೈಯಕ್ತಿಕ ಕಾರಣಗಳಿಂದ ಈ ಬಾರಿಯ ಟೂರ್ನಿಯಿಂದ ಹೊರಗುಳಿದಿದ್ದಾರೆ. 2024 ಆರ್‌ಸಿಬಿ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ್ದ ಪೆರ್ರಿ ಅನುಪಸ್ಥಿತಿ ತಂಡವನ್ನು ಕಾಡಲಿದ್ದು, ನಾಯಕಿ ಸ್ಮೃತಿ ಮಂದನಾ ತಮ್ಮ ನಾಯಕತ್ವದ ಜಾವಾಬ್ದಾರಿಯನ್ನ ಹೇಗೆ ನಿಭಾಯಿಸಲಿದ್ದಾರೆ ಎಂಬುದನ್ನು ಕಾದುನೋಡಬೇಕಿದೆ.




ಮಾಧ್ಯಮ ಪ್ರಶಸ್ತಿ ಪ್ರದಾನ

ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಪತ್ರಿಕೋದ್ಯಮ ಹಾಗೂ ಮಾಧ್ಯಮ ಕ್ಷೇತ್ರದಲ್ಲಿ ಮಹತ್ವದ ಸೇವೆಯನ್ನು ಪರಿಗಣಿಸಿ ಹಿರಿಯ ಮಾಧ್ಯಮ ವೃತ್ತಿಪರರಾದ ಪ್ರವೀಣ್ ಪುಟ್ಟಣ್ಣ ಅವರಿಗೆ ಬೆಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಪ್ರತಿಷ್ಠಿತ ಪ್ರಶಸ್ತಿಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿಗಳ ಮಾಧ್ಯಮ ಕಾರ್ಯದರ್ಶಿ ಕೆ.ವಿ. ಪ್ರಭಾಕರ್ ಪ್ರದಾನ ಮಾಡಿದರು.

ಯುವತಿಗೆ ಮೆಸೇಜ್: ಇನ್ಸ್ಟಾ– ಫೇಸ್‌ಬುಕ್ ಹ್ಯಾಕ್ ಆಗಿದೆ ಎಂದ ಜಯನಗರ ಬಿಜೆಪಿ ಶಾಸಕ ಸಿ.ಕೆ ರಾಮಮೂರ್ತಿ!

ಬೆಂಗಳೂರು: ಫೇಸ್‌ಬುಕ್, ಇನ್ಸ್ಟಾಗ್ರಾಂ ಖಾತೆಯನ್ನು ಹ್ಯಾಕ್ ಮಾಡಿ ಯುವತಿಯೊಬ್ಬರಿಗೆ ಸಂದೇಶ ಕಳುಹಿಸಿರುವ ಕುರಿತು ಬಿಜೆಪಿ ಶಾಸಕ ಸಿ.ಕೆ ರಾಮಮೂರ್ತಿ ಸೈಬರ್ ಕ್ರೈಂಗೆ ದೂರು ನೀಡಿದ್ದಾರೆ.



ಜಯನಗರ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಹೆಸರಿನಲ್ಲಿ ನಕಲಿ ಫೇಸ್ ಬುಕ್, ಇನ್ಸ್ಟಾ ಖಾತೆ ಸೃಷ್ಟಿಸಿ ಹಲವರಿಗೆ ಮೆಸೇಜ್ ಕಳುಹಿಸಲಾಗಿದೆ. ಶಾಸಕ ಸಿ.ಕೆ. ರಾಮಮೂರ್ತಿ ಹೆಸರಿನಲ್ಲಿ ಮೆಸೇಜ್ ಹಿನ್ನೆಲೆಯಲ್ಲಿ ಬೆಂ.ದಕ್ಷಿಣ ಸೈಬರ್ ಪೊಲೀಸ್ ಠಾಣೆಗೆ ಶಾಸಕ ದೂರು ನೀಡಿದ್ದಾರೆ. ಅಲ್ಲದೇ ಮೊಬೈಲ್ ಹ್ಯಾಕ್ ಆಗಿದೆ ಎಂದು ಸಿ.ಕೆ ರಾಮೂರ್ತಿ ಸ್ಪಷ್ಟನೆ ನೀಡಿದ್ದಾರೆ.

ಶಾಸಕರ ಅಧಿಕೃತ ಇನ್ಸ್ಟಾ ಪೇಜ್‌ನಿಂದ ಯುವತಿಗೆ ಹಾಯ್, ಹಲೋ ಗುಡ್ ಮಾರ್ನಿಂಗ್, ಗುಡ್ ಈವ್ನಿಂಗ್, ರೀಲ್ಸ್ ಸೂಪರ್ ಅಂತಾ ಸಂದೇಶ ರವಾನಿಸಲಾಗಿದೆ. ಸದ್ಯ ಈ ಸಂದೇಶ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಹಿನ್ನೆಲೆ ಶಾಸಕ ಸಿ.ಕೆ ರಾಮಮೂರ್ತಿ ಸೈಬರ್ ಕ್ರೈಂಗೆ ದೂರು ನೀಡಿ ಹ್ಯಾಕರ್ಸ್ ಹಾಗೂ ನಕಲಿ ಖಾತೆ ಸೃಷ್ಟಿಸಿದವರ ವಿರುದ್ಧ ಕ್ರಮಕೈಗೊಳ್ಳುವಂತೆ ಸೂಚಿಸಿದ್ದಾರೆ.

ಅಭಿನಂದನೆ



ಭಾರತೀಯ ಜೀವ ವಿಮಾ ನಿಗಮ ಶಾರದಾದೇವಿ ನಗರ ಶಾಖೆಯ ಅಭಿವೃದ್ಧಿ ಅಧಿಕಾರಿ ವಿದೇಶ್ ಲೋಬೋ ಅವರು ಸೇವೆಯಿಂದ ಸ್ವಯಂ ನಿವೃತ್ತಿ ಪಡೆದ ಸಂದರ್ಭದಲ್ಲಿ ಅವರನ್ನು ಶಾಖಾ ವತಿಯಿಂದ ಗೌರವಿಸಲಾಯಿತು. ಈ ವೇಳೆ ಶಾಖಾಧಿಕಾರಿ ನಾಗರಾಜ ಮೂರ್ತಿ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಪಾರ್ಥ ಸಾರಥಿ, ಪ್ರಧಾನ ಕಾರ್ಯದರ್ಶಿ ಪಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ, ಮತ್ತು ಸಿಬ್ಬಂದಿ ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ.. ನಿನ್ನೆ ಕನಸಲ್ಲಿ ಏನಾಯ್ತು ಗೊತ್ತಾ...!
ಗಂಡ : ನಿನ್ನ ಕನಸು ನನಗೆ ಹೇಗೆ ಗೊತ್ತಾಗುತ್ತೆ! ಹೇಳು...
ಹೆಂಡತಿ : ಏನ್ ಗೊತ್ತಾ ನೀವು ನನಗೆ ಚಿನ್ನದ ಓಲೆ, ಬಳೆ, ಸರ ಎಲ್ಲಾ ಕೊಡಿಸಿದ್ರಿ..
ಗಂಡ : ಹಂಗಾದ್ರೆ ಜೋಪಾನವಾಗಿ ಇಟ್ಕೋ... ಮತ್ತೆ ಕೊಡಿಸೋಕಾಗಲ್ಲ!

ಮೈಸೂರು ಮಿತ್ರ

ಗುರುವಾರ, ಜನವರಿ 8, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಎಲ್ಲರನ್ನೂ ಮೆಚ್ಚಿಸುವಂತೆ ಬದುಕುವ ಕಲೆಯನ್ನು ನೀನು ರೂಢಿಸಿಕೊಂಡ ದಿನವೇ ನಿನ್ನ ಕೊನೆಯ ದಿನವಾಗುವುದು. – ಪಿ. ಲಂಕೇಶ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆಯೆಂಬ ಮರ ಮುರಿಯಬಾರದು, ಮನಸ್ಸೆಂಬ ಮಾರ್ಗ ಕತ್ತರಿಸಬಾರದು.

ನಿಮ್ಮ ಪತ್ರಗಳು

ಇದು ಕ್ರೆಡಿಟ್ ಐ ಸಂಸ್ಥೆಯ ಅತ್ಯುತ್ತಮ ಸೇವೆ



ಮಾನ್ಯರೆ,

ಮೈಸೂರಿನ ಉತ್ತನಹಳ್ಳಿ ಮಾರ್ಗದಲ್ಲಿನ 'ಪರಸನಾಯಕನ ಕೆರೆ'ಯಲ್ಲಿನ ಕಸದರಾಶಿ ತೆಗೆದು, ಹೂಳು ಎತ್ತಿ, ಹಂದಿಗಳ ಆವಾಸ ಸ್ಥಾನವಾಗಿದ್ದ ಕೆರೆಯನ್ನು ಡಾ. ಎಂ.ಪಿ. ವರ್ಷ, ಕ್ರೆಡಿಟ್ ಐ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿಯವರ ನೇತೃತ್ವದಲ್ಲಿ ಸ್ವಚ್ಛಗೊಳಿಸಿರುವ ಸುದ್ದಿ 'ಮೈಸೂರು ಮಿತ್ರ' (7.1.2026)ದಲ್ಲಿ ಓದಿ ತುಂಬಾ ಸಂತೋಷವಾಯಿತು. ಇದಕ್ಕೆ ಪೇಂಟ್ ತಯಾರಿಕಾ ದಿಗ್ಗಜ ಸಂಸ್ಥೆ ಏಶಿಯನ್ ಪೇಂಟ್ಸ್ ಅನುದಾನ ನೀಡಿರುವುದು ಅತ್ಯಂತ ಶ್ಲಾಘನೀಯ ವಿಷಯವಾಗಿದೆ. ಸರ್ಕಾರ ಯಾಕೆ ಈವರೆಗೆ ಈ ಕೆಲಸ ಮಾಡಲಿಲ್ಲ? ಬಹುಷಃ ಈ ವಿಷಯದಲ್ಲಿ ಗಳಿಕೆ ಸಾಧ್ಯವಿಲ್ಲ ಎಂಬ ಕಾರಣ ಇರಬಹುದು. ಸರ್ಕಾರ ಆಗಾಗ ಆ ತೆರಿಗೆ, ಈ ತೆರಿಗೆ ಎರಡು ಪಟ್ಟು, ಐದು ಪಟ್ಟು, ಹತ್ತು ಪಟ್ಟು ಹೆಚ್ಚಿಸಿ ಜನರ ರಕ್ತ ಹೀರುವುದು, ಮನಸ್ಸು ಆದಾಗಲೆಲ್ಲ ಶಾಸಕರ ಸಂಬಳ, ಸಾರಿಗೆ ವೆಚ್ಚ, 300 ರೂ.ಗೆ ಒಂದು ತಿಂಗಳ ಮೊಬೈಲ್ ಡೇಟಾ ಇದ್ದರೂ ರೂ. 3000ಕ್ಕೆ ಹೆಚ್ಚಿಸುವುದು ಇಷ್ಟೇ ತನ್ನ ಕೆಲಸ ಅಂತ ತಿಳಿದಿದೆ.

ಡಾ. ವರ್ಷ ಅವರು ಈವರೆಗೆ 140ಕ್ಕೂ ಅಧಿಕ ಕೆರೆಗಳ ಜೀರ್ಣೋದ್ಧಾರ ಮಾಡಿರುವುದು ಸರ್ಕಾರ ಇವರಿಗೆ ಯಾವುದಾದರೂ ರಾಜ್ಯ ಮಟ್ಟದ ಪ್ರಶಸ್ತಿ ನೀಡಲಿ. ಇದೇ ರೀತಿಯಾಗಿ ಬೋಗಾದಿ ಕೆರೆ, ಮೂಲ ಹೆಸರು ಮರಿಯಪ್ಪನ ಕೆರೆಯನ್ನೂ ಕೂಡ ಅಭಿವೃದ್ಧಿ ಪಡಿಸಿ ಸಸ್ಯ, ಪ್ರಾಣಿ, ಪಕ್ಷಿ, ಸಂಕುಲಕ್ಕೆ ಹಾಗೂ ಕಡೆಯದಾಗಿ ಸ್ವಾರ್ಥಿ ಮಾನವನಿಗೂ ಉಪಕಾರ ಮಾಡಲಿ ಎಂದು ಡಾ.ವರ್ಷ ಅವರಲ್ಲಿ ವಿನಂತಿ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ

ದ್ವೇಷ ಭಾಷಣ ಮಸೂದೆ ಬಗ್ಗೆ ಒಳ್ಳೆಯ ವಿಶ್ಲೇಷಣೆ

ಮಾನ್ಯರೆ,

ಜ.6ರ 'ಮೈಸೂರು ಮಿತ್ರ'ದಲ್ಲಿ ವಿಕ್ರಂ ಮುತ್ತಣ್ಣ ಅವರ 'ಬಿಚ್ಚುನುಡಿ'ಯಲ್ಲಿ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ದ್ವೇಷ ಭಾಷಣ ಮಸೂದೆಯ ಒಳಿತು–ಕೆಡಕುಗಳ ಬಗ್ಗೆ ತುಂಬಾ ಚೆನ್ನಾಗಿ ತಿಳಿಸಿದ್ದಾರೆ. ದ್ವೇಷ ಭಾಷಣ ನಿಷೇಧ ಕಾಯ್ದೆಯನ್ನು ವಿಧಾನ ಪರಿಷತ್ತಿನಲ್ಲಿ ಪ್ರಸ್ತುತಪಡಿಸಿದಾಗ ಅದನ್ನು ಸೋಲಿಸಲು ವಿರೋಧ ಪಕ್ಷಕ್ಕೆ ಸುವರ್ಣ ಅವಕಾಶ ಒದಗಿ ಬಂದಿತ್ತು. ಆದರೆ ಆ ವಿಧೇಯಕ ವಿಧಾನ ಪರಿಷತ್ತಿನಲ್ಲಿ ಧ್ವನಿಮತದಿಂದ ಅಂಗೀಕಾರವಾಗಿದ್ದು, ಬಿಜೆಪಿ ಹಾಗೂ ಜೆಡಿಎಸ್ ನೇರ ಸಹಾಯದಿಂದ ಅನ್ನದೇ ವಿಧಿಯಿಲ್ಲ. ಈ ಬೆಳವಣಿಗೆಯಿಂದ ವಿರೋಧ ಪಕ್ಷಗಳಲ್ಲಿ ಅದರಲ್ಲೂ ವಿಶೇಷವಾಗಿ ಬಿಜೆಪಿಯು ಕಾಂಗ್ರೆಸ್ ಪಕ್ಷದೊಂದಿಗೆ ಹೊಂದಾಣಿಕೆ (ಅಡ್ಜಸ್ಟ್‌ಮೆಂಟ್) ರಾಜಕೀಯ ಇದೇ ಎನ್ನುವುದು ಸಾಬೀತಾಗಿದೆ.

ಈ ಬಗ್ಗೆ ಕೇಂದ್ರ ಬಿಜೆಪಿ ಹೈಕಮಾಂಡ್ ಏನು ಹೇಳುತ್ತದೆ. ವಿರೋಧ ಪಕ್ಷಗಳು ಈ ಮಸೂದೆ ಕೆಳಮನೆಯಲ್ಲಿ ಸೋಲಿಸಿದ್ದರೆ ರಾಜ್ಯ ಸರ್ಕಾರ ಮತ್ತೊಮ್ಮೆ ಎರಡೂ ಸದನದಲ್ಲಿ ಈ ಕಾಯಿದೆ ಅಂಗೀಕಾರವಾಗುವಂತೆ ಮಾಡಬೇಕಿತ್ತು. ಇಲ್ಲವೇ ಸುಗ್ರೀವಾಜ್ಞೆ ಹೊರಡಿಸಬೇಕಿತ್ತು. ಆದರೆ ಮಸೂದೆ ಅಂಗೀಕಾರಕ್ಕೆ ಆಡಳಿತ ಪಕ್ಷಕ್ಕಿಂತ ವಿರೋಧ ಪಕ್ಷಕ್ಕೆ ಹೆಚ್ಚು ಆಸಕ್ತಿ ಕಂಡು ಬಂದದ್ದು ವಿಪರ್ಯಾಸ ಹಾಗೂ ನಮ್ಮ ರಾಜ್ಯದ ಜನತೆಯ ದುರ್ದೈವ.

ಇನ್ನೊಂದು ವಿಚಾರವೇನೆಂದರೆ ಇತ್ತೀಚೆಗೆ ಬೆಳಗಾವಿಯಲ್ಲಿ ಸಂಪನ್ನಗೊಂಡ ವಿಧಾನಸಭಾ ಅಧಿವೇಶನದ ಕೊನೇ ದಿನದ ಕೊನೆಯ ಅವಧಿಯಲ್ಲಿ ಸಭೆಗೆ ಕೋರಂ ಇಲ್ಲದ ಕಾರಣ ಸಭಾಧ್ಯಕ್ಷರು ವಿಧಾನಸಭಾ ಕಲಾಪ ನಡೆಸಲು ಕಾಯಬೇಕಾದ ಪರಿಸ್ಥಿತಿ ಬಂದೊದಗಿದ್ದು ವಿಪರ್ಯಾಸವೇ ಸರಿ.

ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಸದಸ್ಯರು ಅಂದು ಸಂಜೆ ಐದು ಗಂಟೆಯ ನಂತರ ಸಭಾ ಕಲಾಪ ಬಿಟ್ಟು ತಮ್ಮ ತಮ್ಮ ಊರಿನತ್ತ ಹಾಗೂ ಇತರೆ ಕಾರ್ಯಕ್ರಮಕ್ಕೆ ಧಾವಿಸಲು ಹೊರಟಿದ್ದು ಅವರು ತಮ್ಮ ಕರ್ತವ್ಯಕ್ಕೆ ಲೋಪ ಎಸಗಿದಂತಾಗಿದೆ. ಇದೊಂದು ಗಂಭೀರ ವಿಚಾರ ಹಾಗೂ ನಾಚಿಕೇಗೇಡಿನ ಸಂಗತಿಯಾಗಿದೆ. 224 ಸದಸ್ಯರಿರುವ ವಿಧಾನಸಭೆಯಲ್ಲಿ 23 ಸದಸ್ಯರು ಕಲಾಪದಲ್ಲಿ ಪಾಲ್ಗೊಳ್ಳದಂತಹ ಪರಿಸ್ಥಿತಿ ನಿರ್ಮಾಣವಾದದ್ದಾದರೂ ಹೇಗೆ? ತಮ್ಮ ಜವಾಬ್ದಾರಿಯನ್ನು ಮರೆತು ವಿಧಾನಸಭಾ ಸದಸ್ಯರು ನಡೆದುಕೊಂಡ ರೀತಿ ಸ್ವೀಕಾರಾರ್ಹವಲ್ಲ. ಬೇಡದ ಒಣ ಹರಟೆಗಳಿಗೆ ಸದನದ ತುಂಬಾ ತುಂಬಿಕೊಂಡು ಕಲಾಪ ವ್ಯರ್ಥ ಮಾಡುವ ವಿಧಾನಸಭಾ ಸದಸ್ಯರಿಗೂ ಏನಾದರೂ ನೈತಿಕತೆ ಇದ್ದರೆ ಮುಂದೆ ಹೀಗಾಗದಂತೆ ಎಚ್ಚರವಹಿಸುವುದು ಒಳ್ಳೆಯದು.

ಶಾಸನಸಭೆಯ ಎರಡು ಸದನದ ಸದಸ್ಯರು ನೈತಿಕತೆ ಹಾಗೂ ಪ್ರಾಮಾಣಿಕತೆ ಮತ್ತು ಜನತೆಯ ಮೇಲೆ ವಿಶ್ವಾಸವಿದ್ದರೆ ಇಂತಹ ಕೆಲಸಗಳನ್ನು ಇನ್ನು ಮುಂದೆ ಮಾಡಬೇಡಿ ಹಾಗೂ ತಮ್ಮ ಹಾಜರಾತಿಯನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಕಲಾಪದಲ್ಲಿ ಭಾಗವಹಿಸಿ ಜನತೆಯ ಋಣ ತೀರಿಸುವ ಕೆಲಸ ಮಾಡಿ.

ವರ್ಷದಲ್ಲಿ ಗರಿಷ್ಠ ಮೂರು ಅಧಿವೇಶನ ಕರೆಯುವ ಹಾಗೂ ಅಲ್ಲಿ ತಮ್ಮೆಲ್ಲ ಸಾಮರ್ಥ್ಯವನ್ನು, ಬುದ್ಧಿವಂತಿಕೆಯನ್ನು ತೋರಿಸಲು ಅವಕಾಶವಿರುವಾಗ ಆಡಳಿತ ಮತ್ತು ವಿರೋಧ ಪಕ್ಷಗಳು ಜನತೆಯ ಕಣ್ಣಿಗೆ ಮಣ್ಣೆರೆಚುವಂತಹ ಇಂಥ ಕೆಲಸಗಳನ್ನು ಮಾಡುವುದು ಎಷ್ಟು ಸರಿ. ಈ ಬಗ್ಗೆ ರಾಜ್ಯದ ಜನತೆಗೆ ಎಲ್ಲಾ ಪಕ್ಷದ ವಿಧಾನಸಭೆ ವಿಧಾನಸಭಾ ಪರಿಷತ್ ಸದಸ್ಯರು ಪಕ್ಷಾತೀತ ವಾಗಿ ಉತ್ತರದಾಯಿತ್ವವಾಗಿದ್ದಾರೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಬೆಳ್ಳಿ ಸಂಭ್ರಮದ ಬಹುರೂಪಿಯಲ್ಲಿ ಬಾಬಾ ಸಾಹೇಬ್

ಮಾನ್ಯರೆ,

ಮೈಸೂರಿನ ರಂಗಾಯಣದ ಬಹುರೂಪಿ ನಾಟಕೋತ್ಸವವು 2001 ರಲ್ಲಿ ಪ್ರಾರಂಭವಾಗಿ ಇಂದಿಗೆ 25 ವರ್ಷಗಳನ್ನು ಪೂರೈಸಿ ಬೆಳ್ಳಿ ಹಬ್ಬದ ಸಂಭ್ರಮಕ್ಕೆ ಸಜ್ಜಾದ ಈ ವರ್ಷದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಬಾಬಾ ಸಾಹೇಬ್ ಎಂಬ ಮುನ್ನುಡಿಯ ಆಶಯದೊಂದಿಗೆ ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು ಪ್ರತಿಪಾದಿಸಿದ ಸಮಾನತೆ, ಸ್ವಾಭಿಮಾನ, ಮತ್ತು ಸಹಬಾಳ್ವೆಯ ಭ್ರಾತೃತ್ವದ ಉದ್ದೇಶಗಳನ್ನು ಹೊಂದಿರುವ ನಾಟಕಗಳನ್ನು ಬಹುರೂಪಿಯಲ್ಲಿ ವಿಶೇಷವಾಗಿ ಆಯೋಜಿಸಿ ಹಾಗೂ ವಿವಿಧ ರೀತಿಯಲ್ಲಿ ವೈಶಿಷ್ಟ್ಯವಾಗಿ ಕಾರ್ಯಕ್ರಮಗಳನ್ನು ರೂಪಿಸಿ ರಂಗಾಯಣದ ಮಹತ್ವವನ್ನು ಸಾರುವ ಮೂಲಕ 2026ನೇ ವರ್ಷದ ಬಹುರೂಪಿ ಬಾಬಾ ಸಾಹೇಬ್ ಸಾಕ್ಷಿಯಾಗಿದೆ.


–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ.

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಪರೀಕ್ಷೆಗಳು... ಮೌಲ್ಯಮಾಪನ ಪರ್ವ



> ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಕಾಪಿ ಮಾಡಲು ಮಾತ್ರ ಹರಸಾಹಸ ಮಾಡುವುದಿಲ್ಲ. ಆಶ್ಚರ್ಯವೆನಿಸಬಹುದು ನಿಮಗೆ, ನನಗಂತೂ ಪರಮಾಶ್ಚರ್ಯ, ಈ ಮಕ್ಕಳು, ಪೆನ್ನು, ಪೆನ್ಸಿಲ್ಲು, ಸ್ಕೇಲು, ರಬ್ಬರ್ರು ಇಲ್ಲದೆ ಪರೀಕ್ಷಾ ಕೊಠಡಿಗೆ, 'ಠಾಕುಠೀಕಾಗಿ' ಬರುತ್ತಾರೆ! ಅದೇನು ಮರೆವೋ, ಉಪೇಕ್ಷೆಯೋ ಅಥವಾ ಸ್ನೇಹಿತರ ದಯಾಗುಣ, ಸಹಾಯಪರ ಗುಣಗಳ ಮೇಲಿನ ಅಚಲ ನಂಬಿಕೆಯೋ? ಒಟ್ಟಿನಲ್ಲಿ ತರದೆ ಬರುತ್ತಾರೆ. ಪರೀಕ್ಷೆ ಶುರುವಾದ ಮೇಲೆ ಇವರ ಕಲರವವೂ ಶುರು. ವಾಣಿಜ್ಯ ವಿಜ್ಞಾನ ಅಥವಾ ಕಲಾ ವಿಭಾಗ, ಎಲ್ಲೇ ಆಗಲಿ, ಟೇಬಲ್‌ಗಳು, ವಿವಿಧ ಚಿತ್ರಗಳು, ಡಯಾಗ್ರಮ್‌ಗಳನ್ನು ಅವರು ಬರೆಯಲೇ ಬೇಕು. ದೇಶಾವರಿ ನಗೆ ಬೀರುತ್ತಲೇ, 'ಮ್ಯಾಮ್' ಎಂದು ಹಲ್ಲು ಗಿಂಜುತ್ತಾ ಕೊಡುಕೊಳ್ಳುವಿಕೆಯನ್ನು ಮುಂದುವರೆಸುತ್ತಾರೆ. ನಮಗೆ ಇದೊಂದು ರೀತಿಯ ಧರ್ಮ ಸಂಕಟದ ಕ್ಷಣ.

ನಾವು ಈ ಶಿಕ್ಷಕ ವೃತ್ತಿಗೆ ಎಷ್ಟೇ ಪ್ರೀತಿ, ಆಸೆ, ಅತ್ಯುತ್ಸಾಹದಿಂದ ಬಂದಿದ್ದರೂ, ಈ ಪರಿವೀಕ್ಷಣಾ ಕಾರ್ಯ ಬಂದರೆ, 'ಕೆಲಸ ಬಿಟ್ಟುಬಿಡೋಣವೇ' ಎನ್ನಿಸುತ್ತದೆ. ಬೇಕಾದರೆ ನೀವೇ ವಿಚಾರಿಸಿ ನೋಡಿ, ನಿಮಗೆ ಗೊತ್ತಿರುವ ಶಿಕ್ಷಕರಲ್ಲಿ. ಇದರ ಜೊತೆಗೆ, ಮೌಲ್ಯಮಾಪನವನ್ನೂ ದ್ವೇಷಿಸುವ ಪಡೆಯೂ ಇದೆ. ಪರಿವೀಕ್ಷಣಾ ಕಾರ್ಯದಲ್ಲಿ ಮೂರು ಗಂಟೆ ಸುಮ್ಮನೆ ಗೊತ್ತು ಗುರಿಯಿಲ್ಲದೆ ಅತ್ತಿಂದಿತ್ತ ತಿರುಗಾಡುತ್ತಾ ಇರಬೇಕು ಎಂಬುದು ಒಂದಾದರೆ, ಆ ತರಲೆಗಳ ರಂಪಾಟವನ್ನು, ನಾಟಕಗಳನ್ನು, ಅಭಿನಯವನ್ನು ಸಹಿಸಿಕೊಳ್ಳಬೇಕಲ್ಲ ಎಂಬುದು ಮುಖ್ಯ ತೊಂದರೆ. ಆದರೆ, 'ಊರಿಗೆ ಬಂದ ವಳು ನೀರಿಗೆ ಬಾರಳೇ' ಎನ್ನುವಂತೆ, ಶಿಕ್ಷಕ ವೃತ್ತಿಗೆ ಬಂದಮೇಲೆ ಪರಿವೀಕ್ಷಣೆ, ಮೌಲ್ಯ ಮಾಪನಕ್ಕೆ ಇಲ್ಲವೆನ್ನಲುಂಟೆ? ಎಂಬುದು ಈ ಕ್ಷೇತ್ರದಲ್ಲಿ ಪ್ರಚಲಿತವಿರುವ ಗಾದೆ.

ಯಾರೂ ಏನೇ ಮೂಗು ಮುರಿದರೂ, ನನಗೆ ಇವೆರಡೂ ಕಾರ್ಯಗಳು ಪ್ರಿಯವೇ. ಉತ್ಕಟ ಪ್ರೀತಿ ಎಂದೇನಲ್ಲ ಮತ್ತೆ! ಬಿಡಲಾರದ ಸಂಕಟಕ್ಕೆ ಪ್ರೀತಿಸಲು ಶುರುಮಾಡಿದ್ದೇನೆ! ಅದರೂ ಇವೆರಡೂ ಕಾರ್ಯಗಳನ್ನು ಮಾಡುವಾಗ ಅನುಭವಕ್ಕೆ ಬರುವ ಮನೋರಂಜನೆ, ಕ್ರೋಧ, ಹಾಸ್ಯ, ಆತಂಕ... ಬೇಡ ನವರಸಗಳು ಎಂದುಬಿಡೋಣ, ಬೇರೆ ಕ್ಷೇತ್ರದವರಿಗೆ ಬೇಡಿಕೊಂಡರೂ ಸಿಗದ ಜೀವನಪಾಠಗಳು. ನಮ್ಮ ನಮ್ಮ ಸ್ವಭಾವದ ಮೇಲೆ ನಮ್ಮ ಮನರಂಜನೆಯ ಗ್ರಾಫ್‌ನ ಏರಿಳಿತವಿರುತ್ತದೆ. ನಿಮಗೆ ಬಿ.ಪಿ ಇದ್ದರೆ ಒಂದೆರಡು ಮಾತ್ರೆ ಹೆಚ್ಚಿಗೆ ಜೇಬಿನಲ್ಲಿರಬೇಕಾಗುತ್ತದೆ. ತುಂಬಾ 'ಸಿಹಿ'ಯಾದ ವ್ಯಕ್ತಿತ್ವದವರಾಗಿದ್ದರೆ ಚಾಕಲೇಟುಗಳು ಮಾತ್ರೆಗಳು ಬೇಕಾಗುತ್ತವೆ, ಇನ್ಸುಲಿನ್ ಏನೂ ಬೇಡಪ್ಪಾ! ನಮ್ಮ ವಿದ್ಯಾರ್ಥಿಗಳನ್ನು ಹಾಗೆ ಅವಮಾನಿಸಬೇಡಿ. ಅವರೂ ಮಾನವರೇ...

ಮೊದಲು ಮೌಲ್ಯಮಾಪನದ ಬಗ್ಗೆಯೇ ಹೇಳುತ್ತೇನೆ. ವಾರ್ಷಿಕ ಪದ್ಧತಿ ಇದ್ದಾಗ, ವರ್ಷಕ್ಕೆ ಒಂದು ಬಾರಿ ಮಾತ್ರ ಮೌಲ್ಯಮಾಪನವಿರುತ್ತಿತ್ತು. ಈಗ ಸೆಮಿಸ್ಟರ್ ಪದ್ಧತಿ ಜಾರಿಯಾದಾಗಿನಿಂದ ವರ್ಷಕ್ಕೆ ಎರಡು ಬಾರಿ ಮೌಲ್ಯ ಮಾಪನದ ತಾಪ ತಟ್ಟುತ್ತದೆ. ಮೌಲ್ಯಮಾಪನವೆಂದರೆ ಏಕೆ ನಮಗೆಲ್ಲಾ ಭಯವೆಂದಿರಾ? ಏಕೆಂದರೆ, ಇದು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೂಲಕ, ಇಡೀ ಶಿಕ್ಷಕ ಸಮುದಾಯದ ಮೌಲ್ಯಮಾಪನವಾಗಿರುತ್ತದೆ! ರ್‍ಯಾಂಕು, ಡಿಸ್ಟಿಂಕ್ಷನ್, ಫಸ್ಟ್, ಸೆಕೆಂಡ್, ಥರ್ಡ್ ಕ್ಲಾಸ್‌ಗಳನ್ನು ವಿದ್ಯಾರ್ಥಿಗಳು ನಮ್ಮಿಂದ ತೆಗೆದುಕೊಳ್ಳುವುದಲ್ಲ, ಈ ಮೌಲ್ಯಮಾಪನದ ಸಮಯದಲ್ಲಿ ನಮಗೆ ಆಯ್ಕೆಗಳನ್ನು ನೀಡುತ್ತಾರೇನೋ ಎನಿಸುತ್ತದೆ! ಅವರ ಉತ್ತರ ಪತ್ರಿಕೆಗಳನ್ನು ನೋಡಿ, ನಾವು ಎಲ್ಲಿ ಸಲ್ಲುತ್ತೇವೆ ಎಂಬುದನ್ನು ನಾವೇ ನಿರ್ಧರಿಸಿಕೊಂಡು, ಮುಂದಿನ ಸೆಮಿಸ್ಟರ್‌ನ ಹೊತ್ತಿಗೆ ಇಂಪ್ರೂವೈಸೇಷನ್‌ಗೆ ತಯಾರಾಗಬೇಕು!

ಮೌಲ್ಯಮಾಪನ ಮಾಡುವಾಗ ವಿದ್ಯಾರ್ಥಿಯ ಹೆಸರು, ತರಗತಿ, ಸೆಕ್ಷನ್ ಒಂದೂ ನಮಗೆ ತಿಳಿಯುವುದಿಲ್ಲ. ಆದರೂ ಅವರ ಒಗ್ಗಟ್ಟು ಎಷ್ಟರ ಮಟ್ಟಿಗೆ ಎಂದರೆ, ಎಲ್ಲರೂ ಒಂದೇ ರೀತಿಯ ತಪ್ಪುಗಳನ್ನು, ಅಭಾಸಗಳನ್ನು ಮಾಡಿರುತ್ತಾರೆ. ಇವರು ಮಾಡುವ ತಪ್ಪುಗಳು ನಗೆ ತರಿಸುತ್ತವೆ, ಸಿಟ್ಟು ಬರಿಸುತ್ತವೆ, ಅಸಹ್ಯವೆನಿಸುತ್ತವೆ, ಆಯೋಮಯವೆನಿಸುತ್ತವೆ. ಜೊತೆಗೆ, ಇವೇ ತಪ್ಪುಗಳನ್ನು ಇವರು ವೃತ್ತಿ ಹಿಡಿದಾಗ ಮಾಡಿದರೆ ದೇಶದ ಭವಿಷ್ಯದ ಕಥೆಯೇನು ಎಂಬ ಭಯಂಕರ ಚಿಂತನೆಗೆ ದೂಡುತ್ತವೆ. ಇತಿಹಾಸದಲ್ಲಿ ಸಾಮ್ರಾಜ್ಯಗಳ ಸಂಕರ ಮಾಡುತ್ತಾರೆ, ಇಸವಿಗಳ ಇತ್ಯರ್ಥವನ್ನೂ ತಾವೇ ಮಾಡುತ್ತಾರೆ. ರಾಜರನ್ನು ರಾಜಧಾನಿಗಳನ್ನು ತಮ್ಮ ಅಭೀಷ್ಟದಂತೆ ಬದಲಾಯಿಸುವ ಹಕ್ಕನ್ನೂ ಮನಃಪೂರ್ವಕವಾಗಿ ಚಲಾಯಿಸುತ್ತಾರೆ. ವಿಜ್ಞಾನ ವಿಷಯಗಳಲ್ಲಿಯೂ ಇವರ ವಿದ್ವತ್ತು ವಿಧ್ವಂಸಕವೇ. ಇವರು ಮಾಡುವ ಬದಲಾವಣೆಗಳು ಹೊಸ ಜಗತ್ತಿನ ಉದಯಕ್ಕೇ ಇಂಬನ್ನು ನೀಡುತ್ತವೆ. ಯಾರದೋ ಆವಿಷ್ಕಾರವನ್ನು ಮತ್ತಾರದೋ ಖಾತೆಗೆ ಸೇರಿಸಿ ಅನ್ಯಾಯ ಮಾಡುತ್ತಾರೆ. ಪಾಪ ಆ ವಿಜ್ಞಾನಿಗಳು. ಸದ್ಯ! ಅವರ ಆತ್ಮಗಳ ಮೊರೆ, ನಮಗೆ ಕೇಳುವುದಿಲ್ಲ. ರಾಜ್ಯ ಶಾಸ್ತ್ರದ ವಿಷಯ ಬಂದಾಗಲೂ ಅಷ್ಟೇ, ಇವರ ಇಷ್ಟದ ವಯೋಮಿತಿಯವರೇ ಮಂತ್ರಿಗಳು–ತಂತ್ರಿಗಳಾಗಬೇಕು, ಯಾವ ವಿಧಾನಸಭೆ–ರಾಜ್ಯಸಭೆಗಳ ಸದಸ್ಯರ ಸಂಖ್ಯೆ ಎಷ್ಟಿರಬೇಕು ಎನ್ನುವುದು ಇವರ ಇಚ್ಛೆ, ಸಂವಿಧಾನದ ತಿದ್ದುಪಡಿ, ಬದಲಾವಣೆಗಳಿಗೆ ಇವರ ಸಾಮ್ರಾಜ್ಯದಲ್ಲಿ ಯಾವ ಮಂಡನೆ–ಮಸೂದೆ–ಚರ್ಚೆಗಳು ಬೇಕಿಲ್ಲ! ಏನೆಂದು ಹೇಳುವುದು ಇವರ ಆಟಾಟೋಪ... ಲೆಕ್ಕಗಳಂತೂ ಬಿಡಿ, ಕೇಳುವುದಕ್ಕೂ ಹೇಳುವುದಕ್ಕೂ ಇಲ್ಲಿ ಜಾಗವಿಲ್ಲ!

ವಿಷಯಗಳ ಕಥೆ ಇದಾದರೆ, ನಮ್ಮ ಭಾಷಾ ವಿಭಾಗದಲ್ಲಂತೂ ತಲೆತಿರುಗುವ ಹಾಗೆ ಆಗುತ್ತದೆ. ಅ,ಆ,ಇ,ಈ ಯಿಂದ ಇವರಿಗೆ ಮತ್ತೆ ಕಲಿಸಬೇಕೇನೋ ಎಂದು ಭಯ ಕಾಡುತ್ತದೆ. ಕಾಗುಣಿತ, ಒತ್ತಕ್ಷರ, ದೀರ್ಘ, ಇಳೀ, ಅಲ್ಪ ಪ್ರಾಣ,ಮಹಾಪ್ರಾಣ, ಯಾವುದಕ್ಕೂ ಇವರು ಕ್ಯಾರೇ ಎನ್ನುವುದಿಲ್ಲ. ಇತ್ತೀಚೆಗೆ ನವೆಂಬರ್ ಸಮಯದಲ್ಲಿ ಮುನ್ನೆಲೆಗೆ ಬಂದ ಸರಳಗನ್ನಡ, ತಿಳಿಗನ್ನಡಗಳ ಅಳವಡಿಕೆಯನ್ನು ನಮ್ಮ ವಿದ್ಯಾರ್ಥಿಗಳು, ಎಂದೋ, ತಲತಲಾಂತರದಿಂದ ಮಾಡಿಕೊಂಡು ಬಿಟ್ಟಿದ್ದಾರೆ. ಹಳೆಗನ್ನಡ ಪದ್ಧತಿಯನ್ನು ಪ್ರೀತಿಸುವ ಇವರು, ಯಾವ ಅಲ್ಪ ವಿರಾಮ, ವಿರಾಮ, ಪ್ರಶ್ನಾರ್ಥಕ, ಆಶ್ಚರ್ಯ ಸೂಚಕ ಚಿನ್ಹೆಗಳ ಹಂಗಿಗೆ ಬೀಳುವವರಲ್ಲ! ಅವುಗಳ ಗೊಡವೆಯೇ ಬೇಕಿಲ್ಲ ಇವರಿಗೆ. ಭಾವನೆಗಳು ಹೃದಯದಿಂದ ಬರಬೇಕು, ಅವಕ್ಕೆ ಚಿನ್ಹೆಗಳ ಮುದ್ರೆ ಬೇಕಿಲ್ಲ ಎಂದು ಗಟ್ಟಿಯಾಗಿ ನಂಬಿರುವವರು!

ನಾನು ಇಂಗ್ಲೀಷ್ ಕಲಿಸುವವಳಾಗಿರುವುದರಿಂದ, ನನ್ನ ಒಂದಷ್ಟು ಭ್ರಮೆಗಳು ಚೂರು ಚೂರಾಯಿತು. ನಮಗೆಲ್ಲಾ ಒಂದು ತಪ್ಪು ಕಲ್ಪನೆಯಿದೆ. ಈಗಿನ ಮಕ್ಕಳಿಗೆ ಕನ್ನಡದ ಮೇಲೆ ಒಲವಿಲ್ಲ, ಇಂಗ್ಲೀಷ್ ಅಂದರೆ ಪ್ರಾಣ, ಅದನ್ನು ಮಾತ್ರ ಕಲಿಯುತ್ತಾರೆ ಎಂದು. ಇದು ಅಪ್ಪಟ ಸುಳ್ಳು. ಈಗಿನ ಕಾಲದ ಬಹುತೇಕ ಮಕ್ಕಳಿಗೆ ಯಾವ ಭಾಷೆಯ ಮೇಲೂ ಹಿಡಿತವಿಲ್ಲ, ಪ್ರಭುತ್ವವಿಲ್ಲ. ಮಾತೃಭಾಷೆ ಕನ್ನಡದಲ್ಲಿ ಎಷ್ಟು ತಪ್ಪುಗಳನ್ನು ಮಾಡುತ್ತಾರೋ, ಅಷ್ಟೇ ಪ್ರಮಾಣದ ತಪ್ಪುಗಳನ್ನು ಇಂಗ್ಲೀಷ್‌ನಲ್ಲಿಯೂ ಮಾಡುತ್ತಾರೆ. ಹೊರತಾದವರಿದ್ದಾರೆ, ಅದು ಬೇರೆ. ನಾನು ನೋಡಿದ ಮಟ್ಟಿಗೆ ಈಗಿನ ವಿದ್ಯಾರ್ಥಿಗಳಿಗೆ ಭಾಷಾ ಕಲಿಕೆಯ ಮೇಲೆ ಇನ್ನಿಲ್ಲದ ಅಸಡ್ಡೆ. ಸಂತೆಯ ಹೊತ್ತಿಗೆ ಮೂರು ಮೊಳ ಎನ್ನುವ ಹಾಗೆ, ಪರೀಕ್ಷೆಯ ಸಮಯಕ್ಕೆ ಏನೋ ಒಂದಷ್ಟು ಓದಿಕೊಂಡು ಬಂದು ಬರೆದು, ಅಲ್ಲಿಯೇ ಮರೆತೂ ಬಿಡುತ್ತಾರೆ. ಇಂಗ್ಲಿಷ್‌ನಲ್ಲಿ ಆರ್ಟಿಕಲ್ಸ್, ಪ್ರಿಪೊಸಿಷನ್ಸ್, ವರ್ಬ್ಸ್, ಟೆನ್ಸ್‌ಗಳನ್ನು ಆಯಾ ತರಗತಿಯಲ್ಲಿ ಅಭ್ಯಾಸ ಮಾಡಿ ಅಲ್ಲಿಯೇ ಮರೆತು ಮುಂದೆ ಸಾಗುತ್ತಾರೆ. ಭೂತದ ಹೊರೆ ಬೇಕಿಲ್ಲ ಇವರಿಗೆ! ಪತ್ರಲೇಖನದ ವಿಷಯದಲ್ಲೂ ಅದೇ. ಹಾಗಾಗಿಯೇ ಈಗಿನ ಮಕ್ಕಳಿಗೆ ನೆಟ್ಟಗೆ ಒಂದು ರಜಾ ಅರ್ಜಿಯನ್ನೂ ಬರೆಯಲು ಬರುವುದಿಲ್ಲ. ಹೇಗಿರಬಹುದು ಅವರ ಉತ್ತರ ಪತ್ರಿಕೆಗಳು, ಎಂಬುದನ್ನು ನೀವೇ ಊಹಿಸಿಕೊಳ್ಳಿ. ಹಾಗೆಯೇ ಇಂಗ್ಲಿಷ್ ಉತ್ತರ ಪತ್ರಿಕೆಗಳಲ್ಲಿ ನಿಮಗೆ ಉತ್ತರ ಇಂಗ್ಲಿಷ್ ಲಿಪಿಯಲ್ಲಿಯೇ ಇರುತ್ತದೆ, ಆದರೆ ಭಾಷೆ ಕನ್ನಡ! ಇಂತಹ ಬುದ್ಧಿವಂತ ಮಹಾಶಯರೂ ಇರುತ್ತಾರೆ. ಇದು ನಾನು ಕೇಳಿದ್ದಲ್ಲ, ಕಂಡದ್ದು! ಇವೆಲ್ಲದರ ದರ್ಶನ ನಮಗೆ ಮೌಲ್ಯಮಾಪನ ಸಮಯದಲ್ಲಿ ಆಗುತ್ತದೆ.

ಈಗ ಹೇಳಿ, ಇಷ್ಟೆಲ್ಲಾ ಭೀಕರ ಪ್ರಮಾದಗಳನ್ನು ನೋಡಿದಮೇಲೆ, ನಮ್ಮ ಮೇಲೆ ನಮಗೇ ಅಪನಂಬಿಕೆ ಬರುವುದು ಅಸಾಧ್ಯವೇ? ನಾವೇ ಮೌಲ್ಯಮಾಪನಕ್ಕೆ ಒಳಗಾಗುತ್ತಿದ್ದೇವೆ ಎಂಬ ಅನುಮಾನ ಬರುವುದು ಸಹಜವಲ್ಲವೇ? ಮಕ್ಕಳಿಗೆ ಏನು ಕಲಿಸುತ್ತಿದ್ದೇವೆ ಅಥವಾ ನಿಜವಾಗಲೂ ಕಲಿಸುತ್ತಿದ್ದೇವೆಯೇ ಎಂಬ ಅನುಮಾನ ಬರುವುದು ಸಹಜವಲ್ಲವೇ?

ಇವು ಬರವಣಿಗೆಯ ಕುರಿತಾದರೆ, ಏನೂ ಬರೆಯದ ಮಹಾಶಯರು ತಮ್ಮ ಕಷ್ಟಪರಂಪರೆಯನ್ನು ಚಂದವಾಗಿ ಚಿತ್ರಿಸಿರುತ್ತಾರೆ. ಕೆಲವರು ಹಣದ ನೋಟುಗಳನ್ನು ಲಗತ್ತಿಸಿರುವ ಇತಿಹಾಸವೂ ಇದೆ! ಪ್ರಯೋಜನಕ್ಕೆ ಬಾರದ ಈ ತಂತ್ರಗಳ ಆವಿಷ್ಕಾರಕ್ಕೆ ತಗಲುವ ಸಮಯ, ಬುದ್ಧಿವಂತಿಕೆಯನ್ನು ಓದುವುದಕ್ಕೆ ಬಳಸಿದ್ದರೆ? ಎಂದು ನಕ್ಕು ಸುಮ್ಮನಾಗುವ ಸರದಿ ನಮ್ಮದು. ಹಾಗಾಗಿದ್ದಲ್ಲಿ ಈ ಲೇಖನವೆಲ್ಲಿ ಇರುತ್ತಿತ್ತು?! ಪಾಸಿಂಗ್ ಮಾರ್ಕ್ಸ್‌ನ ಸನಿಹಕ್ಕೆ ಬಂದು ಫೇಲ್ ಆಗುವವರನ್ನು ಕಂಡರೆ ಬೇಸರವೇನೋ ಆಗುತ್ತದೆ. ಆದರೆ ಅವರ ಕರ್ತವ್ಯವನ್ನು ಅವರು ಸರಿಯಾಗಿ ಮಾಡಿಲ್ಲದ್ದಕ್ಕೆ ಶಿಕ್ಷಿಸುವ ಅಥವಾ ಸರಿಯಾದ ಫಲ ನೀಡುವ ಜವಾಬ್ದಾರಿ ಮತ್ತು ಹೊಣೆ ನಮ್ಮದು ಎಂದುಕೊಳ್ಳುತ್ತಾ ಮುಂದಿನ ಉತ್ತರ ಪತ್ರಿಕೆಯನ್ನು ಕೈಗೆತ್ತಿಕೊಳ್ಳುತ್ತೇವೆ.

ಪರೀಕ್ಷಾ ಹಾಲ್‌ನಲ್ಲಿ ವಿಶ್ವರೂಪ ದರ್ಶನ: ಮೌಲ್ಯಮಾಪನದ ಮುಖ್ಯಾಂಶಗಳು ಇದಾದರೆ, ಪರೀಕ್ಷಾ ಕೊಠಡಿಯಲ್ಲಿ ಆಗುವ ವಿಶ್ವರೂಪ ದರ್ಶನವೇ ಬೇರೆ. ತಮ್ಮ ವಿದ್ಯಾರ್ಥಿ ಜೀವನದ ಶುಭಾರಂಭವಾದಾಗಲೇ ವಿದ್ಯಾರ್ಥಿಗಳೆಲ್ಲರಿಗೂ, ಪರೀಕ್ಷೆಯೊಂದಿಗೆ ಒಂದು ಅವಿನಾಭಾವ ಸಂಬಂಧ ಬೆಳೆದುಬಿಡುತ್ತದೆ. ಅವರಿಗಿಷ್ಟ ಇದೆಯೋ ಇಲ್ಲವೋ ಪರೀಕ್ಷೆಗಳನ್ನು ಅವರು ಎದುರಿಸಲೇ ಬೇಕು, ಅದು ಅವರಿಗೂ ಗೊತ್ತು. ಆದರೂ ನಮ್ಮ ವಿದ್ಯಾರ್ಥಿಗಳಿಗೆ ಪರೀಕ್ಷೆ ಎಂದರೆ ತೀರಲಾರದ ದ್ವೇಷ, ಹೇಳತೀರದ ಭಯ, ಅದುಮಿಡಲಾಗದ ಆತಂಕ. ಪರೀಕ್ಷೆಯೆಂದು, ಖುಷಿಯಿಂದ ಓದಿಕೊಳ್ಳುತ್ತಾ ತಯಾರಾಗುವ ಒಂದು ಗುಂಪು ಇದ್ದರೆ, ಯಾಕಾದರೂ ಪರೀಕ್ಷೆ ಬರುತ್ತದೋ ಎಂದು ಅಳುತ್ತಾ, ಹಳಿಯುತ್ತಾ ತಯಾರಾಗುವವರು ಒಂದುಕಡೆ. ಇನ್ನೂ ಒಂದು ಗುಂಪಿರುತ್ತದೆ, ಇವರಿಗೆ ಪರೀಕ್ಷೆಯೆಂದರೆ ಭಯ, ಆತಂಕ, ಖುಷಿ, ಕುತೂಹಲ ಏನೂ ಇರುವುದಿಲ್ಲ, ಓದುವ ಮನಸ್ಸೂ ಇರುವುದಿಲ್ಲ. ಉಡಾಫೆಯ ಪ್ರವೃತ್ತಿಯವರು. ಹೇಗೋ ತೇರ್ಗಡೆಯಾಗಬೇಕು, ಅಷ್ಟೇ. ಇವರುಗಳೇ ಪರೀಕ್ಷಾ ಕೊಠಡಿಯಲ್ಲಿ ಅತಿ ಹೆಚ್ಚಿನ ತೊಂದರೆ ಕೊಡುವ ಮಂದಿ.

ಮೊದಲನೆಯ ವರ್ಗದ ಮಕ್ಕಳು (ನಾನು ಇದೇ ವರ್ಗದವಳು!) ಗಂಭೀರವಾಗಿ ಅತ್ತಿತ್ತ ನೋಡದೆ, ಪ್ರಶ್ನೆ ಪತ್ರಿಕೆ ಸಿಕ್ಕ ತಕ್ಷಣ ಬರೆಯಲು ತೊಡಗುತ್ತಾರೆ. ತಮಗೆ ತಿಳಿದದ್ದನ್ನು ಬರೆದು ಮುಗಿಸುವವರೆಗೂ ಇವರು ತಲೆ ಎತ್ತುವುದಿಲ್ಲ. ಎರಡನೆಯ ವರ್ಗದವರು ತಮಗೆ ತಿಳಿದಷ್ಟು ಬರೆದು ಆದ ಮೇಲೆ, ತಮ್ಮ ಮರ್ಕಟಬುದ್ಧಿಯನ್ನು ತೋರತೊಡಗುತ್ತಾರೆ. ಅಕ್ಕ–ಪಕ್ಕದವರನ್ನು ಕೇಳುವುದು, ಪ್ರಶ್ನೆಗಳ ಸಂಖ್ಯೆಯನ್ನು ಸನ್ನೆಗಳ ಮೂಲಕ ದೂರದಲ್ಲಿರುವ ಸಹಪಾಠಿಗೆ ತಿಳಿಸಲೆತ್ನಿಸುತ್ತಾ ಉತ್ತರವನ್ನು ಶೋಧಿಸುವುದರಲ್ಲಿ ತೊಡಗುತ್ತಾರೆ. ಎಲ್ಲಾ ರೀತಿಯ ನಾನ್ ವರ್ಬಲ್ ಸಂವಹನಾ ಕೌಶಲಗಳನ್ನು ನಾವು ಪರೀಕ್ಷಾ ಕೊಠಡಿಯಲ್ಲಿ ನೋಡಬಹುದು! ಅಚಾನಕ್ಕಾಗಿ ಪರೀಕ್ಷಾ ಕೊಠಡಿಯಲ್ಲಿ ಇವರ ಸರ್ವ ಇಂದ್ರಿಯಗಳೂ ಚುರುಕಾಗಿಬಿಡುತ್ತವೆ. ಸೆಮಿಸ್ಟರ್ ಪೂರ್ತಿ ಓದಿಯೂ ಅರ್ಥವಾಗದ ವಿಷಯಗಳು ಆ ಕೊನೆಯ ನಿಮಿಷಗಳಲ್ಲಿ ಸಹಪಾಠಿಯ ಪಿಸುಮಾತುಗಳಲ್ಲಿ ಥಟ್ ಅಂತಾ ಅರ್ಥವಾಗಿ ಬಿಡುತ್ತದೆ. ಅಂದರೆ, ಅವರ ಸಾಮರ್ಥ್ಯ ಒರೆ ಹಚ್ಚುವಲ್ಲಿ ನಮ್ಮ ಕಡೆಯಿಂದಲೇ ತಪ್ಪಾಗಿರಬೇಕು! ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿಯುವಂತೆ ತಮ್ಮ ಕೆಲಸವನ್ನು ಯಾರೂ ಗಮನಿಸುತ್ತಿಲ್ಲವೆಂಬ ಧೈರ್ಯದಲ್ಲಿರುವ ಇವರು, ನಾವು ಒಂದು ಕೂಗು ಹಾಕಿದರೆ ಥಟ್ಟನೆ ನಮ್ಮ ಮುಖ ನೋಡುತ್ತಾರೆ! ಕುಂಬಳಕಾಯಿ ಕಳ್ಳರಂತೆ! ತೀರಾ ಭಂಡರು, 'ಮೇಡಂ, ಇದೊಂದಕ್ಕೆ ಉತ್ತರ ಕೇಳಿ ಬಿಡುತ್ತೇನೆ ಅಷ್ಟೇ.' ಎಂದು ನಮ್ಮನ್ನೇ ಪುಸಲಾಯಿಸಲು ನೋಡುತ್ತಾರೆ. ಎರಡನೆಯ ವರ್ಗದ ಇವರು ಕೊನೆಯ ಕ್ಷಣದವರೆಗೂ ಆಶಾವಾದಿಗಳಾಗಿ ಉತ್ತರ ಪತ್ರಿಕೆ ತುಂಬಿಸುವ ದಾರಿಗಳನ್ನು ಹುಡುಕುತ್ತಿರುತ್ತಾರೆ, ನಾವುಗಳು ಇವರ ಪ್ರಯತ್ನಗಳಿಗೆ ಕಲ್ಲು ಹಾಕುತ್ತಾ ವಿಜಯದ ನಗೆ ಬೀರುತ್ತಾ ಕೊಠಡಿಯ ತುಂಬಾ ಓಡಾಡುತ್ತಿರುತ್ತೇವೆ!


ಮೂರನೆಯ ವರ್ಗದ ವಿದ್ಯಾರ್ಥಿಗಳು, ನೈತಿಕವಾಗಿ ತೀರಾ ಕೆಳಮಟ್ಟದಲ್ಲಿರುತ್ತಾರೆ. ಮೊದಲೆರಡು ವರ್ಗದವರ ಹಾಗೆ ಇವರಿಗೆ ಭಯ–ಭಕ್ತಿ, ಹಿಂಜರಿಕೆ ಯಾವುದೂ ಇರುವುದಿಲ್ಲ. ಎಲ್ಲ ರೀತಿಯ ದುರ್ವರ್ತನೆಗಳಿಗೆ ತಯಾರಾಗಿಯೇ ಬಂದಿರುತ್ತಾರೆ. ಉತ್ತರ ಬರೆದಿರುವ ಚೀಟಿಗಳನ್ನು, ಸಾಧ್ಯವಾದಲ್ಲೆಲ್ಲಾ ಅಡಗಿಸಿಕೊಂಡು ಬಂದಿರುತ್ತಾರೆ, ಜೇಬುಗಳು, ಪರ್ಸು, ಜ್ಯಾಮಿಟ್ರಿ ಬಾಕ್ಸು... ಹೀಗೆ. ಸಿಕ್ಕಿ ಬಿದ್ದರೂ ಇವರಿಗೆ ನಾಚಿಕೆಯೆನಿಸುವುದಿಲ್ಲ, ಭಯ ಕಾಡುವುದಿಲ್ಲ. ಈಗಂತೂ ಸ್ಮಾರ್ಟ್ ಯುಗವಾಗಿರುವುದರಿಂದ, ಫೋನ್, ವಾಚುಗಳನ್ನೂ ನಾವು ಗಮನಿಸಬೇಕಾಗುತ್ತದೆ. ಆದರೂ ಸಾವಿರಾರು ಮಕ್ಕಳನ್ನು ನೋಡಿರುವ ಅನುಭವವಿರುವುದರಿಂದ, ಸಾಮಾನ್ಯವಾಗಿ ಕಂಡುಹಿಡಿದು ಇವರುಗಳ ಯೋಜನೆಯನ್ನು ವಿಫಲವಾಗಿಸುತ್ತೇವೆ, ನಾವು ರಂಗೋಲಿಯ ಕೆಳಗೆ ತೂರುವುದನ್ನು ಕಲಿತಿದ್ದೇವೆ! ಗಂಡು ಹುಡುಗರು ಮಾತ್ರ ಇಂತಹ ಕೆಲಸಗಳನ್ನು ಮಾಡುತ್ತಾರೆ ಎಂಬ ನನ್ನ ಮತ್ತೊಂದು ಭ್ರಮೆಯೂ ಇಷ್ಟು ವರ್ಷಗಳ ಅನುಭವದಲ್ಲಿ ಹರಿದಿದೆ! ಹಾಗೆಯೇ, ಸ್ನೇಹಿತರಿಗೆ ಉತ್ತರ ಹೇಳಿಕೊಡಲು ತುಡಿಯುವ 'ಆದರ್ಶ ಸ್ನೇಹಿತ'ರೂ ಅಲ್ಲದೆ ಸ್ನೇಹ–ಪ್ರೀತಿ ಎಲ್ಲಾ ಪರೀಕ್ಷೆಗೆ ಮುಂಚೆ ಮತ್ತು ಮುಗಿದ ನಂತರ ಎಂದು ತಟಸ್ಥರಾಗಿರುವವರೂ ಇರುತ್ತಾರೆ.

ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಕಾಪಿ ಮಾಡಲು ಮಾತ್ರ ಹರಸಾಹಸ ಮಾಡುವುದಿಲ್ಲ. ಆಶ್ಚರ್ಯವೆನಿಸಬಹುದು ನಿಮಗೆ, ನನಗಂತೂ ಪರಮಾಶ್ಚರ್ಯ, ಈ ಮಕ್ಕಳು, ಪೆನ್ನು, ಪೆನ್ಸಿಲ್ಲು, ಸ್ಕೇಲು, ರಬ್ಬರ್ರು ಇಲ್ಲದೆ ಪರೀಕ್ಷಾ ಕೊಠಡಿಗೆ, 'ಠಾಕುಠೀಕಾಗಿ' ಬರುತ್ತಾರೆ! ಅದೇನು ಮರೆವೋ, ಉಪೇಕ್ಷೆಯೋ ಅಥವಾ ಸ್ನೇಹಿತರ ದಯಾಗುಣ, ಸಹಾಯಪರ ಗುಣಗಳ ಮೇಲಿನ ಅಚಲ ನಂಬಿಕೆಯೋ? ಒಟ್ಟಿನಲ್ಲಿ ತರದೆ ಬರುತ್ತಾರೆ. ಪರೀಕ್ಷೆ ಶುರುವಾದ ಮೇಲೆ ಇವರ ಕಲರವವೂ ಶುರು. ವಾಣಿಜ್ಯ ವಿಜ್ಞಾನ ಅಥವಾ ಕಲಾ ವಿಭಾಗ, ಎಲ್ಲೇ ಆಗಲಿ, ಟೇಬಲ್‌ಗಳು, ವಿವಿಧ ಚಿತ್ರಗಳು, ಡಯಾಗ್ರಮ್‌ಗಳನ್ನು ಅವರು ಬರೆಯಲೇ ಬೇಕು. ದೇಶಾವರಿ ನಗೆ ಬೀರುತ್ತಲೇ, 'ಮ್ಯಾಮ್' ಎಂದು ಹಲ್ಲು ಗಿಂಜುತ್ತಾ ಕೊಡುಕೊಳ್ಳುವಿಕೆಯನ್ನು ಮುಂದುವರೆಸುತ್ತಾರೆ. ನಮಗೆ ಇದೊಂದು ರೀತಿಯ ಧರ್ಮ ಸಂಕಟದ ಕ್ಷಣ.

ಇದಲ್ಲದೆ, ಭಯಕ್ಕೋ, ಆತಂಕಕ್ಕೋ ಶೌಚಾಲಯಕ್ಕೆ ಎಡತಾಕುವವರು, ನೀರಿನ ಬಾಟಲಿಯನ್ನು ಖಾಲಿ ಮಾಡುವವರು, ಫ್ಯಾನ್‌ನ ವೇಗವನ್ನು ಹೆಚ್ಚು ಕಡಿಮೆ ಮಾಡಿಸುವವರು, ಮೊದಲ ಅರ್ಧ ಗಂಟೆಯ ಬೆಲ್ ಆಗುವುದನ್ನೇ ಕಾಯ್ದು ಕಾಲು ಕೀಳುವವರು, ಬರೆದು ಆಗಿದ್ದರೂ ಕೊನೆಯ ಕ್ಷಣದವರೆಗೂ ಕೊಠಡಿಯನ್ನು ಬಿಟ್ಟು ಹೊರಡದವರು, ಮೇಲಿಂದ ಮೇಲೆ ಹೆಚ್ಚುವರಿ ಹಾಳೆಗಳನ್ನು ತೆಗೆದುಕೊಳ್ಳುತ್ತಾ ಸಹಪಾಠಿಗಳಿಗೆ ಭಯ ಹುಟ್ಟಿಸುವವರು, ಇರುವ ಹಾಳೆಗಳನ್ನು ತುಂಬಿಸಲಾರದೆ ಒದ್ದಾಡುವವರು,.. ಹೀಗೆ ಪರೀಕ್ಷಾ ಕೊಠಡಿ ವೈವಿಧ್ಯಮಯ ವ್ಯಕ್ತಿತ್ವಗಳಿಂದ ತುಂಬಿ ತುಳುಕುತ್ತದೆ.

ನಮ್ಮ ವೃತ್ತಿಯ ಅನಿವಾರ್ಯ ಭಾಗವಾಗಿರುವ ಈ ಎರಡು ಕೆಲಸಗಳು, ನಮಗೂ ಹಲವಾರು ಪಾಠಗಳನ್ನು ಕಲಿಸುತ್ತವೆ, ವಿದ್ಯಾರ್ಥಿಗಳನ್ನು ಹತ್ತಿರದಿಂದ ಅರಿತುಕೊಳ್ಳಲು ಸಹಕರಿಸುತ್ತವೆ. ನಾವೂ ವಿದ್ಯಾರ್ಥಿಗಳಾಗಿ ಇದ್ದು ಬಂದವರೇ ಆಗಿರುವುದರಿಂದ, ಅವರ ಸ್ಥಾನದಲ್ಲಿ ನಿಂತು, ಅವರನ್ನು ಅರ್ಥ ಮಾಡಿಕೊಂಡು ಉತ್ತಮ ರೀತಿಯಲ್ಲಿ ಅವರ ಸಂದಿಗ್ಧಗಳನ್ನು ದೂರವಾಗಿಸಲು ಪ್ರಯತ್ನಿಸುವುದಕ್ಕೆ ನಮಗೆ ಸ್ವಲ್ಪ ಹೆಚ್ಚಿನ ತಾಳ್ಮೆಯಿದ್ದರೆ, ಅದಕ್ಕಿಂತಾ ಸೊಗಸಾದ ವಿಷಯ ಮತ್ತೊಂದಿಲ್ಲ. ನಮಗಂತೂ ಪ್ರತೀ ಪರೀಕ್ಷೆಯ ಸೀಝನ್ನೂ ಹೊಸ–ಹೊಸ ಪ್ರಾತ್ಯಕ್ಷಿಕೆಗಳ ಅನುಭವಗಳ ಗಣಿ. ನಮ್ಮ ತಾಳ್ಮೆ ಬುದ್ಧಿವಂತಿಕೆಯ ಪರೀಕ್ಷೆಯೂ ಈಗಲೇ! ಏನೇ ಆದರೂ ಕೊನೆಯಲ್ಲಿ ಎಷ್ಟೆಂದರೂ ನಮ್ಮ ಮಕ್ಕಳು ಅವು, ನಾವೇ ಅವರನ್ನು ತಿದ್ದಬೇಕು ತೀಡಬೇಕು. ಇದೇ ನಮ್ಮಲ್ಲಿ ಪ್ರತಿದಿನವೂ ಹೊಸಹುರುಪನ್ನು ತುಂಬುವುದು.

ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ



ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂತಾರಾಷ್ಟ್ರೀಯ ಅಥ್ಲೆಟ್ ಎಂ.ಯೋಗೇಂದ್ರ ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ನಂಜನಗೂಡು ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ಎಂ.ಮಾದಶೆಟ್ಟಿ ಸನ್ಮಾನಿಸಿದರು. ಚನ್ನಕೇಶವಶೆಟ್ಟಿ, ಅಂಕಶೆಟ್ಟಿ, ಮಹದೇವಶೆಟ್ಟಿ, ಪುಟ್ಟಿ, ದೀಪಕ್, ಲೋಕೇಶ್, ಮುರಳೀಧರ, ಅಮೃತರಾಜ್, ಎಂ.ಚಂದ್ರಶೇಖರ್, ಮಹದೇವಯ್ಯ, ರೇಣುಕಾದೇವಿ, ರೀತು ಉಪಸ್ಥಿತರಿದ್ದರು.

ಅಖಂಡ ಶ್ರೀ ಕೃಷ್ಣ ಭಜನಾ, ಪ್ರತಿಭಾ ಪುರಸ್ಕಾರ

ಮೈಸೂರು, ಜ.7 – ಮೈಸೂರಿನ ಯಾದವ (ಗೊಲ್ಲರ) ಸಂಘದ ವತಿಯಿಂದ ಅಖಂಡ ಶ್ರೀ ಕೃಷ್ಣ ಭಜನಾ, ಪ್ರತಿಭಾ ಪುರಸ್ಕಾರ ಹಾಗೂ ವಿಷ್ಣು ಸಹಸ್ರನಾಮ ಪಠಣ ಕಾರ್ಯಕ್ರಮವನ್ನು ಜ.10 ರಂದು ಬೆಳಗ್ಗೆ 10.30 ಗಂಟೆಗೆ ದಿವಾನ್ಸ್ ರಸ್ತೆಯಲ್ಲಿರುವ ಯಾದವ (ಗೊಲ್ಲರ) ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9448246433, 9880635470 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಂತರ ಕಾಲೇಜು ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಯುವರಾಜ ಚಾಂಪಿಯನ್



ಅಂತರ ಕಾಲೇಜು ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಚಾಂಪಿಯನ್ ಆದ ಯುವರಾಜ ಕಾಲೇಜು ತಂಡಕ್ಕೆ ಕುಲಸಚಿವ(ಪರೀಕ್ಷಾಂಗ) ಪ್ರೊ.ಎನ್.ನಾಗರಾಜ ಪ್ರಶಸ್ತಿ ನೀಡಿದರು.

ಮೈಸೂರು, ಜ.7(ವಿವಿಹೆಚ್)– ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ವತಿಯಿಂದ ಮಾನಸ ಗಂಗೋತ್ರಿ ಇಎಂಆರ್‌ಸಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 2025–26ನೇ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮೈಸೂರಿನ ಯುವರಾಜ ಕಾಲೇಜು ಸಮಗ್ರ ಪ್ರಶಸ್ತಿ ಪಡೆಯುವ ಜೊತೆಗೆ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಈ ತಂಡವು ಎಲ್ಲಾ 17 ವಿಭಾಗಗಳಲ್ಲಿಯೂ ಸ್ಪರ್ಧಿಸಿ, ಬರೋಬ್ಬರಿ 37 ಅಂಕಗಳೊಂದಿಗೆ ಅಗ್ರಸ್ಥಾನ ಪಡೆಯಿತು. 14 ಅಂಕಗಳೊಂದಿಗೆ ಮಹಾರಾಜ ಕಾಲೇಜು ದ್ವಿತೀಯ, 13 ಅಂಕಗಳೊಂದಿಗೆ ಜೈವಿಕ ತಂತ್ರಜ್ಞಾನ ವಿಭಾಗ ತೃತೀಯ ಸ್ಥಾನ ಮತ್ತು 12 ಅಂಕಗಳೊಂದಿಗೆ ಕಾವಾ ನಾಲ್ಕನೇ ಸ್ಥಾನ ಪಡೆದುಕೊಂಡಿತು.

ಸಮಾರೋಪ ಸಮಾರಂಭ ಉದ್ಘಾಟಿಸಿ, ಸಮಗ್ರ ಪ್ರಶಸ್ತಿ ವಿಜೇತರಿಗೆ ಬಹುಮಾನ ನೀಡಿ ಮಾತನಾಡಿದ ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್.ನಾಗರಾಜ, ವಿವಿಧ ಭಾಗಗಳಿಂದ ಬಂದ ಮಕ್ಕಳು ನಾನಾ ಸ್ಪರ್ಧೆಗಳಲ್ಲಿ ಭಾಗವಹಿಸಿ, ತಮ್ಮ ಪ್ರತಿಭೆ ಅನಾವರಣಗೊಳಿಸಿದ್ದಾರೆ.

> ಜಾನಪದ ವಿಭಾಗದಲ್ಲಿ ಪ್ರಶಸ್ತಿ ವಿತರಣೆ ವೇಳೆ ಲೋಪವಾಗಿದೆ ಎಂದು ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟಿಸಿದರು. ಮಧ್ಯಪ್ರವೇಶಿಸಿದ ಡೀನ್ ಪ್ರೊ.ಸಿ.ಗುರುಸಿದ್ದಯ್ಯ, ಎಲ್ಲವನ್ನು ತೀರ್ಪುಗಾರರ ಸಮ್ಮುಖದಲ್ಲೇ ನಡೆಸಲಾಗಿದೆ. ಇದರಲ್ಲಿ ನಮ್ಮ ಮಧ್ಯಸ್ಥಿಕೆ ಏನಿಲ್ಲ ಎಂದು ಆಯ್ಕೆ ಪ್ರಕ್ರಿಯೆ ಬಗ್ಗೆ ಸಮರ್ಥಿಸಿಕೊಂಡು ಎಲ್ಲರ ಮನವೊಲಿಸಿದರು.

ಸೋಲು ಗೆಲುವು ಲೆಕ್ಕ ಹಾಕುವುದಕ್ಕಿಂತ ಕಣದಲ್ಲಿ ಸ್ಪರ್ಧೆ ಮಾಡುವುದು ಬಹಳ ಮುಖ್ಯ. ಭಾಗವಹಿಸಿದ ಎಲ್ಲಾ ಸ್ಪರ್ಧಾರ್ಥಿಗಳಿಗೆ ಅಭಿನಂದನೆಗಳು ಎಂದರು.

ವಿದ್ಯಾರ್ಥಿಗಳು ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ನಿರಂತರ ಶ್ರಮ ಮತ್ತು ಉತ್ತಮ ಅಭ್ಯಾಸಗಳ ಮೂಲಕ ಉನ್ನತ ಸ್ಥಾನಗಳನ್ನು ಅಲಂಕರಿಸಬೇಕು. ಕಲೆ, ಸಾಹಿತ್ಯ, ಸಾಂಸ್ಕೃತಿಕ ವಿಭಾಗಗಳಲ್ಲಿ ಮೈಸೂರು ವಿವಿಯಿಂದ ರಾಜ್ಯ, ದೇಶ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರು ಇದ್ದಾರೆ. ಈ ವೇದಿಕೆಯನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಸಿ.ಗುರುಸಿದ್ದಯ್ಯ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಅಂತರಾಳದಲ್ಲಿ ಹುದುಗಿರುವ ಕಲಾ ಚೈತನ್ಯವನ್ನು ಸಾರ್ವತ್ರಿಕವಾಗಿ ಪ್ರಸಾರಪಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇಲ್ಲಿಂದ ಮುಂದಿನ ಮಟ್ಟಕ್ಕೆ ಆಯ್ಕೆಯಾಗಿ ಸ್ಥಳೀಯ ಕಲೆಯನ್ನು ಪ್ರದರ್ಶಿಸುವ ಮೂಲಕ ವಿವಿಯ ಕೀರ್ತಿ ಹೆಚ್ಚಿಸುವ ವಿದ್ಯಾರ್ಥಿಗಳೇ ವಿಶ್ವವಿದ್ಯಾನಿಲಯದ ಸಾಂಸ್ಕೃತಿಕ ರಾಯಭಾರಿಗಳಾಗುತ್ತಾರೆ ಎಂದರು.

ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಅಂತರರಾಜ್ಯ ವಲಯ ಮಟ್ಟ, ರಾಷ್ಟ್ರಮಟ್ಟದಲ್ಲಿ ವಿವಿ ಪ್ರತಿನಿಧಿಸುವ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಸಹಕರಿಸುವ ಸಲುವಾಗಿ 15 ಪ್ರವೇಶಾತಿ ಕೋಟಾ ನೀಡಲಾಗುತ್ತಿದೆ. ಜೊತೆಗೆ ಯುಜಿಸಿ ಸಾಂಸ್ಕೃತಿಕ ವಲಯದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ನೂತನ ನಿಯಮ ತರಲಾಗಿದ್ದು, ಅದರನ್ವಯ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಯಲ್ಲಿ ಭಾಗವಹಿಸುವವರ ಅನುಪಸ್ಥಿತಿಯನ್ನು ಹಾಜರಾತಿ ಎಂದು ಪರಿಗಣಿಸಬೇಕು ಮತ್ತು ರಾಜ್ಯ ಅಥವಾ ರಾಷ್ಟ್ರಮಟ್ಟದ ಕಾರ್ಯಕ್ರಮಗಳಿದ್ದರೆ ಪರೀಕ್ಷೆಗೆ ಹಾಜರಾಗದಿದ್ದರೆ ಮರುಪರೀಕ್ಷೆಗೆ ಅನುಮತಿ ನೀಡುವಂತೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಮಾನಸ ಗಂಗೋತ್ರಿ ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ ಮಾಜಿ ಪ್ರಾಂಶುಪಾಲ ಸಿ.ರಾಮಸ್ವಾಮಿ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಸಹಾಯಕ ನಿರ್ದೇಶಕಿ ಡಾ.ಎಸ್.ಎನ್.ಸುಷ್ಮಾ ಉಪಸ್ಥಿತರಿದ್ದರು.

ವಿಜೇತರ ಪಟ್ಟಿ

ಶಾಸ್ತ್ರೀಯ ನೃತ್ಯ: ಎಂ.ಸಂಜನಾ ರಾವ್ (ಯುವರಾಜ), ಅನ್ವಿತಾ ಕೆ.ಜಗದೀಶ (ಶೇಷಾದ್ರಿಪುರಂ ಕಾಲೇಜು), ಹಂಸಿನಿ ಕಿಶೋರ್ (ಮಹಾರಾಜ) ಮತ್ತು ಇಂಚರ (ಹುಣಸೂರು ಮಹಿಳಾ ಕಾಲೇಜು). **ಜಾನಪದ ನೃತ್ಯ:** ಆಕಾಶ್ ಮತ್ತು ತಂಡ (ಮಹಾರಾಜ), ಎಸ್.ಆರ್.ಮುರುಳಿ ಕೃಷ್ಣ ಮತ್ತು ತಂಡ (ಶೇಷಾದ್ರಿಪುರಂ), ಎ.ಪೃಥ್ವಿ ಮತ್ತು ತಂಡ (ಯುವರಾಜ). **ಮೂಕಾಭಿನಯ:** ಪೃಥ್ವಿ ಮತ್ತು ತಂಡ (ಯುವರಾಜ), ಎಂ.ಬಾನು ಪ್ರಕಾಶ್ ಮತ್ತು ತಂಡ (ಜೆಎಸ್‌ಎಸ್ ಸಿಂಹ ಸುಬ್ಬಲಕ್ಷ್ಮಿ), ಟಿ.ಎಸ್.ಮನೋಜ್ ಕುಮಾರ್ ಮತ್ತು ತಂಡ (ಬಯೋ ಟೆಕ್ನಾಲಜಿ, ಎಂಜಿಎಂ).

ಏಕಪಾತ್ರಾಭಿನಯ: ಸಿ.ಮಧುಕುಮಾರ್ (ಸಮಾಜಕಾರ್ಯ ವಿಭಾಗ, ಎಂಜಿಎಂ), ದಿವಿಜಾ ಭಾರಧ್ವಾಜ್ (ಎಂಎಂಕೆ ಮತ್ತು ಎಸ್‌ಡಿಎಂ), ಸ್ವರೂಪ್ ಗಣಪತಿ (ಜಿಯೋಗ್ರಫಿ ವಿಭಾಗ, ಎಂಜಿಎಂ) ಮತ್ತು ದೀಕ್ಷಾ ಎಂ(ಯುವರಾಜ). **ಇಂಗ್ಲೀಷ್ ಚರ್ಚಾ ಸ್ಪರ್ಧೆ:** ಇ.ಪಿ.ನಿಶ್ಚಿತಾ (ಯುವರಾಜ), ಕೆ.ಪ್ರಣೀತಾ (ಸೇಂಟ್ ಫಿಲೋಮಿನಾ), ಡಿ.ಸಿ.ಚೇತನ್ (ಬಯೋ ಟೆಕ್ನಾಲಜಿ, ಎಂಜಿಎಂ). **ಇಂಗ್ಲೀಷ್ ಭಾಷಾ ಸ್ಪರ್ಧೆ:** ಟಿ.ಎಸ್.ಆರ್ಯಶ್ರೀ (ಯುವರಾಜ), ಎಸ್.ಕೆ.ಸತ್ಯನಾರಾಯಣ (ಇಂಗ್ಲಿಷ್ ವಿಭಾಗ, ಎಂಜಿಎಂ) ರ್ಯಾನ್ ಆದಂ ವಾಸ್ (ಪರಿವರ್ತನಾ ಬ್ಯುಸಿನೆಸ್ ಕಾಲೇಜು). **ರಸಪ್ರಶ್ನೆ:** ಡಿ.ಸಿ.ಚೇತನ್ ಮತ್ತು ತಂಡ (ಬಯೋಟೆಕ್ನಾಲಜಿ, ಎಂಜಿಎಂ), ಅಮೋಘ ವೇದಾಂತ ರೈ ಮತ್ತು ತಂಡ (ಯುವರಾಜ), ಎಂ.ಪ್ರಿಯಾಂಕ ಮತ್ತು ತಂಡ (ಇಂಗ್ಲಿಷ್ ವಿಭಾಗ, ಎಂಜಿಎಂ).

ಶಾಸ್ತ್ರೀಯ ಹಾಡುಗಾರಿಕೆ ಮತ್ತು ಲಘು ಸಂಗೀತ: ಯೋಗಶ್ರೀ.ಸಿ (ಮಹಾರಾಜ), ಸಿ.ಭಾಗ್ಯಲಕ್ಷ್ಮಿ (ಯುವರಾಜ). **ಪಾಶ್ಚಾತ್ಯ ಸಂಗೀತ:** ಎನ್.ಎಸ್.ಯಶ್ವಂತ್ ಕುಮಾರ್ (ದಕ್ಷ ಕಾಲೇಜು), ಸಿ.ಯೋಗಶ್ರೀ (ಮಹಾರಾಜ), ಹರಿ ಕಿಶನ್ (ಯುವರಾಜ), **ವೃಂದ ಗಾಯನ:** ಸಿ.ಭಾಗ್ಯಲಕ್ಷ್ಮಿ ಮತ್ತು ತಂಡ (ಯುವರಾಜ), ಕೆ.ಎಂ.ಮೇಘನಾ ಮತ್ತು ತಂಡ (ಜೆಎಸ್‌ಎಸ್ ಸುತ್ತೂರು), ಬಿ.ಕೆ.ನಿತಿನ್ ಮತ್ತು ತಂಡ (ಸರಗೂರು ಸರ್ಕಾರಿ ಕಾಲೇಜು). **ಸ್ಥಳದಲ್ಲಿ ಚಿತ್ರರಚನೆ:** ಎನ್.ಪವಿತ್ರಾ (ವಿಶ್ವಕವಿ ಕುವೆಂಪು ಕಾಲೇಜು), ಕೆ.ಎಸ್.ಜಯಾನಂದ (ಯುವರಾಜ), ಮಹಾದೇವಮ್ಮ (ಎಂಎಂಕೆ ಮತ್ತು ಎಸ್‌ಡಿಎಂ). **ಕಾಗದದ ಚೂರುಗಳಿಂದ ಚಿತ್ರರಚನೆ:** ಎ.ರಾಜೇಶ್ (ಕಾವಾ), ಎಸ್.ಎನ್.ರವಿ (ಸರಗೂರು ಸರ್ಕಾರಿ ಕಾಲೇಜು), ಎಸ್.ಕೃತಿಕಾ (ಯುವರಾಜ). **ಮಣ್ಣಿನ ಮಾದರಿ ರಚನೆ:** ಎಂ.ಯಶವಂತ್ (ಕಾವಾ), ಎಸ್.ಪ್ರೀತಂ (ಜೆಎಸ್‌ಎಸ್), ಎಂ.ಮನೋಜ್ ಕುಮಾರ್ (ಯುವರಾಜ).

ವ್ಯಂಗ್ಯಚಿತ್ರ ರಚನೆ: ಬಿ.ಎಸ್.ರೋಶನ್ (ಕಾವಾ), ಅಭಿ ಮಲ್ಲಿಕ್ (ಬಯೋ ಟೆಕ್ನಾಲಜಿ), ಕೆ.ಎಸ್.ಜಯಾನಂದ (ಯುವರಾಜ). **ರಂಗೋಲಿ ಸ್ಪರ್ಧೆ:** ಡಿ.ಎಂ.ಕವನಾ (ಕಾನೂನು ಶಾಲೆ, ಎಂಜಿಎಂ), ಎಸ್.ಪಿ.ಅನು (ಬಯೋ ಟೆಕ್ನಾಲಜಿ), ಆರ್.ಭಾವನಾ (ಶೇಷಾದ್ರಿಪುರಂ) ಮತ್ತು ಆರ್.ಅಂಜಲಿ (ಸರಗೂರು ಸರ್ಕಾರಿ ಕಾಲೇಜು). **ಜಾಹಿರಾತು ರಚನೆ:** ಹಿಬ್ರೊ (ಕಾವಾ), ಎಂ.ಎಸ್.ಇತಿಹಾಸ್ (ಯುವರಾಜ), ಬಿ.ಎಲ್.ಗ್ರೀಷ್ಮಾ (ಬಯೋ ಟೆಕ್ನಾಲಜಿ) ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದರು.

ಹೊನ್ನಾವರ– ಗೇರುಸೊಪ್ಪ ಬಳಿ ಕಾರು ಪಲ್ಟಿ: ಇಬ್ಬರು ಸಜೀವ ದಹನ

ಕಾರವಾರ : ಗೇರುಸೊಪ್ಪ ಸುಳೆಮುರ್ಕಿ ಕ್ರಾಸ್ ಹತ್ತಿರ ಕಾರು ಪಲ್ಟಿಯಾಗಿ ಕಾರಿನಲ್ಲಿದ್ದ ಇಬ್ಬರು ಸಜೀವ ದಹನವಾಗಿರುವ ಘಟನೆ ನಡೆದಿದೆ. ಕಾರು ಮತ್ತು ಕಾರಿನಲ್ಲಿದ್ದ ಇಬ್ಬರು ಗುರುತು ಸಿಗಲಾರದಷ್ಟು ಸುಟ್ಟು ಕರಕಲಾಗಿದ್ದಾರೆ.

ತಡರಾತ್ರಿ ಘಟನೆ ನಡೆದಿರುವ ಸಾಧ್ಯತೆ ಇದೆ. ಕಾರು ಮರಕ್ಕೆ ಡಿಕ್ಕಿ ಹೊಡೆದು ಕಂದಕಕ್ಕೆ ಬಿದ್ದಿರುವಂತೆ ಕಂಡು ಬಂದಿದೆ. ಕಾರಿನ ನಂಬರ್ ಪ್ಲೇಟ್ ಕೂಡಾ ಬೆಂಕಿಯಲ್ಲಿ ಸುಟ್ಟು ಕಾಣದಾಗಿದೆ. ಕಾರು ಮತ್ತು ಕಾರಿನಲ್ಲಿ ಇದ್ದವರ ಗುರುತು ಪತ್ತೆ ಕಾರ್ಯಾಚರಣೆಗೆ ಪೊಲೀಸರು ಇಳಿದಿದ್ದಾರೆ. ಘಟನಾ ಸ್ಥಳದಲ್ಲಿ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿಗಳಿಂದ ಕಾರ್ಯಾಚರಣೆ ಮುಂದುವರೆದಿದೆ. ಹೊನ್ನಾವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಕಾರಿನಲ್ಲಿದ್ದ ಇಬ್ಬರು ಪ್ರಯಾಣಿಕರು ಹೊರಬರಲಾಗದೇ ಸಜೀವ ದಹನವಾಗಿದ್ದಾರೆ. ಬೆಂಕಿಯ ತೀವ್ರತೆಗೆ ಕಾರು ಹಾಗೂ ಮೃತರ ಗುರುತು ಪತ್ತೆಯಾಗದಷ್ಟು ಸುಟ್ಟು ಕರಕಲಾಗಿದೆ. ಕಾರಿನ ನಂಬರ್ ಪ್ಲೇಟ್ ಸಹ ಸಂಪೂರ್ಣವಾಗಿ ಸುಟ್ಟು ಹೋಗಿರುವುದರಿಂದ, ವಾಹನದ ಮಾಲೀಕತ್ವ ಹಾಗೂ ಮೃತರ ಗುರುತು ಪತ್ತೆ ಮಾಡುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ಬೆಳಗಾವಿ: ಸಕ್ಕರೆ ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟ; ನಾಲ್ವರ ಸಾವು



ಬೆಳಗಾವಿ: ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಯೊಂದರಲ್ಲಿ ಬುಧವಾರ ಬಾಯ್ಲರ್ ಸ್ಫೋಟಗೊಂಡು ಕನಿಷ್ಠ ನಾಲ್ವರ ಸಾವನ್ನಪ್ಪಿದ್ದು, ಆರು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂಲಗಳ ಪ್ರಕಾರ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮರಕುಂಬಿಯಲ್ಲಿರುವ ಇನಾಮದಾರ್ ಸಕ್ಕರೆ ಕಾರ್ಖಾನೆಯಲ್ಲಿ ಈ ದುರಂತ ಸಂಭವಿಸಿದೆ.

ಇಂದು ಮಧ್ಯಾಹ್ನ 2 ಗಂಟೆಗೆ ಈ ಘಟನೆ ಸಂಭವಿಸಿದ್ದು, ನಾಲ್ವರು ಮೃತಪಟ್ಟಿದ್ದಾರೆ ಮತ್ತು ಆರು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಬೆಳಗಾವಿ ಗ್ರಾಮೀಣ ಜಿಲ್ಲೆಯ ಸೂಪರಿಂಟೆಂಡೆಂಟ್ ಕೆ. ರಾಮರಾಜನ್ ತಿಳಿಸಿದ್ದಾರೆ. ಗಾಯಾಳುಗಳನ್ನು ಬೆಳಗಾವಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ ಎನ್ನಲಾಗಿದೆ.

ಬಳ್ಳಾರಿ ಗಲಭೆ ಪ್ರಕರಣ: ಮತ್ತೊಬ್ಬ ಅಧಿಕಾರಿ ತಲೆ ದಂಡ

ಐಜಿ ವರ್ತಿಕಾ ಕಟಿಯಾರ್ ವರ್ಗಾವಣೆ; ಪಿ.ಎಸ್.ಹರ್ಷ ನೂತನ ಐಜಿ

ಬಳ್ಳಾರಿ: ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ನಿವಾಸದ ಮುಂದೆ ಬ್ಯಾನರ್ ವಿಚಾರವಾಗಿ ನಡೆದ ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬರು ಉನ್ನತ ಅಧಿಕಾರಿಯ ತಲೆ ದಂಡವಾಗಿದೆ.



ವರ್ತಿಕಾ

ಪೊಲೀಸ್ ಐಜಿ ವರ್ತಿಕಾ ಕಟಿಯಾರ್ ಅವರನ್ನ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇತ್ತೀಚೆಗೆ ಎಸ್ಪಿ ಪವನ್ ನೆಜ್ಜೂರು ಅವರನ್ನು ಅಮಾನತುಗೊಳಿಸಲಾಗಿತ್ತು. ಅಲ್ಲದೇ ಬಳ್ಳಾರಿ ವಲಯಕ್ಕೆ ನೂತನ ಐಜಿ ಆಗಿ ಪಿಎಸ್ ಹರ್ಷ ಹಾಗೂ ನೂತನ ಎಸ್ಪಿ ಆಗಿ ಡಾ.ಸುಮನ್ ಡಿ ಪೆನ್ನೇಕರ್ ಅವರನ್ನ ನೇಮಕ ಮಾಡಿ, ಆದೇಶ ಹೊರಡಿಸಲಾಗಿದೆ.

ಜ.1 ರಂದು ಬಳ್ಳಾರಿ ಎಸ್‌ಪಿಯಾಗಿ ಪವನ್ ನೆಜ್ಜೂರ್, ಶೋಭಾರಾಣಿ ಅವರಿಂದ ಅಧಿಕಾರ ಸ್ವೀಕರಿಸಿದ್ದರು. ಬ್ಯಾನರ್ ಗಲಾಟೆ ಪ್ರಕರಣವನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ ಎಂಬ ಕಾರಣ ನೀಡಿ ಅಮಾನತು ಮಾಡಲಾಗಿತ್ತು. ಅಲ್ಲದೇ ಬಳ್ಳಾರಿ ರೇಂಜ್ ಐಜಿ ಆಗಿದ್ದ ವರ್ತಿಕಾ ಕಟಿಯಾರ್ ಅವರು ಈ ಪ್ರಕರಣವನ್ನ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿಲ್ಲ. ಹೀಗಾಗಿ ಇವರ ಮೇಲೆ ಕ್ರಮ ಕೈಗೊಳ್ಳ ಬೇಕು ಎಂದು ಡಿಜಿ–ಐಜಿಪಿ ಕಡೆಯಿಂದ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿತ್ತು. ಹೀಗಾಗಿ ಐಜಿ ವರ್ತಿಕಾ ಕಟಿಯಾರ್ ಅವರನ್ನ ಸರ್ಕಾರ ವರ್ಗಾವಣೆಗೊಳಿಸಿದೆ.

ಬಳ್ಳಾರಿ ಬ್ಯಾನರ್ ಗಲಭೆ ಪ್ರಕರಣದಲ್ಲಿ 26 ಮಂದಿ ಹಾಗೂ ಒಬ್ಬ ಖಾಸಗಿ ಗನ್ ಮ್ಯಾನ್ ಬಂಧಿತರಾಗಿದ್ದಾರೆ. ಘಟನೆಯಲ್ಲಿ ಬಳಸಿದ್ದ ಬುಲೆಟ್‌ಗಳು, ಗಾಜಿನ ಬಾಟಲಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಉಳಿದ ಆರೋಪಿಗಳಿಗಾಗಿ ಶೋಧ ಕಾರ್ಯ ಮುಂದುವರೆದಿದೆ.

ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ

ಮೈಸೂರು, ಜ. 7 – ಮೈಸೂರು ನಯನಜಕ್ಷತ್ರಿಯ ಕನ್ನಡಿಗರ ಶ್ರೀ ರಾಮ ಮಂದಿರದಲ್ಲಿ ಸದ್ಗುರು ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ವಿತರಿಸಿದರು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷ ಕೆ.ಸುಂದರಮೂರ್ತಿ, ಅಧ್ಯಕ್ಷ ಎಂ.ಕುಮಾರ್, ಕಾರ್ಯದರ್ಶಿ ರವೀಂದ್ರ, ಖಜಾಂಚಿ ಗಂಗಾಧರ, ಟ್ರಸ್ಟಿಗಳಾದ ಗುಂಡಣ್ಣ, ಶೇಷಾದ್ರಿ, ಶಿವಕುಮಾರ್, ಗೋಪಿನಾಥ್, ರವಿ, ಮೈ.ನಾ.ಲೋಕೇಶ್, ಪ್ರಕಾಶ್, ನರೇಶ್, ಶ್ರೀನಿವಾಸ, ವೆಂಕಟರಾಜು ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ; ಸಾಂಸ್ಕೃತಿಕ ಸ್ಪರ್ಧೆ

ಮೈಸೂರು,ಜ.7– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ 2025–26 ನೇ ಸಾಲಿನ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯನ್ನು ಜ.8 ಮತ್ತು 9 ರಂದು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಜ.8 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯ ಉದ್ಘಾಟನಾ ಸಮಾರಂಭವನ್ನು ಹಾಗೂ ಜ.9 ರಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ ಕಾರ್ಯಕ್ರಮ ಉದ್ಘಾಟನೆ ಮತ್ತು ಧ್ವಜಾರೋಹಣ ಹಾಗೂ ಸಮಾರೋಪ ಭಾಷಣ ಮಾಡಲಿದ್ದು, ಶಾಸಕ ತನ್ವೀರ್ ಸೇಠ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್.ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಕ್ರೀಡಾಜ್ಯೋತಿ ಹಸ್ತಾಂತರ ಹಾಗೂ ಬಹುಮಾನ ವಿತರಣೆಯನ್ನು ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಶಾಸಕರಾದ ಜಿ.ಟಿ.ದೇವೇಗೌಡ, ರವಿ ಶಂಕರ್ ಡಿ., ಟಿ.ಎಸ್. ಶ್ರೀವತ್ಸ ಜಿ.ಡಿ. ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ. ಯತೀಂದ್ರ ಎಸ್, ಕೆ.ವಿವೇಕಾನಂದ ಮತ್ತು ಕೆ. ಶಿವಕುಮಾರ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಎಚ್.ಬಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಹಾಗೂ ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಪ್ಯಾರಿಜಾನ್ ಕಾರ್ಯಕ್ರಮದ ಭಾಗವಹಿಸಲಿದ್ದಾರೆ.

ಇಂದಿರಾಗಾಂಧಿ, ರಾಜೀವ್ ಗಾಂಧಿ, ರಾಹುಲ್ ಗಾಂಧಿ ಜಪಿಸುತ್ತಾ ನಿಜವಾದ ಗಾಂಧಿ ಮರೆತವರು ಕಾಂಗ್ರೆಸ್ಸಿಗರು!

● ಮಾಜಿ ಉಪ ಮುಖ್ಯಮಂತ್ರಿ, ಸಂಸದ ಗೋವಿಂದ ಕಾರಜೋಳ ವಾಗ್ದಾಳಿ ● ಇರುವ ಯೋಜನೆಗೆಲ್ಲಾ ಇವರ ಹೆಸರೇ ಇಟ್ಟುಕೊಂಡರೆ; ಪ್ರಧಾನಿ ಮೋದಿ ಹೆಸರು ಒಂದೇ ಒಂದು ಯೋಜನೆಗಿಟ್ಟಿಲ್ಲ

ಬೆಂಗಳೂರು, ಜ.07(ಕೆಎಂಶಿ)– ನರೇಗಾದಡಿ ಪಾಲಿಸಲಾಗುವ ವಿನೂತನ ತಂತ್ರಜ್ಞಾನ, ಪಾರದರ್ಶಕತೆ ಕಾಂಗ್ರೆಸ್‌ಗೆ ದೊಡ್ಡ ಸವಾಲಾಗಿದೆ ಎಂದು ಸಂಸದ ಗೋವಿಂದ ಕಾರಜೋಳ ಇಂದಿಲ್ಲಿ ಟೀಕಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನರೇಗಾ ಹೆಸರಿನಲ್ಲಿ ಭ್ರಷ್ಟಾಚಾರ ನಡೆಸಿ ಖಜಾನೆಯಿಂದ ಹಣ ಲಪಟಾಯಿಸುವುದು ತಪ್ಪಲಿದೆ ಎಂಬ ಕಾರಣಕ್ಕಾಗಿ ಕಾಂಗ್ರೆಸ್‌ನವರು ಹೊಟ್ಟೆ ಉರಿಯಿಂದ ಮಾತನಾಡುತ್ತಿದ್ದಾರೆ ಎಂದರು.

ಗಾಂಧಿ ಹೆಸರು ಅಳಿಸಿದವರು ಯಾರು, ರಾಜ್ಯದಲ್ಲಿ 25 ಯೋಜನೆಗಳು ರಾಜೀವ್ ಗಾಂಧಿ, ಇಂದಿರಾ ಗಾಂಧಿ ಹೆಸರಿನಲ್ಲಿವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ 55 ರಾಜೀವ್ ಗಾಂಧಿ, ಇಂದಿರಾ ಗಾಂಧಿ ಹೆಸರಿನಲ್ಲಿ 21 ಮತ್ತು ನೆಹರೂ ಹೆಸರಿನಲ್ಲಿ 22 ಇವೆ.

ಪ್ರತಿಯೊಂದು ಕ್ರೀಡಾಕೂಟದಲ್ಲೂ ರಾಜೀವ್ ಗಾಂಧಿ, ರಾಹುಲ್ ಗಾಂಧಿ, ಇಂದಿರಾ ಗಾಂಧಿ ಹೆಸರು ಇಟ್ಟುಕೊಂಡು ಜನರಿಗೆ ಮೋಸ ಮಾಡಿ ನಿಜವಾದ ಗಾಂಧಿಯನ್ನು ಮರೆತುಬಿಟ್ಟವರೇ ಕಾಂಗ್ರೆಸ್ಸಿಗರು. ನೂತನ ವಿಬಿ–ಜಿ–ರಾಮ್–ಜಿ ಯೋಜನೆ ಯಲ್ಲಿ ಎಲ್ಲ ವರ್ಗದವರಿಗೂ ಉದ್ಯೋಗಾವಕಾಶ ಸಿಗಲಿದೆ, ಯಾರು ಬೇಕಾದರೂ ಕೆಲಸ ಪಡೆಯಬಹುದು.

ಮಹಾತ್ಮ ಗಾಂಧಿಗೆ ಅಪಮಾನ ಮಾಡಿದ್ದು ಕಾಂಗ್ರೆಸ್, ಡಾ.ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ್ದು ಕಾಂಗ್ರೆಸ್ ಪಕ್ಷ, ಡಾ.ಅಂಬೇಡ್ಕರ್ ಮೃತಪಟ್ಟಾಗ ಅವರ ಸಮಾಧಿಗೆ ಆರಡಿ ಮೂರಡಿ ಜಾಗವನ್ನೂ ಕೊಡಲಿಲ್ಲ.

ಅಪಾರ ಪಾಂಡಿತ್ಯ, ಜ್ಞಾನವಿದ್ದ ಡಾ. ಅಂಬೇಡ್ಕರ್ ಅವರಿಗೆ ಜೀವಿತ ಕಾಲದಲ್ಲಿ ಭಾರತರತ್ನ ಕೊಡಲಿಲ್ಲ, ಕಾಂಗ್ರೆಸ್ ಹೈಕಮಾಂಡ್ ಮನೆ ಮಂದಿಯೆಲ್ಲ ಪ್ರಶಸ್ತಿ ತೆಗೆದುಕೊಂಡರು. ದೇಶಕ್ಕೆ ಸಂವಿಧಾನ ಕೊಟ್ಟವರಿಗೆ ಕೊಡಲಿಲ್ಲ ಎಂಬುದನ್ನು ನಾವೇ ಹೇಳಬೇಕೆ. ಪ್ರಧಾನಮಂತ್ರಿ ನರೇಂದ್ರ ಮೋದಿ ತಮ್ಮ ಹೆಸರನ್ನು ಒಂದೇ ಒಂದು ಸಂಸ್ಥೆಗಾಗಲೀ, ಯೋಜನೆಗಾಗಲೀ ಇಟ್ಟುಕೊಂಡಿಲ್ಲ, ಎಲ್ಲ ಕಾರ್ಯಕ್ರಮಗಳಿಗೆ ಸರ್ಕಾರದ ಹೆಸರಿಡಲಾಗಿದೆ.

ದೇಶದ 5 ವಿಮಾನ ನಿಲ್ದಾಣ, ಬಂದರುಗಳಿಗೆ ಇಂದಿರಾಗಾಂಧಿ, ರಾಹುಲ್ ಗಾಂಧಿ, ರಾಜೀವ್ ಗಾಂಧಿ ಹೆಸರು ಇಟ್ಟುಕೊಂಡು ಕುಳಿತಿದ್ದಾರಲ್ಲ, ಇವರಿಗೆ ಮಹಾತ್ಮ ಗಾಂಧಿ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ.


ವಿಕಸಿತ ಭಾರತಕ್ಕೆ ಪೂರಕವಾಗಿ ವಿಬಿ–ಜಿ–ರಾಮ್–ಜಿ ಎಂಬುದಾಗಿ ಹೆಸರಿಸಿ ಯೋಜನೆ ಜಾರಿಗೊಳಿಸುವ ಮೂಲಕ ಭ್ರಷ್ಟಾಚಾರ ತಡೆದಿದ್ದಾರೆ. ಆಸ್ತಿ ನಿರ್ಮಾಣ, ಗ್ರಾಮೀಣ ಭಾಗದ ನಿಜವಾದ ಬಡವರಿಗೆ ಕೂಲಿ ಕೆಲಸ ಕೊಡಲು ಅನುಕೂಲ ಆಗುವ ಹೊಸ ವ್ಯವಸ್ಥೆ ಇದಾಗಿದೆ ಎಂದರು.

ವಿದ್ಯುತ್ ವ್ಯತ್ಯಯ

ಮೈಸೂರು,ಜ.7– ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರ ಹಾಗೂ ಪಿಲ್ಲಹಳ್ಳಿ ಐ.ಪಿ ಫೀಡರ್‌ನಲ್ಲಿ ರೀ–ಕಂಡಕ್ಟರಿಂಗ್ ಕಾಮಗಾರಿ ನಿಮಿತ್ತ ಜ.8 ಹಾಗೂ 10 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವರುಣ, ದಂಡಿಕೆರೆ, ಪಿಲ್ಲಹಳ್ಳಿ, ಬಿ.ಟಿ.ಎ ಎನ್‌ಕ್ಲೇವ್, ಮೋಸಂಬಾಯನಹಳ್ಳಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜ.19 ರಂದು ಸಿರಿಧಾನ್ಯ ಪಾಕಸ್ಪರ್ಧೆ

ಮೈಸೂರು,ಜ.7– ಕೃಷಿ ಇಲಾಖೆ ವತಿಯಿಂದ ಅಂತರ ರಾಷ್ಟ್ರೀಯ ವಾಣಿಜ್ಯ ಮೇಳ 2026 ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ಜ.19 ರಂದು ಏರ್ಪಡಿಸಲಾಗುತ್ತದೆ.



ಸ್ಪರ್ಧೆಯಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಭಾಗವಹಿಸುವ ಅವಕಾಶವಿರುತ್ತದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಬಯಸುವ ಅಭ್ಯರ್ಥಿಗಳು ತಮ್ಮ ಭಾವಚಿತ್ರದೊಂದಿಗೆ ಹೆಸರು, ವಿಳಾಸ ಮತ್ತು ತಯಾರಿಸುವ ಖಾದ್ಯಕ್ಕೆ ಬೇಕಾಗುವ ಸಾಮಗ್ರಿಗಳು, ತಯಾರಿಸಲು ಬೇಕಾಗುವ ಸಮಯ ಹಾಗೂ ತಯಾರಿಸುವ ವಿಧಾನ ಸಂಕ್ಷಿಪ್ತ ಮಾಹಿತಿಯೊಂದಿಗೆ ಜ.17ರಂದು ಮಧ್ಯಾಹ್ನ 12 ಗಂಟೆಯೊಳಗೆ ಇ ಮೇಲ್ ವಿಳಾಸ jdamysuru@gmail.com ಮೂಲಕ ಅಥವಾ ಖುದ್ದಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಸಾರ್ವಜನಿಕ ಕಛೇರಿ ಕಟ್ಟಡ, ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಚೇರಿಗೆ ಸಲ್ಲಿಸಬೇಕಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ), ಜಿಲ್ಲಾ ಸಲಹೆಗಾರರು (9035386129)& ಕಂಪ್ಯೂಟರ್ ಪ್ರೋಗ್ರಾಮರ್(8105504262), ಜಂಟಿ ಕೃಷಿ ನಿರ್ದೇಶಕರ ಕಚೇರಿ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಹೆಚ್‌ಡಿ ಪದವಿ ಪ್ರದಾನ

ಮೈಸೂರು: ಚಾಮರಾಜನಗರ ಜಿಲ್ಲೆಯ ಬೆಟ್ಟದಪುರ ಗ್ರಾಮದ ರವಿಕುಮಾರ.ಬಿ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ. 'ಕನ್ನಡ ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಅಪರಾಧ ಸುದ್ದಿ: ಒಂದು ತುಲನಾತ್ಮಕ ಅಧ್ಯಯನ' ವಿಷಯ ಕುರಿತು ಪ್ರೊ.ಎನ್. ಮಮತ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಅಂಗೀಕರಿಸಿದೆ. ಮೈಸೂರು ವಿಶ್ವವಿದ್ಯಾಲಯದ 106ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹಾಗೂ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು ಪಿಎಚ್ ಡಿ ಪದವಿ ಪ್ರದಾನ ಮಾಡಿದರು.



ದೇವರಾಜ ಅರಸು ದಾಖಲೆ ಸರಿಗಟ್ಟುವುದು ಸಿದ್ದರಾಮಯ್ಯರಿಂದ ಸಾಧ್ಯವಿಲ್ಲ!?

ತಮ್ಮ ಎಕ್ಸ್ ಖಾತೆಯಲ್ಲಿ ಬಿಜೆಪಿ ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಅಭಿಮತ

ಮೈಸೂರು,ಜ.7(ಪಿಎಂ)– ದೇವರಾಜ ಅರಸರು ತಮ್ಮ ಎರಡನೇ ಅವಧಿಯನ್ನು ಪೂರೈಸಿ 10 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಐತಿಹಾಸಿಕ ದಾಖಲೆ ಬರೆಯುತ್ತಿದ್ದುದ್ದನ್ನು ತಡೆದಿದ್ದು ಕಾಂಗ್ರೆಸ್ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ದೂರಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಸುದೀರ್ಘ ಉಲ್ಲೇಖ ಮಾಡಿರುವ ಅವರು, ಕಾಂಗ್ರೆಸ್ ವಿರುದ್ಧ ಕಿಡಿಕಾರಿದ್ದಾರೆ. ದೇವರಾಜ ಅರಸರು ಮುಖ್ಯಮಂತ್ರಿ ಅವಧಿಯ ಚಾರಿತ್ರಿಕ ದಾಖಲೆ ಗುರಿ ಮುಟ್ಟದಂತೆ ಮಾಡಿದ್ದು ಕಾಂಗ್ರೆಸ್. ಚುನಾವಣೆಯಲ್ಲಿ ಸೋತು ಮೂಲೆಗೆ ಸೇರಿದ್ದ ಇಂದಿರಾ ಗಾಂಧಿಯವರನ್ನು, ಚಿಕ್ಕಮಗಳೂರಲ್ಲಿ ಉಪಚುನಾವಣೆಗೆ ನಿಲ್ಲಿಸಿ, ಗೆಲ್ಲಿಸಿ, ಲೋಕಸಭೆಗೆ ಕಳುಹಿಸಿಕೊಟ್ಟಿದ್ದು ದೇವರಾಜ ಅರಸು. ಆ ಮೂಲಕ ಅರಸು ಅವರು ಇಂದಿರಾ ಗಾಂಧಿಯವರಿಗೆ ರಾಜಕೀಯ ಮರು ಜನ್ಮ ನೀಡಿದರು. ಆದರೆ ಅದೇ ದೇವರಾಜ ಅರಸರನ್ನು ಪಕ್ಷದಿಂದ ಉಚ್ಚಾಟಿಸಿ ಅವರ ರಾಜಕೀಯ ಭವಿಷ್ಯಕ್ಕೆ ಇಂದಿರಾ ಗಾಂಧಿಯವರು ಕಲ್ಲು ಹಾಕಿದರು. ಇದೇ ಇಂದಿರಾ ಗಾಂಧಿಯವರಿಗೂ ದೇವರಾಜ ಅರಸರಿಗೂ ಇರುವ ವ್ಯತ್ಯಾಸ ಎಂದು ಹರಿಹಾಯ್ದಿದ್ದಾರೆ.

1979ರಲ್ಲಿ ಅರಸರನ್ನು ಇಂದಿರಾ ಗಾಂಧಿಯವರು ಕಾಂಗ್ರೆಸ್‌ನಿಂದ ಉಚ್ಚಾಟಿಸದಿದ್ದರೆ ಜನರ ಆಶೀರ್ವಾದ ಪಡೆದಿದ್ದ ದೇವರಾಜ ಅರಸರು ತಮ್ಮ 2ನೇ ಅವಧಿಯನ್ನು ಪೂರೈಸಿ 10 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಐತಿಹಾಸಿಕ ದಾಖಲೆ ಬರೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ಸಿಗರು ಹಾಗೂ ಸಿದ್ದರಾಮಯ್ಯನವರ ಅಭಿಮಾನಿಗಳು ಸಿದ್ದರಾಮಯ್ಯನವರ ಅಧಿಕಾರಾವಧಿಯನ್ನು ದಾಖಲೆಯೆಂದು ಸಂಭ್ರಮಿಸುವಂತಿಲ್ಲ. ಅಹಿಂದ ವರ್ಗದ ಬಗ್ಗೆ ನಿಜವಾದ ಕಾಳಜಿ ಇದ್ದರೆ ಅರಸರನ್ನು ಈ ಸಂದರ್ಭದಲ್ಲಿ ನೆನೆದು ದುಃಖಿಸಬೇಕು.



ರಘು ಕೌಟಿಲ್ಯ

ದಾಖಲೆ ಮುರಿಯಲು ಸಾಧ್ಯವಾಗಿಲ್ಲ: ಅರಸರು ಸುದೀರ್ಘಾವಧಿಯ ಮುಖ್ಯಮಂತ್ರಿಯಾಗಿ ದಾಖಲೆ ನಿರ್ಮಿಸುವ ಜೊತೆಗೆ ತಮ್ಮ ಸ್ವಕ್ಷೇತ್ರ ಹುಣಸೂರಿನಿಂದ ವಿಧಾನ ಸಭೆಗೆ 1962ರಲ್ಲಿ ಅವಿರೋಧವಾಗಿ ಆಯ್ಕೆಯಾಗಿ ಪ್ರಜಾಪ್ರಭುತ್ವದ ಸಾರ್ವಕಾಲಿಕ ದಾಖಲೆ ಬರೆದು ನಿರಂತರ ಗೆಲುವುಗಳಿಂದ ಸೋಲಿಲ್ಲದ ಸರದಾರ ಎನಿಸಿಕೊಂಡರು. ಈ ದಾಖಲೆಯನ್ನು ಮುರಿಯಲು ಈವರೆವಿಗೂ ಯಾರಿಂದಲೂ ಸಾಧ್ಯವಾಗಿಲ್ಲ.

ಇವತ್ತಿನ ರಾಜಕೀಯ ಪರಿಸ್ಥಿತಿ ಅವಲೋಕಿಸಿದರೆ ಭವಿಷ್ಯತ್ತಿನಲ್ಲಿ ಅವಿರೋಧ ಆಯ್ಕೆಯ ದಾಖಲೆ ನಿರೀಕ್ಷಿಸಲಾಗದು. ಆದರೆ ಸಿದ್ದರಾಮಯ್ಯ ಅವರು 2013 ರಿಂದ 2018ರವರೆಗೆ ಮುಖ್ಯಮಂತ್ರಿ ಆಗಿ 5 ವರ್ಷ ಬ್ರೇಕ್ ತೆಗೆದುಕೊಂಡು ಮತ್ತೆ 2023ರಲ್ಲಿ ಮುಖ್ಯಮಂತ್ರಿ ಆಗಿದ್ದಾರೆ. ಹಾಗಾಗಿ ದೇವರಾಜ ಅರಸರು ನಾನ್‌ಸ್ಟಾಪ್ ಮುಖ್ಯಮಂತ್ರಿ, ಸಿದ್ದರಾಮಯ್ಯನವರು ಬ್ರೇಕಿಂಗ್ ಮುಖ್ಯಮಂತ್ರಿ. ಆದ್ದರಿಂದ ಅರಸರ ದಾಖಲೆಯನ್ನು ಸಿದ್ದರಾಮಯ್ಯನವರು ಸರಿಗಟ್ಟಲು ಸಾಧ್ಯವೇ ಇಲ್ಲ.

ಉಳುವವನೇ ನೆಲದೊಡೆಯ: ಭೂಸುಧಾರಣಾ ಕಾಯ್ದೆ ದೇಶದಲ್ಲಿ ಇವತ್ತಿಗೂ ಚಾರಿತ್ರಿಕ ದಾಖಲೆ. ಋಣಮುಕ್ತ ಕಾಯ್ದೆ, ವಿಧವಾ ವೇತನ, ವೃದ್ಧಾಪ್ಯ ವೇತನ, ಉಚಿತ ಭಾಗ್ಯ ಜ್ಯೋತಿ ಯೋಜನೆ, ಮಲ ಹೊರುವ ಅನಿಷ್ಟ ಪದ್ಧತಿಯ ರದ್ದತಿ, ಅರಸರ ಹೆಸರಿನಲಿರುವ ಮಾತೃ ಹೃದಯದ ಸಾರ್ವಕಾಲಿಕ ದಾಖಲೆಯ ಯೋಜನೆಗಳಾಗಿವೆ. ಅರಸರು ಅವಕಾಶ ವಂಚಿತ ಸಮಾಜ, ಆರ್ಥಿಕ ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಸರ್ಕಾರಿ ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ದೊರಕಿಸಿಕೊಡಲು ಎಲ್.ಜಿ.ಹಾವನೂರು ಆಯೋಗ ರಚಿಸಿ ಕೇವಲ 3 ವರ್ಷಗಳ ಅವಧಿಯಲ್ಲಿ ವರದಿ ಸ್ವೀಕರಿಸಿ ಅದನ್ನು ಅನುಷ್ಠಾನಗೊಳಿಸಿದರು. ಈ ವರದಿ ಆಧಾರದ ಮೇಲೆ ಇವತ್ತಿಗೂ ರಾಜ್ಯದಲ್ಲಿ ಹಿಂದುಳಿದ, ಆರ್ಥಿಕ ದುರ್ಬಲರಿಗೆ ಮೀಸಲಾತಿ ಹಂಚಿಕೆಯಾಗುತ್ತಿದೆ.

ಸಿದ್ದರಾಮಯ್ಯನವರು 2014ರಲ್ಲಿ ಹಿಂದುಳಿದವರಿಗೆ ನ್ಯಾಯ ದೊರಕಿಸಿಕೊಡುತ್ತೇನೆಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಅಧ್ಯಕ್ಷತೆಯಲ್ಲಿ 160 ಕೋಟಿ ಜನರ ತೆರಿಗೆ ಹಣ ವ್ಯಯಿಸಿ ಸಾಮಾಜಿಕ ಸಮೀಕ್ಷೆ ಹಾಗೂ ಜಾತಿಗಣತಿ ನಡೆಸಿದ್ದರು. ಆದರೆ 10 ವರ್ಷಗಳವರೆಗೂ ಈ ವರದಿ ಸ್ವೀಕರಿಸುವ ಎದೆಗಾರಿಕೆ ತೋರಿಸಲಿಲ್ಲ. ದೆಹಲಿಗೆ ಹೋಗಿದ್ದಾಗ ರಾಹುಲ್ ಗಾಂಧಿ ಹೇಳಿದರೆಂದು ಅಲ್ಲಿಂದಲೇ ಅದನ್ನು ಕಸದಬುಟ್ಟಿಗೆ ಎಸೆದು ತಮ್ಮ ಅಹಿಂದ ಕಾಳಜಿಯ ಅಧಿಕಾರ ಉಳಿಸಿಕೊಳ್ಳಲು ಹಾಗೂ ಅಧಿಕಾರ ಗಳಿಸಿಕೊಳ್ಳಲೆಂದು ಪ್ರತಿಬಿಂಬಿಸಿಕೊಂಡರು.

ಮೂಲ ಮೈಸೂರಿಗರಾದರೂ ಮೈಸೂರು ಹೆಸರಿನ ರಾಜ್ಯವನ್ನು 'ಕರ್ನಾಟಕ' ಎಂದು ದಾಖಲೆ ಮಾಡಿದ ಅರಸರು ರಾಜ್ಯ ರಾಜಕಾರಣದಲ್ಲಿ ಸ್ವಾಭಿಮಾನದ ಸಂಕೇತ. ಇಂಥ ಅರಸರೊಂದಿಗೆ ನಾವು ಯಾರನ್ನೂ ಹೋಲಿಸಲಾಗದು. ಸಿದ್ದರಾಮಯ್ಯನವರು ತವರು ಜಿಲ್ಲೆ–ತವರು ಕ್ಷೇತ್ರವನ್ನು ನಂಬದೇ ರಾಜಕೀಯ ನೆಲೆಗಾಗಿ ಬಾದಾಮಿ–ಕೊಪ್ಪಳಗಳಲ್ಲಿ ಚುನಾವಣೆಗೆ ಸ್ಪರ್ಧಿಸಿದವರು. ತಮಗೆ ರಾಜಕೀಯ ಜನ್ಮ ನೀಡಿದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 3 ಬಾರಿ ಸೋತಿದ್ದಾರೆ (1989, 1999, 2018). ಆದರೆ ದೇವರಾಜ ಅರಸರು ರಾಜಕೀಯ ನೆಲೆಗಾಗಿ ತಮ್ಮ ಜನ್ಮಭೂಮಿ ಹುಣಸೂರಿನ ಮತಕ್ಷೇತ್ರವನ್ನು ಕೊನೆ ಉಸಿರಿರುವವರೆಗೂ ತೊರೆಯಲಿಲ್ಲ.

ದೇವರಾಜ ಅರಸರು ಅಹಿಂದ ವರ್ಗಕ್ಕಾಗಿ ಕಾರ್ಯಕ್ರಮ ರೂಪಿಸಿ ತಪಸ್ವಿ ಮುಖ್ಯಮಂತ್ರಿ ಎನಿಸಿಕೊಂಡವರು. ಸಿದ್ದರಾಮಯ್ಯನವರು ಯಾವುದೇ ಹೋರಾಟಗಳ ಹಿನ್ನೆಲೆಯಿಂದ ಶಾಸಕರಾಗದೇ ಅದೃಷ್ಟದ ಬಾಗಿಲಿನಿಂದ ಬಂದು, ಅದೃಷ್ಟದ ಮುಖ್ಯಮಂತ್ರಿಯಾಗಿ ಅಹಿಂದ ಹೆಸರನ್ನು ರಾಜಕೀಯ ಲಾಭಕ್ಕಾಗಿ ಮಾತ್ರ ಬಳಸಿಕೊಂಡರೇ ಹೊರತು ಯಾವುದೇ ಕಾರ್ಯಕ್ರಮಗಳನ್ನು ಕೊಟ್ಟಿಲ್ಲ. ಇದೇ ದೇವರಾಜ ಅರಸರಿಗೂ, ಸಿದ್ದರಾಮಯ್ಯನವರಿಗೂ ಇರುವ ವ್ಯತ್ಯಾಸ. ಅರಸು ಸಾಧನೆಯನ್ನು ಸರಿಗಟ್ಟಲು ಇಂಥ ನೂರು ಸಿದ್ದರಾಮಯ್ಯನವರು ಬಂದರು ಸಾಲದು. ವ್ಯಕ್ತಿತ್ವವನ್ನು ಸಾಧನೆಯಲ್ಲಿ ಅಳೆಯಬೇಕೇ ವಿನಃ ನಂಬರ್ ಗೇಮ್‌ನಲ್ಲಲ್ಲ.


ಬೀದಿ ದೀಪ ಕಾಮಗಾರಿ ಅನುದಾನ ಬೇರೆಡೆಗೆ ವರ್ಗಾಯಿಸಲು ಹುನ್ನಾರ

ಹಾರೋಹಳ್ಳಿ ಗ್ರಾಮಸ್ಥರು, ಜೆಡಿಎಸ್ ಕಾರ್ಯಕರ್ತರಿಂದ ಪ್ರತಿಭಟನೆ

ಪಾಂಡವಪುರ, ಜ.7– ಪಟ್ಟಣದ 5 ದೀಪ ವೃತ್ತದಿಂದ ಹಾರೋಹಳ್ಳಿವರೆಗೆ ರಸ್ತೆ ಮಧ್ಯ ಬೀದಿ ದೀಪ ಅಳವ ಡಿಸುವ ಕಾಮಗಾರಿಗೆ ಬಿಡುಗಡೆಯಾಗಿದ್ದ ಅನುದಾನ ವನ್ನು ಶಾಸಕರು ಹಾಗೂ ಅಧಿಕಾರಿಗಳು ಬೇರೆಡೆಗೆ ವರ್ಗಾಯಿಸಲು ಹುನ್ನಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಪಟ್ಟಣದಲ್ಲಿ ಹಾರೋಹಳ್ಳಿ ಗ್ರಾಮಸ್ಥರು ಹಾಗೂ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆ ಕಚೇರಿ ಎದುರು ಜಮಾಯಿಸಿದ ಹಾರೋಹಳ್ಳಿ ಗ್ರಾಮಸ್ಥರು, ಜೆಡಿಎಸ್ ಕಾರ್ಯಕರ್ತರು, ಮುಖಂಡರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಿ.ಎಸ್.ಪುಟ್ಟರಾಜು ಅವರು ಸಚಿವರಾಗಿದ್ದ ವೇಳೆ ಪಟ್ಟಣದ 5 ದೀಪ ವೃತ್ತದಿಂದ ತಾಲೂಕಿನ ಗಡಿ ಭಾಗದವರೆಗೂ ಕೋಟ್ಯಾಂತರ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಗೊಳಿಸಿದ್ದಾರೆ. ಅಲ್ಲದೇ ಪಟ್ಟಣದಿಂದ ಹಾರೋಹಳ್ಳಿವರೆಗೂ ರಸ್ತೆ ಮಧ್ಯೆ ವಿದ್ಯುತ್ ಬೀದಿ ದೀಪ ಅಳವಡಿಕೆಗಾಗಿ 2 ಕೋಟಿ ಅನುದಾನ ಬಿಡುಗಡೆ ಮಾಡಿಸಿದ್ದಾರೆ. ಆದರೆ, ಇದುವರೆಗೂ ಲೋಕೋಪಯೋಗಿ ಇಲಾಖೆ ಬೀದಿ ದೀಪ ಅಳವಡಿಸಿಲ್ಲ. ಇದರಿಂದ ಸಾರ್ವಜನಿಕರಿಗೆ ಅನಾನೂಕೂಲವಾಗಿದ್ದು, ರಸ್ತೆಯಲ್ಲಿ ಅಪಘಾತಗಳು ಹೆಚ್ಚುತ್ತಿದೆ. ಜೊತೆಗೆ ಇಲ್ಲಿಗೆ ಮಂಜೂರಾಗಿರುವ ಅನುದಾನವನ್ನು ಬೇರೆಡೆಗೆ ವರ್ಗಾಯಿಸುವ ಹುನ್ನಾರ ನಡೆಯುತ್ತಿದೆ. ಒಂದು ವೇಳೆ ಅನುದಾನ ಬೇರೆಡೆಗೆ ವರ್ಗಾವಣೆಯಾದರೆ ಅಥವಾ 15 ದಿನದೊಳಗೆ ವಿದ್ಯುತ್ ದೀಪ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸದಿದ್ದರೆ, ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.



ಲೋಕೋಪಯೋಗಿ ಕಚೇರಿ ಎದುರು ಪ್ರತಿಭಟನಾಕಾರರು ಪ್ರತಿಭಟನೆ ನಡೆಸಿದರು.

ಪ್ರಸ್ತುತ ಲೋಕೋಪಯೋಗಿ ಇಲಾಖೆ ಸಂಪೂರ್ಣ ನಿಷ್ಕ್ರಿಯೆಗೊಂಡಿದೆ. ಕ್ಷೇತ್ರದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಯಾವುದೇ ಕಾಮಗಾರಿ ನಡೆಯುತ್ತಿಲ್ಲ. ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ರಸ್ತೆಗಳು ಗುಂಡಿ ಬಿದ್ದು ಅದ್ವಾನಗೊಂಡಿವೆ. ಕನಿಷ್ಠ ಪಕ್ಷ ಗುಂಡಿ ಮುಚ್ಚುವುದಕ್ಕೂ ಸಾಧ್ಯವಾಗುತ್ತಿಲ್ಲ. ಶಂಭೂನಹಳ್ಳಿ ಗ್ರಾಮದ ಬಳಿ ರಸ್ತೆ ಸೇತುವೆ ಕುಸಿದು 4 ತಿಂಗಳು ಕಳೆದಿದೆ. ಸೇತುವೆ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ. ಇದರಿಂದ ಸಾರ್ವಜನಿಕರು ಆತಂಕದಿಂದಲೇ ಓಡಾಡುವ ಸ್ಥಿತಿ ಎದುರಾಗಿದೆ ಎಂದು ಕಿಡಿಕಾರಿದರು.

ಪಟ್ಟಣದಲ್ಲಿ ಕುಡಿಯುವ ನೀರಿನ ಪೈಪ್ ಅಳವಡಿಕೆಗಾಗಿ ತೆಗೆದಿರುವ ಗುಂಡಿಗಳಿಂದ ಅನಾಹುತ ಸಂಭವಿಸಿದೆ. ಯಾವ ರಸ್ತೆ ನೋಡಿದರೂ ಗುಂಡಿಗಳೇ ಕಾಣುತ್ತಿವೆ. ಹೀಗಾಗಿ ತ್ವರಿತವಾಗಿ ಮುಚ್ಚಿಸಬೇಕು. ಅಪಘಾತ ವಲಯಗಳನ್ನು ಗುರುತಿಸಿ ನಾಮಫಲಕ ಅಳವಡಿಸಬೇಕು. ಪಟ್ಟಣದ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ಅಪಘಾತ ಹೆಚ್ಚುತ್ತಿರುವುದರಿಂದ ಪೊಲೀಸ್ ಇಲಾಖೆ ನೆರವಿನೊಂದಿಗೆ ಬ್ಯಾರಿಕೇಡ್ ಅಥವಾ ರಸ್ತೆ ಹಂಪ್‌ಗಳನ್ನು ಹಾಕಿಸಬೇಕು ಎಂದು ಒತ್ತಾಯಿಸಿದರು.

> ಪಟ್ಟಣದಿಂದ ಹಾರೋಹಳ್ಳಿ ಗ್ರಾಮದವರೆಗೂ ರಸ್ತೆ ಮಧ್ಯ ಬೀದಿ ದೀಪ ಅಳವಡಿಸುವ ಕಾಮಗಾರಿ ಕೆಲವು ತಾಂತ್ರಿಕ ಕಾರಣದಿಂದ ತಡವಾಗಿದೆ. ಶೀಘ್ರವೇ ರಸ್ತೆಗೆ ಬೀದಿ ದೀಪ ಅಳವಡಿಸಲಾಗುವುದು.
> –ಚಿದಾನಂದ್, ಲೋಕೋಪಯೋಗಿ ಇಲಾಖೆ ಎಇ.

ಪ್ರತಿಭಟನೆಯಲ್ಲಿ ಪುರಸಭೆ ಮಾಜಿ ಸದಸ್ಯರಾದ ಆರ್.ಸೋಮಶೇಖರ್, ಗಿರೀಶ್, ಚಂದ್ರು, ಶಿವಕುಮಾರ್, ಟಿಎಪಿಸಿಎಂಎಸ್ ನಿರ್ದೇಶಕ ಆದರ್ಶ, ಮಾಜಿ ಅಧ್ಯಕ್ಷ ಸತೀಶ್, ಮುಖಂಡರಾದ ಸಗಾಯಂ, ಚೇತನ್, ಉಮೇಶ್, ಕೃಷ್ಣೇಗೌಡ, ಸೋಮಣ್ಣ, ಬಿ.ಎಸ್.ಜಯರಾಜ್, ರಾಜೇಶ್, ಜಯರಾಮು, ಬೊಮ್ಮರಾಜು, ಕುಮರೇಶನ್, ಆರುಮುಗಂ, ವಾಹಿದ್, ಪ್ರಭಾಕರ್, ಗುರು, ಶೋಭಾ, ಶಶಿಕಲಾ, ಸುನಂದಮ್ಮ, ಚೈತ್ರಾ, ಮಂಗಳ, ರಾಜಮ್ಮ, ಸುಧಾ, ಐಶ್ವರ್ಯ ಸೇರಿದಂತೆ ಹಲವರಿದ್ದರು.

ಕೆಆರ್‌ಎಸ್ ಹಿನ್ನೀರಲ್ಲಿ ಒತ್ತುವರಿ ತೆರವಿಗೆ ಆದೇಶ



ಮಂಡ್ಯ, ಜ.7– ಜಿಲ್ಲೆಯ ಕೆಆರ್‌ಎಸ್ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ ಒತ್ತುವರಿ ತೆರವುಗೊಳಿಸಲು ಕೂಡಲೇ ಸರ್ವೆ ನಡೆಸುವಂತೆ ಜಿಲ್ಲಾಧಿಕಾರಿ ಡಾ.ಕುಮಾರ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೆಆರ್‌ಎಸ್ ಜಲಾಶಯ ರಾಜ್ಯದ ಪ್ರಮುಖ ಜಲಸಂಪನ್ಮೂಲವಾಗಿದ್ದು, ಮೈಸೂರು, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳ ಕುಡಿಯುವ ನೀರು, ಕೃಷಿ ಮತ್ತು ವಿದ್ಯುತ್ ಉತ್ಪಾದನೆಗೆ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಇಂತಹ ಪ್ರದೇಶ ಒತ್ತುವರಿಯಾಗಿರುವುದನ್ನು ತೆರವುಗೊಳಿಸಲೇಬೇಕೆಂದು ಹೇಳಿದರು.

ಶಾಸಕ ರಮೇಶ್ ಬಂಡಿಸಿದ್ದೇಗೌಡ ಹಾಗೂ ಎಂಎಲ್‌ಸಿ ದಿನೇಶ್ ಗೂಳಿಗೌಡ ಜಂಟಿಯಾಗಿ ಕೆ.ಆರ್.ಸಾಗರ ಅಣೆಕಟ್ಟೆ ಹಿನ್ನೀರಿನ ಪ್ರದೇಶಗಳಲ್ಲಿ ಒತ್ತುವರಿ ಪ್ರಕರಣಗಳು ಹೆಚ್ಚುತ್ತಿದ್ದು, ಅವುಗಳನ್ನು ತೆರವುಗೊಳಿಸುವ ಸಂಬಂಧ ಡಿಸಿಎಂಗೆ ಪತ್ರ ಬರೆದಿದ್ದರು. ಸದ್ಯ ಉಪ ಮುಖ್ಯಮಂತ್ರಿಗಳು ಈ ಸಂಬಂಧ ಸರ್ವೆ ಮಾಡಿ ಒತ್ತುವರಿಯನ್ನು ಕೂಡಲೇ ತೆರವುಗೊಳಿಸಿ ಗಡಿ ಕಲ್ಲುಗಳನ್ನು ನೆಟ್ಟು ವರದಿ ನೀಡುವಂತೆ ಆದೇಶಿಸಿದ್ದಾರೆ ಎಂದರು.

ಈ ಹಿನ್ನೆಲೆಯಲ್ಲಿ ಪಾಂಡವಪುರ ಉಪ ವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಅಣೆಕಟ್ಟೆ ಹಿನ್ನೀರಲ್ಲಿ ಅನಧಿಕೃತವಾಗಿ ನಡೆದಿರುವ ಒತ್ತುವರಿಗಳು ಜಲಾಶಯದ ಸಂಗ್ರಹ ಸಾಮರ್ಥ್ಯ ಕಡಿಮೆ ಮಾಡುತ್ತಿದ್ದು, ಮಳೆಗಾಲದಲ್ಲಿ ಪ್ರವಾಹದ ಅಪಾಯವನ್ನು ಹೆಚ್ಚಿಸುತ್ತಿದೆ. ಇದರಿಂದ ಸಾರ್ವಜನಿಕ ಆಸ್ತಿ ಹಾನಿಯಾಗುವ ಜೊತೆಗೆ ಪರಿಸರ ಸಮತೋಲನಕ್ಕೂ ಧಕ್ಕೆಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಒತ್ತುವರಿ ಇರುವ ನಿಖರ ಸ್ಥಳಗಳು, ವ್ಯಾಪ್ತಿ ಹಾಗೂ ಸ್ವರೂಪ ಗುರುತಿಸಲು ತಕ್ಷಣ ಸರ್ವೆ ಕಾರ್ಯ ಪ್ರಾರಂಭಿಸುವುದು ಅತ್ಯಂತ ಅವಶ್ಯಕವಾಗಿರುವುದರಿಂದ, ಜಲಸಂಪನ್ಮೂಲ ಇಲಾಖೆ, ಭೂ ದಾಖಲೆ ಇಲಾಖೆಗಳು ಸಮನ್ವಯದೊಂದಿಗೆ ಕೂಡಲೇ ಸರ್ವೆ ಕಾರ್ಯ ಆರಂಭಿಸಿ, ಸರ್ವೆ ಮೂಲಕ ಭೂಮಿ ಮತ್ತು ಖಾಸಗಿ ಭೂಮಿ ಗಡಿರೇಖೆ ಸ್ಪಷ್ಟಪಡಿಸಿ, ಕಾನೂನುಬಾಹಿರವಾಗಿ ಆಕ್ರಮಿಸಲಾದ ಪ್ರದೇಶಗಳನ್ನು ದಾಖಲಿಸಿ, ನಿಖರತೆಯುಳ್ಳ ವರದಿ ನೀಡುವಂತೆ ಸೂಚಿಸಿದ್ದು, ಕೆಆರ್‌ಎಸ್ ಅಣೆಕಟ್ಟೆ ಹಿನ್ನೀರಿನ ಪ್ರದೇಶವನ್ನು ಸಂರಕ್ಷಿಸುವ ಉದ್ದೇಶದಿಂದ, ಸಾರ್ವಜನಿಕ ಹಿತಾಸಕ್ತಿ ಗಮನದಲ್ಲಿಟ್ಟು ಕಾರ್ಯೋನ್ಮುಖರಾಗುವಂತೆ ತಿಳಿಸಿದರು.

ಮದ್ದೂರು ತಾಲೂಕು ಕಚೇರಿಗೆ ಡಿಸಿ ಭೇಟಿ



ಮದ್ದೂರು: ತಾಲೂಕು ಕಚೇರಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಬುಧವಾರ ಡಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕು ಕಚೇರಿಯ ವಿವಿಧ ಶಾಖೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಕಚೇರಿ ಕಾರ್ಯ ನಿರ್ವಹಣೆ, ಕಡತ ವಿಲೇವಾರಿ, ಸಾರ್ವಜನಿಕ ಸೇವೆಗಳ ಅನುಷ್ಠಾನ ಹಾಗೂ ಸಿಬ್ಬಂದಿ ಹಾಜರಾತಿ ಪರಿಶೀಲಿಸಿದರು. ಕಚೇರಿಯಲ್ಲಿದ್ದ ಸಾರ್ವಜನಿಕರ ಅಹವಾಲುಗಳನ್ನು ನೇರವಾಗಿ ಸ್ವೀಕರಿಸಿ, ಪ್ರತಿ ಅಹವಾಲನ್ನು ಗಂಭೀರವಾಗಿ ಪರಿಗಣಿಸಿ ನಿಗದಿತ ಅವಧಿಯೊಳಗೆ ಇತ್ಯರ್ಥಪಡಿಸುವಂತೆ ತಹಸೀಲ್ದಾರ್ ಅವರಿಗೆ ಸೂಚಿಸಿದರು.

ಇ–ಆಫೀಸ್ ವ್ಯವಸ್ಥೆಯಲ್ಲಿ ಬಾಕಿ ಇರುವ ಎಲ್ಲಾ ಕಡತಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡಿ, ಡಿಜಿಟಲ್ ಕಾರ್ಯ ವಿಧಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ನಿರ್ದೇಶನ ನೀಡಿದರು.

ಸಾರ್ವಜನಿಕರ ಅನಗತ್ಯ ಅಲೆದಾಟ ತಪ್ಪಿಸುವ ಉದ್ದೇಶದಿಂದ ಆದಾಯ ಮತ್ತು ಜಾತಿ ಪ್ರಮಾಣಪತ್ರ ಭೂ ಹಿಡುವಳಿ ಪ್ರಮಾಣ ಪತ್ರ, ವಂಶವೃಕ್ಷ, ನಿವಾಸ ಪ್ರಮಾಣ ಪತ್ರ ಸೇರಿದಂತೆ ಎಲ್ಲಾ ಸೇವೆಗಳನ್ನು ಸಕಾಲ ಯೋಜನೆಯಡಿ ನಿಗದಿತ ಅವಧಿಯಲ್ಲಿಯೇ ಒದಗಿಸಬೇಕು. ವಿಳಂಬ ಅಥವಾ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧಿಸಿದ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹೋಬಳಿ ಮಟ್ಟದ ಎಲ್ಲಾ ಸಿಬ್ಬಂದಿ ಕೇಂದ್ರ ಸ್ಥಾನದಲ್ಲೇ ಲಭ್ಯವಿದ್ದು, ಸಾರ್ವಜನಿಕರ ಮನವಿಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಕಚೇರಿಗೆ ನಿಗದಿತ ಸಮಯಕ್ಕೆ ಹಾಜರಾಗುವುದು, ಐಡಿ ಕಾರ್ಡ್ ಧರಿಸುವಿಕೆ, ಸ್ವಚ್ಛತೆ ಕಾಪಾಡುವುದು ಹಾಗೂ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವುದು ಕಡ್ಡಾಯ ಎಂದು ಸೂಚಿಸಿದರು.


ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಆಧಾರ್ ಸೀಡಿಂಗ್, ಇ–ಪೌತಿ ಖಾತಾ ಆಂದೋಲನ, ನಮೂನೆ 1 ರಿಂದ 5, ಗೈರು ವಿಲೆ ಕಡತಗಳ ವಿಲೇವಾರಿ, ಸಕಾಲ ಸೇವೆಗಳು, ನ್ಯಾಯಾಲಯ ಪ್ರಕರಣಗಳು, ಒತ್ತುವರಿ ತೆರವು, ಭೂ ಸುರಕ್ಷಾ, 11ಇ ತಿದ್ದುಪಡಿ, ಬಗರ್ ಹುಕುಂ ಅರ್ಜಿಗಳ ವಿಲೇವಾರಿ ಹಾಗೂ ಹಕ್ಕುಪತ್ರ ವಿತರಣೆಗಳ ಪ್ರಗತಿಯನ್ನು ಸಮಗ್ರವಾಗಿ ಪರಿಶೀಲಿಸಿದರು. ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ಗ್ರೇಡ್–2 ತಹಸೀಲ್ದಾರ್ ಸೋಮಶೇಖರ್ ಇತರರಿದ್ದರು.

ತ್ವರಿತವಾಗಿ ರೈತರು, ಸಾರ್ವಜನಿಕರ ಕೆಲಸ ಮಾಡಿ : ಶಾಸಕ ಹೆಚ್.ಟಿ.ಮಂಜು

ಕೆ.ಆರ್.ಪೇಟೆ ತಾಲೂಕಿನ ಮಾದಾಪುರ ಗ್ರಾಪಂ ವ್ಯಾಪ್ತಿಯ ಗೂಡೇಹೊಸಹಳ್ಳಿಯಲ್ಲಿ ಶಾಸಕ ಹೆಚ್.ಟಿ.ಮಂಜು ಅಧ್ಯಕ್ಷತೆಯಲ್ಲಿ ಜನಸ್ಪಂದನಾ ಕಾರ್ಯಕ್ರಮ ನಡೆಯಿತು.

ತಾಲೂಕು ಆಡಳಿತ, ವಿವಿಧ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಮಾದಾಪುರ ಗ್ರಾಪಂ ಮಟ್ಟದ ಜನಸಂಪರ್ಕ ಸಭೆ ಹಾಗೂ ಪ್ರಜಾ ಸ್ಪಂದನಾ ಸಭೆಯಲ್ಲಿ ಕೃಷಿ ಯಂತ್ರೋಪಕರಣ, ಹರಿಗೋಲು–ದೋಣಿ, ಮೇವು ಕಟಾವು ಯಂತ್ರ, ರೈತರಿಗೆ ಟ್ರಾಕ್ಟರ್, ಗಂಗಾ ಕಲ್ಯಾಣ ಯೋಜನೆಯಡಿ ರೈತರಿಗೆ ಕೊಳವೆ ಬಾವಿ ಮೋಟಾರ್, ಪೈಪ್ ಮತ್ತು ಇತರೆ ಪರಿಕರ, ಪೌತಿ ಖಾತೆ ದಾಖಲೆ, ವಿಧವಾ ವೇತನ, ವೃದ್ಧಾಪ್ಯ ಸೇರಿದಂತೆ ವಿವಿಧ ಮಾಸಾಶನಗಳ ಮಂಜೂರಾತಿ ಆದೇಶ ಪತ್ರ, ಗೂಡೇಹೊಸಹಳ್ಳಿ ಗೋಮಾಳದಲ್ಲಿ ಸಾಗುವಳಿ ಮಾಡುತ್ತಿದ್ದ ರೈತರಿಗೆ ಭೂ ಮಂಜೂರಾತಿ ಹಾಗೂ ದುರಸ್ತಿ ದಾಖಲೆ, ಮನೆ ಇ–ಸ್ವತ್ತು, ಮಹಿಳೆಯರಿಗೆ ಹೊಲಿಗೆ ಯಂತ್ರ ಸೇರಿದಂತೆ ಇನ್ನಿತರ ಸವಲತ್ತುಗಳನ್ನು 1000ಕ್ಕೂ ಹೆಚ್ಚು ಫಲಾನುಭವಿಗಳಿಗೆ ಶಾಸಕ ಹೆಚ್.ಟಿ.ಮಂಜು ವಿತರಿಸಿದರು. ಅಲ್ಲದೇ ಜನರಿಂದ ಅಹವಾಲು ಸ್ವೀಕರಿಸಿ ನೂರಾರು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿದರು.

ಇದೇ ವೇಳೆ ಚನ್ನರಾಯಪಟ್ಟಣ ತಾಪಂ ಇಓ ಹರೀಶ್ ಪ್ರಾಸ್ತಾವಿಕ ನುಡಿಗಳನ್ನಾಡಿ ಗ್ರಾಮಕ್ಕೆ ಹಾಗೂ ಮಾದಾಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಶಾಸಕರು ಮಾಡಿರುವ ಅಭಿವೃದ್ಧಿ ಕಾರ್ಯ ವಿವರಿಸಿ, ಹೇಮಾವತಿ ನದಿ ನೀರಿನ ಏತ ನೀರಾವರಿ ಸೌಲಭ್ಯ ಸೇರಿದಂತೆ ಶಾಸಕರಿಂದ ಆಗಬೇಕಾದ ಕೆಲಸ ಕಾರ್ಯಗಳ ಬಗ್ಗೆ ಶಾಸಕರು ಹಾಗೂ ಅಧಿಕಾರಿಗಳ ಗಮನ ಸೆಳೆದರು.



ಜನಸ್ಪಂದನಾ ಕಾರ್ಯಕ್ರಮವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ತಾಲೂಕಿನ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ. ಸರ್ಕಾರದಿಂದ ನಿರೀಕ್ಷಿತ ಅನುದಾನ ಸಿಗುತ್ತಿಲ್ಲ. ಸರ್ಕಾರ ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಅನುದಾನ ನೀಡಿದರೆ, ವಿಪಕ್ಷ ಶಾಸಕರಿಗೆ 25 ಕೋಟಿ ಅನುದಾನ ನೀಡುತ್ತಿದೆ. ಆದರೂ ಬರುವ ಅನುದಾನದಲ್ಲಿ ತಾಲೂಕಿನ ಜರೂರು ಅಗತ್ಯ ಇರುವ ಗ್ರಾಮಗಳಿಗೆ ಅನುದಾನ ಹಂಚಿಕೆ ಮಾಡಿ ಅಭಿವೃದ್ಧಿಗೆ ಕೈ ಜೋಡಿಸುತ್ತಿದ್ದೇನೆ. ಅಧಿಕಾರಿಗಳು ರೈತರ ಕೆಲಸಗಳನ್ನು ತ್ವರಿತವಾಗಿ ಮಾಡುವ ಮೂಲಕ ಅವರ ಸಮಸ್ಯೆ ಬಗೆಹರಿಸಬೇಕು. ಯಾವುದೇ ಕಾರಣಕ್ಕೂ ರೈತರನ್ನು ಕಚೇರಿಗೆ ಅಲೆಸಬೇಡಿ. ಸಮಯಕ್ಕೆ ಸರಿಯಾಗಿ ರೈತರು ಮತ್ತು ಸಾರ್ವಜನಿಕರ ಕೆಲಸವನ್ನು ಮಾಡಿಕೊಡುವಂತೆ ಮನವಿ ಮಾಡಿದರು.

ಸಭೆಯಲ್ಲಿ ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ತಾಪಂ ಇಓ ಸುಷ್ಮಾ, ಸಿಪಿಐ ಸುಮರಾಣಿ, ಮಾದಾಪುರ ಗ್ರಾಪಂ ಅಧ್ಯಕ್ಷ ಕೃಷ್ಣೇಗೌಡ, ಪಿಡಿಓ ಚಂದ್ರು, ಬಿಇಓ ವೈ.ಕೆ.ತಿಮ್ಮೇಗೌಡ, ಸರ್ವೆ ಇಲಾಖೆಯ ಸಿದ್ದಯ್ಯ, ಜಿಲ್ಲಾ ದಿಶಾ ಸಮಿತಿ ಸದಸ್ಯ ನರಸನಾಯಕ್, ಆರೋಗ್ಯಾಧಿಕಾರಿ ಡಾ.ಅಜಿತ್, ಡಾ.ಮಂಜುಳ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ದಿವಾಕರ್, ಕೃಷಿ ಸಹಾಯಕ ನಿರ್ದೇಶಕ ಸಂತೋಷ್, ಪಶು ವೈದ್ಯಕೀಯ ಸಹಾಯಕ ನಿರ್ದೇಶಕ ಡಾ.ದೇವರಾಜು, ತೋಟಗಾರಿಕೆ ಸಹಾಯಕ ನಿರ್ದೇಶಕ ಡಾ.ಲೋಕೇಶ್, ಮೀನುಗಾರಿಕೆ ಸಹಾಯಕ ನಿರ್ದೇಶಕ ಡಾ.ಜಗದೀಶ್, ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್ ಕುಮಾರ್, ತಾಲೂಕು ಅರಣ್ಯಾಧಿಕಾರಿ ಡಾ.ಅನಿತಾ, ಸಿಡಿಪಿಓ ವಿದ್ಯಾವತಿ, ಕಿಕ್ಕೇರಿ ಹೋಬಳಿ ರಾಜಸ್ವ ನಿರೀಕ್ಷಕ ನರೇಂದ್ರ, ಗ್ರಾಮ ಲೆಕ್ಕಾಧಿಕಾರಿ ಸುನೀಲ್ ಸೇರಿದಂತೆ ಇತರರಿದ್ದರು.

ಕಾರ್ಯಕ್ರಮಕ್ಕೂ ಮುನ್ನಾ ಗೂಡೇಹೊಸಹಳ್ಳಿ ಗ್ರಾಮದ ನೂತನ ಅಂಗನವಾಡಿ ಕಟ್ಟಡ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಶಾಸಕರು ಉದ್ಘಾಟಿಸಿದರು.

ಪೊಲೀಸ್ ಪೇದೆ ಆತ್ಮಹತ್ಯೆ



ಮದ್ದೂರು, ಜ.7– ಪೊಲೀಸ್ ಪೇದೆಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ನಗರದ ನ್ಯಾಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪೊಲೀಸ್ ಪೇದೆ ರಮೇಶ್ (35) ಆತ್ಮಹತ್ಯೆ ಮಾಡಿಕೊಂಡವರು. ಈತ ನಗರದ ಪೊಲೀಸ್ ಠಾಣೆ ಹಿಂಭಾಗದಲ್ಲಿರುವ ಪೊಲೀಸ್ ವಿಶ್ರಾಂತಿ ಗೃಹದಲ್ಲಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಪೊಲೀಸ್ ಪೇದೆಯೊಬ್ಬರು ವಿಶ್ರಾಂತಿ ಗೃಹಕ್ಕೆ ಹೋದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ ಎನ್ನಲಾಗಿದೆ.

ಈ ಸಂಬಂಧ ಮೃತರ ಪತ್ನಿ ಪುಷ್ಪಲತಾ ನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪತಿ ರಮೇಶ್ ಅವರಿಗೆ ಮತ್ತೊರ್ವ ಪೇದೆ ಮಹೇಶ್ ಎಂಬುವರು ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದರು. ಎಷ್ಟೋ ಬಾರಿ ಗಲಾಟೆ ಮಾಡಿದ್ದು, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಪೇದೆ ರಮೇಶ್ ಹಾಗೂ ದೂರು ದಾಖಲಾಗಿರುವ ಮಹೇಶ್ ಇಬ್ಬರೂ ನಗರದ ಪೊಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇಬ್ಬರೂ ಪೊಲೀಸ್ ಠಾಣೆ ಬಳಿಯ ಪೊಲೀಸ್ ವಸತಿ ಗೃಹದ ನಿವಾಸಿಗಳಾಗಿದ್ದರು ಎನ್ನಲಾಗಿದೆ. ಈ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಜ.11ರಿಂದ ಬಹುರೂಪಿ ರಾಷ್ಟ್ರೀಯ ರಂಗೋತ್ಸವ

ಜನಪದ ಸಂಭ್ರಮಕ್ಕೆ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಡಾ.ದುರ್ಗಾದಾಸ್ ಚಾಲನೆ ನೀಡುವರು. 12ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ಮಕ್ಕಳ ಬಹುರೂಪಿಯನ್ನು ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಡಾ.ಜಾಹೀದಾ, ರಂಗ ಸಮಾಜದ ಸದಸ್ಯರಾದ ಡಾ.ಕೆ.ರಾಮಕೃಷ್ಣಯ್ಯ, ಮಹಾಂತೇಶ್ ಗಜೇಂದ್ರಗಡ ಭಾಗವಹಿಸುವರು.

ನಾಟಕೋತ್ಸವದ ಅಧಿಕೃತ ಉದ್ಘಾಟನೆಯನ್ನು 12ರಂದು ಸಂಜೆ 5.30ಕ್ಕೆ ವನರಂಗದಲ್ಲಿ ಹಮ್ಮಿಕೊಳ್ಳಲಾಗಿದ್ದು, ಭಾರತೀಯ ರಂಗಭೂಮಿಯ ಹಿರಿಯ ಕಲಾವಿದೆ ಹೈಸ್ನಾಂ ಸಾವಿತ್ರಿ ದೇವಿ ರಂಗೋತ್ಸವಕ್ಕೆ ಚಾಲನೆ ನೀಡುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಬಹುರೂಪಿ ಉದ್ಘಾಟಿಸುವರು. ಪುಸ್ತಕ, ಕರಕುಶಲ ಮಳಿಗೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ರಂಗಸಂಚಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಬಿಡುಗಡೆ ಮಾಡುವರು. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬಾಬಾ ಸಾಹೇಬ್ ಛಾಯಾಚಿತ್ರ ಪ್ರದರ್ಶನ, ಸಂಸದ ಸುನೀಲ್ ಬೋಸ್ ಚಿತ್ರಕಲಾ ಪ್ರದರ್ಶನ ಅನಾವರಣ ಮಾಡುವರು. ಶಾಸಕ ಕೆಹರೀಶ್ ಗೌಡ ಅಧ್ಯಕ್ಷತೆ ವಹಿಸುವರು. ಇದೇ ವೇಳೆ ಹೈಸ್ನಾಂ ಸಾವಿತ್ರಿ ದೇವಿ ಅವರಿಗೆ ಬೆಳ್ಳಿ ಬಹುರೂಪಿ ರಂಗಗೌರವ ನೀಡಲಾಗುವುದು ಎಂದು ವಿವರಿಸಿದರು.

ವಿಚಾರ ಸಂಕಿರಣ: ಜ.17 ಮತ್ತು 18ರಂದು ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಜ.17ರಂದು ಬೆಳಗ್ಗೆ 10.30ಕ್ಕೆ ನವದೆಹಲಿಯ ದಿ ವೈರ್ ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ್ ವರದರಾಜನ್ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದು, ಎಂಎಲ್‌ಸಿ ಯತೀಂದ್ರ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಡಾ.ಕೆ.ರಾಕೇಶ್ ಕುಮಾರ್ ಭಾಗವಹಿಸುವರು. ಮೊದಲ ದಿನ ಜಾಗತಿಕ ಪ್ರಜಾಪ್ರಭುತ್ವಕ್ಕೆ ಎದುರಾಗುವ ಧಕ್ಕೆಗಳು, ಅಂಬೇಡ್ಕರ್ ಪರಿಕಲ್ಪನೆಯ ಪ್ರಜಾಪ್ರಭುತ್ವ: ಒಂದು ಮುಖಾಮುಖಿ, ಸಮಕಾಲಿನ ಭಾರತ ಮತ್ತು ಒಳಗೊಳ್ಳುವ ರಾಜಕಾರಣ, ಜಾಗತಿಕ ಮತ್ತು ಸ್ಥಳೀಯ ಸಾಮಾಜಿಕ ಅಸಮಾನತೆಗಳ ನಿರ್ಮೂಲನೆ ಸವಾಲುಗಳು ಮತ್ತು ವಿದ್ಯಮಾನಗಳು, ಪ್ಯಾಸಿಸಂ ವಿರುದ್ಧ ಪ್ರತಿರೋಧದ ಸಂಕೇತವಾದ ಸಂವಿಧಾನದ ವಿಚಾರದ ಕುರಿತು ಆಹ್ವಾನಿತರು ಮಾತನಾಡಲಿದ್ದಾರೆ ಎಂದರು.

ಜ.18ರಂದು ಅಂಬೇಡ್ಕರ್ ಆರ್ಥಿಕ ಚಿಂತನೆಗಳು ಮತ್ತು ಅದರ ಅನುಷ್ಠಾನ, ತಳಸಮುದಾಯಗಳ ಸಾಂಸ್ಕೃತಿಕ ಪ್ರತಿರೋಧ, ಅಂಬೇಡ್ಕರ್ ಮತ್ತು ಆಧ್ಯಾತ್ಮಿಕ ವಿಮೋಚನೆ, ಅಂಬೇಡ್ಕರ್ ಪರಿಕಲ್ಪನೆಯ ಕಾರ್ಮಿಕ ಸುಧಾರಣೆಗಳು ಮತ್ತು ಚಳವಳಿಗಳು, ಭಾರತದಲ್ಲಿ ಜನಪರ ಚಳವಳಿಗಳ ಪ್ರತಿರೋಧ ಮತ್ತು ಅಭಿವೃದ್ಧಿ, ಮಹಿಳಾ ಚಳವಳಿ ಸವಾಲುಗಳು ಮತ್ತು ವಿದ್ಯಮಾನಗಳು, ಭಾರತ ಸಂವಿಧಾನ: ಆಶಯ ಮತ್ತು ಬಿಕ್ಕಟ್ಟುಗಳು ವಿಷಯ ಕುರಿತು ಗಣ್ಯರು ವಿಚಾರ ಮಂಡಿಸಲಿದ್ದಾರೆ.

ಬಣ್ಣಗಳಲ್ಲಿ ಭೀಮಯಾನ: ಕಲಾವಿದರಾದ ಸ್ಮೃದುಲ್, ಶ್ರೀದರ್ಶನ್, ಮಿನಲ್, ಪೃಥ್ವಿಡಿ, ರಂಗನಾಥ್ ಅವರು ಬಣ್ಣಗಳಲ್ಲಿ ಭೀಮಯಾನ ಚಿತ್ರಿಸಲಿದ್ದಾರೆ.

ಬಾಬಾ ಸಾಹೇಬ್ ಸಂಗೀತ ಸ್ಮೃತಿ : ಈ ಬಾರಿಯ ಬಹುರೂಪಿ ಅಂಬೇಡ್ಕರ್ ಆಶಯದಲ್ಲಿ ನಡೆಯುತ್ತಿರುವುದರಿಂದ ಅಂಬೇಡ್ಕರ್ ಕುರಿತ ಹಾಡುಗಳನ್ನು ಹಾಡಿರುವ ಗಾಯಕರು ಬಾಬಾ ಸಾಹೇಬ್ ಸಂಗೀತ ಸ್ಮೃತಿ ಪ್ರಸ್ತುತಪಡಿಸಲಿದ್ದಾರೆ. ಜ.12ರಂದು ಸಂಜೆ 6 ಗಂಟೆಗೆ ಹೆಚ್.ಜನಾರ್ಧನ್ (ಜನ್ನಿ), ಗೊಲ್ಲಹಳ್ಳಿ ಶಿವಪ್ರಸಾದ್, ದೇವಾನಂದ ವರಪ್ರಸಾದ್ ಮತ್ತು ತಂಡ, 17ರಂದು ಮಹಾರಾಷ್ಟ್ರದ ಅನಿರುದ್ಧ ವಂಕರ್ ಮತ್ತು ತಂಡ, 18ರಂದು ಸಂಜೆ 6 ಗಂಟೆಗೆ ಪಿಚ್ಚಹಳ್ಳಿ ಶ್ರೀನಿವಾಸ್ ಮತ್ತು ಸಂಗಡಿಗರು, ಸಂಜೆ 7 ಗಂಟೆಗೆ ಪಂಜಾಬಿನ ಗಿನ್ನಿ ಮಾಹಿ ಮತ್ತು ತಂಡದವರು ಅಂಬೇಡ್ಕರ್ ಜೀವನಗಾಥೆಯನ್ನು ಹಾಡುಗಳ ಮೂಲಕ ಪ್ರಸ್ತುತಪಡಿಸಲಿದ್ದಾರೆ ಎಂದು ತಿಳಿಸಿದರು.

24 ನಾಟಕಗಳ ಪ್ರದರ್ಶನ: ಈ ಬಾರಿಯ ಬಹುರೂಪಿ ನಾಟಕೋತ್ಸವದಲ್ಲಿ ಮಹಾರಾಷ್ಟ್ರ, ಮಣಿಪುರ, ತಮಿಳುನಾಡು, ಅಸ್ಸಾಂ, ಕೇರಳ ರಾಜ್ಯಗಳ 5 ನಾಟಕಗಳು, ಕನ್ನಡ ಭಾಷೆಯ 12 ನಾಟಕಗಳು, ತುಳು ಭಾಷೆಯ 2, ಹಿಂದಿ–ಇಂಗ್ಲಿಷ್ ಭಾಷೆಯ 5 ನಾಟಕಗಳು ಸೇರಿದಂತೆ ಒಟ್ಟು 24 ನಾಟಕಗಳು ಭೂಮಿಗೀತ, ವನರಂಗ, ಕಲಾಮಂದಿರ ಮತ್ತು ಕಿರುರಂಗಮಂದಿರ ವೇದಿಕೆಗಳಲ್ಲಿ ಪ್ರದರ್ಶನಗೊಳ್ಳಲಿವೆ.

ಚಲನಚಿತ್ರೋತ್ಸವದಲ್ಲಿ ವಿವಿಧ ಭಾಷೆಗಳ 21 ಚಲಚಿತ್ರಗಳು ಪ್ರದರ್ಶನಗೊಳ್ಳಲಿವೆ. ಇದರ ಜತೆಗೆ ವಿವಿಧ ಜಿಲ್ಲೆಗಳ ಜಾನಪದ ಕಲಾತಂಡಗಳು ಈ ಬಾರಿಯೂ ಕಿಂದರಜೋಗಿ ಆವರಣದ ವೇದಿಕೆಯಲ್ಲಿ ಪ್ರದರ್ಶನ ನೀಡಲಿವೆ. ನಾಟಕ ವೀಕ್ಷಣೆಗೆ 100 ರೂ. ಟಿಕೆಟ್ ದರವಿದ್ದು, ಗುರುವಾರದಿಂದಲೇ ಟಿಕೆಟ್ ಮಾರಾಟ ಆರಂಭವಾಗಲಿದೆ. 70 ಮಳಿಗೆಗಳಲ್ಲಿ ಪುಸ್ತಕ, ಕರಕುಶಲ ವಸ್ತುಗಳು, ಆಹಾರ ಮೇಳ ಆಯೋಜಿಸಲಾಗಿದೆ ಎಂದು ವಿವರಿಸಿದರು.

ಬೀದಿ ನಾಟಕ : ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆರಂಭಕ್ಕೂ ಮುನ್ನ ಜ.9ರಂದು ಬೀದಿ ನಾಟಕಕ್ಕೆ ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ಮೈಮ್ ರಮೇಶ್ ಭಾಗವಹಿಸಲಿದ್ದಾರೆ. ನಗರದ ವಿವಿಧೆಡೆ ಬೀದಿ ನಾಟಕಗಳ ಪ್ರದರ್ಶನ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣದ ಉಪ ನಿರ್ದೇಶಕ ಡಾ.ಎಂ.ಡಿ. ಸುದರ್ಶನ, ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್. ಅಂಬೇಡ್ಕರ್ ತರಬೇತಿ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದ ಗೌರವ ಸಲಹೆಗಾರ ಬಸವರಾಜು ದೇವನೂರು, ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ, ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರ ಕುಮಾರ್, ಹಿರಿಯ ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್, ಚಲನಚಿತ್ರೋತ್ಸವ ಸಂಚಲಕರಾದ ಬಿ.ಎನ್.ಶಶಿಕಲಾ, ಮನು.ಕೆ, ಜನಪದ ಉತ್ಸವದ ಸಂಚಾಲಕಿ ಗೀತಾ ಮೋಂಟಡ್ಕ, ರಂಗ ಸಮಾಜದ ಸದಸ್ಯ ಸುರೇಶ್ ಬಾಬು, ರಾಷ್ಟ್ರೀಯ ವಿಚಾರ ಸಂಕಿರಣದ ಸಂಚಾಲಕಿ ಕೆ.ಆರ್.ನಂದಿನಿ ಉಪಸ್ಥಿತರಿದ್ದರು.

ಬಹುರೂಪಿಯಲ್ಲಿ ಪ್ರದರ್ಶನವಾಗುವ ಚಲನಚಿತ್ರಗಳು

ಮೈಸೂರು, ಜ.7(ಜಿಎ)–ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ರಂಗಾಯಣ ಶ್ರೀರಂಗ ರಂಗಮಂದಿರದಲ್ಲಿ ಚಲಚಿತ್ರೋತ್ಸವದ ನಡೆಯಲಿದೆ.

ಜ.11ರಂದು ಮಧ್ಯಾಹ್ನ 2 ಗಂಟೆಯಿಂದ 4.30ರವರೆಗೆ 'ಡಾ.ಬಾಬಾ ಸಾಹೇಬ್ ಸಾಹೇಬ್ (ಮಲಯಾಳಂ) ಚಿತ್ರ ಪ್ರದರ್ಶನವಾಗಲಿದೆ ಜ.12ರಂದು 10 ಗಂಟೆಗೆ 'ರೂಟ್ಸ್' (ಇಂಗ್ಲಿಷ್), 12 ಗಂಟೆಗೆ 'ಇಂಡಿಯಾ ಅನ್‌ಟಚ್ಡ್ : ಸ್ಟೋರೀಸ್ ಆಫ್ ಪೀಪಲ್ ಅಪಾರ್ಟ್' (ಇಂಗ್ಲಿಷ್), 2ಗಂಟೆಗೆ 'ಫುಲೆ' (ಹಿಂದಿ) ಚಲನಚಿತ್ರದ ಪ್ರದರ್ಶನವಿದೆ.

ಜ.13ರಂದು ಬೆಳಗ್ಗೆ 10 ಗಂಟೆಗೆ 'ಸಂವಿಧಾನ್ ಮೇಕಿಂಗ್ ಆಫ್ ದಿ ಇಂಡಿಯನ್ ಕಾನ್‌ಸ್ಟಿಟ್ಯೂಷನ್'(ಹಿಂದಿ), 12 ಗಂಟೆಗೆ 'ಜೈ ಭೀಮ್ ಕಾಮ್ರೇಡ್–1'(ಹಿಂದಿ), 2 ಗಂಟೆಗೆ 'ಮಾರಿಕೊಂಡವರು' (ಕನ್ನಡ), ಜ.14ರಂದು ಬೆಳಗ್ಗೆ 'ಮುಸಾಹರ್' (ಹಿಂದಿ), 12 ಗಂಟೆಗೆ 'ಜೈಭೀಮ್ ಕಾಮ್ರೇಡ್–2' (ಹಿಂದಿ), 2 ಗಂಟೆಗೆ 'ಕಾಳ್ಜಾಡಿ'(ಕನ್ನಡ). ಜ.15ರಂದು ಬೆಳಗ್ಗೆ 10 ಗಂಟೆಗೆ 'ಇನ್‌ಸೈಡ್ ದಿ ಲಾಸ್ಟ್ ಟ್ರೈಬ್ ಆಫ್ ಬಿಹಾರ್' (ಹಿಂದಿ), 12ಗಂಟೆಗೆ ' ಜೈ ಭೀಮ್ ಕಾಮ್ರೇಡ್–3'(ಹಿಂದಿ), 2 ಗಂಟೆಗೆ 'ಪರಿಯೇರುಮ್ ಪೆರುಮಾಳ್', ಜ.16ರಂದು ಬೆಳಗ್ಗೆ 10 ಗಂಟೆಗೆ 'ಕರ್ನಾಟಕದಲ್ಲಿ ಅಂಬೇಡ್ಕರ್ ಹೆಜ್ಜೆಗಳು'(ಕನ್ನಡ), 12 ಗಂಟೆಗೆ 'ಋತುಮತಿ'(ಕನ್ನಡ), 2 ಗಂಟೆಗೆ 'ಪಲ್ಲಟ' (ಕನ್ನಡ), ಜ.17ರಂದು 10 ಗಂಟೆಗೆ 'ಹೀರೋ' (ಇಂಗ್ಲಿಷ್), 12 ಗಂಟೆಗೆ 'ಫಾಟ್ಲೀ ಲಡೂ' (ಹಿಂದಿ), 2 ಗಂಟೆಗೆ 'ಹೆಬ್ಬುಲಿ ಕಟ್'(ಕನ್ನಡ), ಜ.18ರಂದು ಬೆಳಗ್ಗೆ 10 ಗಂಟೆಗೆ 'ಗಾಂಧಿ ಜಂಯತಿ'(ಕನ್ನಡ), 12 ಗಂಟೆಗೆ 'ಭಾರತದ ಪ್ರಜೆಗಳಾದ ನಾವು'(ಕನ್ನಡ), 2 ಗಂಟೆಗೆ 'ಹೇಮಾವತಿ'(ಕನ್ನಡ) ಚಲನಚಿತ್ರಗಳು ಪ್ರದರ್ಶನವಿರಲಿದೆ.

ಕಲಾಮಂದಿರ ಸೇರಿ 4 ಕಡೆ ನಾಟಕಗಳ ಪ್ರದರ್ಶನ

ಮೈಸೂರು, ಜ.7(ಜಿಎ)–ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಭೂಮಿಗೀತ ವನರಂಗ, ಕಿರುರಂಗಮಂದಿರ, ಕಲಾಮಂದಿರ ಸೇರಿದಂತೆ ನಾಲ್ಕು ಕಡೆ ನಾಟಕಗಳು ಪ್ರದರ್ಶನಗೊಳ್ಳಲಿದೆ.

ಭೂಮಿಗೀತ : ಪ್ರತಿದಿನ ಸಂಜೆ 6.30ಕ್ಕೆ ಭೂಮಿಗೀತದಲ್ಲಿ ನಾಟಕಗಳು ಪ್ರದರ್ಶವಾಗಲಿದ್ದು, ಮೊದಲ ದಿನ ಜ.12ರಂದು ಕೋಟಿಗಾನಹಳ್ಳಿ ರಾಮಯ್ಯ ರಚನೆಯಲ್ಲಿ ಚಿದಂಬರರಾವ್ ಜಂಬೆ ನಿರ್ದೇಶನದಲ್ಲಿ ರಂಗಾಯಣದ ರೆಪರ್ಟರಿ ಕಲಾವಿದರು 'ಅಂಬೇಡ್ಕರ್ ಕೊಲಾಜ್' ಕನ್ನಡ ನಾಟಕ ಪ್ರದರ್ಶನ ನಡೆಸಿಕೊಡುವರು.

ಜ.13ರಂದು 'ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ' (ಕನ್ನಡ), ಜ.14ರಂದು 'ಪಿ ಥದೊಯ್'(ಮಣಿಪುರ), ಜ.15ರಂದು 'ಮೀಡಿಯಾ'(ಕನ್ನಡ), ಜ.16ರಂದು 'ತೃತೀಯ ರತ್ನ' (ಮರಾಠಿ), ಜ.17ರಂದು 'ಕಳೆದು ಹೋದ ಹಾಡು'(ಕನ್ನಡ), 'ಕವನ್ ಆನ್ ಅಂಬೇಡ್ಕರೈಟ್ ಒಪೆರಾ'(ಹಿಂದಿ) ನಾಟಕಗಳು ಪ್ರದರ್ಶನವಿರಲಿದೆ.

ವನರಂಗ : ಪ್ರತಿದಿನ ಸಂಜೆ 7 ಗಂಟೆಗೆ ವನ ರಂಗದಲ್ಲಿ ನಾಟಕಗಳು ಪ್ರದರ್ಶವಾಗಲಿದ್ದು, ಜ.13ರಂದು 'ದದನ್ ರಾಜಾ' (ಅಸ್ಸಾಮಿ), ಜ.14ರಂದು 'ಸೇಮ್ ಸೇಮ್ ಬಟ್ ಡಿಫರೆಂಟ್'(ಇಂಗ್ಲಿಷ್, ಹಿಂದಿ), ಜ.15ರಂದು 'ದಿ ಫೈಯರ್' (ತುಳು), ಜ.16ರಂದು 'ಆಳಿದ ಮಾಸ್ವಾಮಿಗಳು'(ಕನ್ನಡ), ಜ.17ರಂದು 'ಕಿವುಡ ಮಾಡಿದ ಕಿತಾಪತಿ'(ಕಂಪನಿ ನಾಟಕ), ಜ.18ರಂದು 'ರುಮು ರುಮು ರುಮು'(ಕನ್ನಡ) ಪ್ರದರ್ಶನವಿದೆ.

ಕಿರುರಂಗ ಮಂದಿರ : ಪ್ರತಿದಿನ ಸಂಜೆ 7 ಗಂಟೆಗೆ ಕಿರುರಂಗ ಮಂದಿರಲ್ಲಿ ನಾಟಕಗಳು ಪ್ರದರ್ಶವಾಗಲಿದ್ದು, ಜ.12ರಂದು 'ಬ್ಯಾಗ್ ಡಾನ್ಸಿಂಗ್'(ಇಂಗ್ಲಿಷ್), ಜ.13ರಂದು 'ಕುಹೂ'(ಮಲಯಾಳಂ), ಜ.14ರಂದು 'ಬೆಲ್ಲದ ದೋಣಿ'(ಕನ್ನಡ), ಜ.15ರಂದು 'ಈದಿ'(ಕನ್ನಡ), ಜ.16ರಂದು 'ಸಿಫಾರ್'(ಕನ್ನಡ) ಪ್ರದರ್ಶನವಿದೆ.

ಕಲಾಮಂದಿರ : ಪ್ರತಿದಿನ ಬೆಳಗ್ಗೆ 11 ಗಂಟೆ ಹಾಗೂ ಸಂಜೆ 7 ಗಂಟೆಗೆ ಕಲಾಮಂದಿರಲ್ಲಿ ನಾಟಕಗಳು ಪ್ರದರ್ಶವಾಗಲಿದ್ದು, ಜ.12ರಂದು 'ಮಾಯಾದ್ವೀಪ' (ಕನ್ನಡ), ಜ.13ರಂದು 'ರೂಪಾಂತರ'(ಕನ್ನಡ), ಜ.14 'ಸೂರ್ಯಚಂದ್ರ' (ಕನ್ನಡ), ಜ.15ರುದು 'ತಾರಾಸ್ ಟ್ರಿಯೋ'(ಇಂಗ್ಲಿಷ್, ಹಿಂದಿ), ಜ.16ರಂದು 'ಅಂಬೇಡ್ಕರ್ ಕ ಬಚ್ಚೆ'(ಹಿಂದಿ), ಜ.17ರಂದು 'ಕಿಷ್ಕಿಂದೆ'(ತಮಿಳು) ನಾಟಕಗಳು ಪ್ರದರ್ಶನವಿದೆ.

ಸಿದ್ದರಾಮಯ್ಯ ಅರಸು ದಾಖಲೆ ಮುರಿದಿರಬಹುದು ಆದರೆ ಅವರ ಆಡಳಿತಕ್ಕೆ ಹೋಲಿಕೆ ಮೂರ್ಖತನ

● ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಾಗ್ದಾಳಿ ● ಅರಸು ಸಾಮಾಜಿಕ ಬದ್ಧತೆ ಇದ್ದಂತಹ ನಾಯಕ; ಸಿದ್ದರಾಮಯ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ

ಬೆಂಗಳೂರು, ಜ.7(ಕೆಎಂಶಿ)– ಭ್ರಷ್ಟಾಚಾರದಲ್ಲಿ ಮುಳುಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ದಿವಂಗತ ದೇವರಾಜ ಅರಸು ಆಡಳಿತಕ್ಕೆ ಹೋಲಿಕೆ ಮಾಡಿಕೊಳ್ಳುವುದು ಮೂರ್ಖತನ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ವಾಗ್ದಾಳಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅರಸು ಮತ್ತು ಸಿದ್ದರಾಮಯ್ಯ ಸರ್ಕಾರಕ್ಕೂ ಹೋಲಿಕೆ ಪ್ರಶ್ನೆಯೇ ಇಲ್ಲ.

ಅರಸು ಸಾಮಾಜಿಕ ಬದ್ಧತೆ ಇಟ್ಟುಕೊಂಡು ರೈತರು, ಬಡವರು ಮತ್ತು ಹಿಂದುಳಿದವರ ಪರವಾಗಿ ಯೋಜನೆಗಳನ್ನು ರೂಪಿಸಿ, ಶ್ರಮಿಸಿದರು. ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಎಲ್ಲಾ ಇಲಾಖೆಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ, ಶಾಂತಿ–ಸುವ್ಯವಸ್ಥೆ ಹಾಳಾಗಿದೆ, ಅಧಿಕಾರಿಗಳ ಮೇಲೆ ಹಿಡಿತವಿಲ್ಲ.



ಆಡಳಿತ ಪಕ್ಷದ ಜನಪ್ರತಿನಿಧಿಗಳೇ ಕಾನೂನು ಮೀರಿ ವರ್ತಿಸುತ್ತಿದ್ದಾರೆ. ಇವರ ಮುಂದೆ ಗೃಹ ಇಲಾಖೆ ಮತ್ತು ಪೋಲಿಸರು ಸಂಪೂರ್ಣ ನಿಷ್ಕ್ರೀಯರಾಗಿದ್ದಾರೆ. ಅರಸು ಅವರಿಗಿಂತ ಸಿದ್ದರಾಮಯ್ಯ ಹೆಚ್ಚು ದಿನ ಆಡಳಿತ ನಡೆಸಿದ ದಾಖಲೆ ಮಾಡಿರಬಹುದು, ಆದರೆ, ಉಳಿದ ಎಲ್ಲಾ ವಿಚಾರಗಳಲ್ಲೂ ಇವರದು ಶೂನ್ಯ ಸಾಧನೆ.

ದೇವರಾಜ ಅರಸು ಆಡಳಿತಕ್ಕೆ ಹೋಲಿಕೆ ಮಾಡಿಕೊಳ್ಳುವುದೇ ಅಪಹಾಸ್ಯ, ಇನ್ನು ಈ ಭ್ರಷ್ಟ ಆಡಳಿತವನ್ನು ಮುಂದುವರೆಸಬೇಕೆಂಬ ಅಭಿಲಾಷೆಯನ್ನೂ ವ್ಯಕ್ತಪಡಿಸುತ್ತಾರೆ.

ಎಲ್ಲಾ ರಂಗಗಳಲ್ಲಿ ವೈಫಲ್ಯ ಕಂಡಿರುವ ಈ ಸರ್ಕಾರದ ನಡವಳಿಕೆಯನ್ನು ಜನರ ಮುಂದಿಡಲು ಬಿಜೆಪಿ ರಾಜ್ಯಾದ್ಯಂತ ಹೋರಾಟ ಮಾಡಲಿದೆ. ಮುಂಬರುವ ಜಿಲ್ಲಾ, ತಾಲೂಕು, ಪಂಚಾಯತ್ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಿ ನಾವು ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ.

ಕಾರ್ಯಕರ್ತರನ್ನು ಹುರಿದುಂಬಿಸುವ, ಸರ್ಕಾರದ ವೈಫಲ್ಯಗಳನ್ನು ಜನರ ಮುಂದಿಡುವ ಉದ್ದೇಶದಿಂದಲೇ ಹೋರಾಟಕ್ಕೆ ಪಕ್ಷ ಅಣಿಯಾಗುತ್ತಿದೆ ಎಂದರು.

ಬೆನ್ನಲ್ಲೇ ಡೌಟು!

ಅವರು ಹೇಗೆ ಹೇಳುತ್ತಾರೆ. ನಾವು ಏನು ಮಾಡಿದ್ದೇವೆ ಎಂದು ಅವರು ಜನರನ್ನು ಕೇಳಬೇಕು ಎಂದರು. ಯಾವುದೇ ದಾಖಲೆಯನ್ನು ಮುರಿಯಲು ನಾನು ರಾಜಕೀಯ ಮಾಡುತ್ತಿಲ್ಲ. ಇದನ್ನೆಲ್ಲ ದಾಖಲೆಗಳ ದೃಷ್ಟಿಯಿಂದ ನಾನು ನೋಡುವುದಿಲ್ಲ. ಯಾರೂ ನೋಡಬಾರದು ಕೂಡಾ. ಇದು ಜನರ ಸೇವೆಗೆ ಸಿಕ್ಕಿರುವ ಅವಕಾಶದ ಭಾಗ್ಯ ಎಂದು ತಿಳಿದುಕೊಂಡಿದ್ದೇನೆ ಎಂದು ಹೇಳುತ್ತಾ, ಸಿಎಂ ಸಿದ್ದರಾಮಯ್ಯ ಅವರು ಮಂಗಳವಾರ ಐದು ವರ್ಷಗಳ ಪೂರ್ಣ ಅವಧಿಯನ್ನು ಪೂರ್ಣಗೊಳಿಸುವ ವಿಶ್ವಾಸ ವ್ಯಕ್ತಪಡಿಸಿದ್ದರು.

ವರ್ಲ್ಡ್ ಪವರ್‌ಗಿಂತ ವರ್ಡ್ ಪವರ್ ಹೆಚ್ಚು!

ಸರ್ಕಾರದ ಸಂಕಲ್ಪ ಎಂದರು. ಕರ್ನಾಟಕಕ್ಕೆ 13,945 ವೈದ್ಯಕೀಯ ಸೀಟುಗಳು ದೊರಕಿವೆ. ಬರಗಾಲದ ಜಿಲ್ಲೆ ಅಂತಿರೀ, ನಮ್ಮ ಶಾಸಕರು ಒಗ್ಗಟ್ಟಿನಿಂದ ಹೋರಾಡಿ ಕೆಲಸ ಮಾಡಿ ಬರಗಾಲ ಓಡಿಸುವ ಕೆಲಸ ಮಾಡಬೇಕು. ಬೊಮ್ಮಾಯಿ ಸಹಕಾರದೊಂದಿಗೆ ಮೆಡಿಕಲ್ ಕಾಲೇಜು ಉದ್ಘಾಟನೆ ಮಾಡಿದ್ದೇವೆ. ರಾಜ್ಯದ 70 ಮೆಡಿಕಲ್ ಕಾಲೇಜುಗಳಲ್ಲಿ 13,945 ಸೀಟು ಲಭ್ಯವಾಗಿವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು. ನಮ್ಮ ರಾಜ್ಯದಲ್ಲಿ ಹೆಚ್ಚು ಡಾಕ್ಟರ್ ರೆಡಿಯಾಗುತ್ತಿದ್ದಾರೆ. ಕರ್ನಾಟಕ ಇಡೀ ಭಾರತಕ್ಕೆ ಇಂಜಿನಿಯರ್ ಮತ್ತು ಡಾಕ್ಟರ್ ತಯಾರಿಸುವ ರಾಜ್ಯವಾಗಿದೆ ಎಂದರು.

ಪಿಹೆಚ್‌ಡಿ ಪದವಿ ಪ್ರದಾನ



ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಪ್ರೊ.ಕೆ. ನಾರಾಯಣ ಭಟ್ಟ ಅವರ ಮಾರ್ಗದರ್ಶನದಲ್ಲಿ ಬಿ.ಆರ್.ಉಮೇಶ್ ಕುಮಾರ್ ಅವರು ಸಂಶೋಧನೆ ನಡೆಸಿ ಸಂಸ್ಕೃತ ವಿಷಯದಲ್ಲಿ ಸಾದರಪಡಿಸಿದ 'ಶೈವಾಗಮೇಷು, ವೀರಶೈವ ವೇದಾಂತ ಸಮೀಕ್ಷ ಏಕಂ ಅಧ್ಯಯನಮ್' ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧನವನ್ನು ಮೈಸೂರು ವಿಶ್ವವಿದ್ಯಾಲಯ ಅಂಗೀಕರಿಸಿದೆ. ಇತ್ತೀಚೆಗೆ ನಡೆದ ವಿವಿಯ ಘಟಿಕೋತ್ಸವದಲ್ಲಿ ನಂಜನಗೂಡು ತಾಲೂಕಿನ ಬೊಕ್ಕಳ್ಳಿ ಗ್ರಾಮದ ಬಿ.ಆರ್. ಉಮೇಶ್ ಕುಮಾರ್ ಅವರು ಚಿನ್ನದ ಪದಕ ಹಾಗೂ ನಗದು ಬಹುಮಾನ ಪಡೆದುಕೊಂಡಿದ್ದಾರೆ.

ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಹಲ್ಲೆ



ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಹಲ್ಲೆ ಮಾಡುತ್ತಿರುವ ಸಿಸಿ ಟಿವಿ ದೃಶ್ಯ.

ಅವಾಚ್ಯ ಶಬ್ದಗಳಿಂದ ನಿಂದಿಸಿ ತಳ್ಳಾಡಿ, ಕಲ್ಲಿನಿಂದ ಹೊಡೆದು ಗಾಯಗೊಳಿಸಿದರಲ್ಲದೇ, ಅವರ ಬಟ್ಟೆ ಹರಿದು ಹಾಕಿ ಜೇಬಿನಲ್ಲಿದ್ದ 500 ರೂ. ಹಣ ಹಾಗೂ ಮೊಬೈಲ್ ಕಿತ್ತುಕೊಂಡಿದ್ದಾರೆ. ಆ ವೇಳೆ ಸಾರ್ವಜನಿಕರು ಸುತ್ತುವರೆಯುತ್ತಿದ್ದಂತೆ ಮೂವರು ಪರಾರಿಯಾಗಿದ್ದಾರೆ. ಆದರೆ ಕಾರ್ತಿಕ್ ಎಂಬುವನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಎನ್.ಆರ್. ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ಕುಮಾರ್ ಹಾಗೂ ಸಿಬ್ಬಂದಿ ಆತನನ್ನು ವಶಕ್ಕೆ ಪಡೆದಿದ್ದಾರೆ.

ಚಂದ್ರಶೇಖರ್ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಕಾರ್ತಿಕ್‌ನ ವಿಚಾರಣೆಗೊಳಪಡಿಸಿದಾಗ, ಪಾನಮತ್ತರಾಗಿದ್ದು, ಅಮೋಘ, ಜಿ ಹಾಗೂ ಪೀಪಿ ಸೇರಿ ಹಲ್ಲೆ ನಡೆಸಿದ್ದಾಗಿ ಒಪ್ಪಿಕೊಂಡಿದ್ದಾನೆ. ಪೊಲೀಸರು ಪರಾರಿ ಯಾಗಿರುವ ಮೂವರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಎನ್.ಆರ್. ಉಪ ವಿಭಾಗದ ಎಸಿಪಿ ಮ್ಯಾಥ್ಯೂ ಥಾಮಸ್, ಪೊಲೀಸರ ಮೇಲೆ ಹಾಡಹಗಲೇ ಹಲ್ಲೆ ನಡೆಸಿರುವ ಪುಂಡರ ಬಂಧಿಸುವಂತೆ ಕಟ್ಟಾಜ್ಞೆ ಮಾಡಿದ್ದಾರೆ.

ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ, ಸುತ್ತಮುತ್ತ ಮೂಲಸೌಕರ್ಯಕ್ಕೆ ಸಂಸದ ಯದುವೀರ್‌ಗೆ ಮನವಿ



ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ, ಸುತ್ತಮುತ್ತಲಿನ ಪ್ರದೇಶಗಳಿಗೆ ಮೂಲ ಸೌಕರ್ಯಕ್ಕಾಗಿ ಅಲ್ಲಿನ ನಿವಾಸಿಗಳು ಸಂಸದ ಯದುವೀರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.


ಮೈಸೂರು, ಜ.7(ಎಸ್‌ಪಿಎನ್)– ಮೈಸೂರು ಹೊರವಲಯದ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ (ಮೈಸೂರು ಪೂರ್ವ ವಲಯ) ಸೇರಿದಂತೆ ಅದಕ್ಕೆ ಹೊಂದಿಕೊಂಡಿರುವ ಇತರೆ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಅಲ್ಲಿನ ನಿವಾಸಿಗಳು ಸಂಸದ ಯದುವೀರ್ ಹಾಗೂ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಅವರಿಗೆ ಬುಧವಾರ ಪ್ರತ್ಯೇಕ ಮನವಿ ಸಲ್ಲಿಸಿದ್ದಾರೆ.

ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ ಸೇರಿದಂತೆ ಇತರೆ ಬಡಾವಣೆಗಳಿಗೆ ಮೂಲಸೌಕರ್ಯಗಳಾದ ನೀರು, ರಸ್ತೆ ಸೇರಿದಂತೆ ಇತರೆ ವ್ಯವಸ್ಥೆ ಕಲ್ಪಿಸಬೇಕು. ಈ ಭಾಗದ ತಿಪ್ಪಯ್ಯನಕೆರೆ ಅಭಿವೃದ್ಧಿ ವಿಚಾರವಾಗಿ ಸಂಸದರಿಗೆ, ಅಪರ ಜಿಲ್ಲಾಧಿಕಾರಿಗೆ ಖುದ್ದು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಈ ವೇಳೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಿ.ದೊರೆಸ್ವಾಮಿ, ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಕಾರ್ಯದರ್ಶಿ ಡಿ ಲೋಹಿತ್, ಚಿಕ್ಕಹಳ್ಳಿ ಪುಟ್ಟಣ್ಣ, ಎಸ್.ಶಿವಸ್ವಾಮಿ, ಶ್ರೀಕಂಠಮೂರ್ತಿ, ದೇವಪ್ಪಾಜಿ, ಪ್ರಭುಸ್ವಾಮಿ, ಮಹಾದೇವ ಸ್ವಾಮಿ, ಮಲ್ಲು ಶ್ರೀಶೈಲ ಕುಂಬಾರ, ಅಂಕಪ್ಪ ಪುಟ್ಟಪ್ಪ ನಂಜುಂಡಸ್ವಾಮಿ, ಉಮಾ ಶಂಕರ್, ವನರಾಜು, ಬಸವರಾಜು, ನಂಜಪ್ಪ, ಮಲ್ಲಿಕಾರ್ಜುನ ನಾಯಕ್ ಸೇರಿದಂತೆ ಇತರರಿದ್ದರು.

ಸಂಚಾರ ನಿಯಮಗಳ ಉಲ್ಲಂಘನೆ ವಿರುದ್ಧ ವಿಶೇಷ ತಪಾಸಣೆ

ಇಡೀ ನಗರದಾದ್ಯಂತ ಕಾನೂನು ಸುವ್ಯವಸ್ಥೆ, ಸಂಚಾರ ಪೊಲೀಸರ ಜಂಟಿ ಕಾರ್ಯಾಚರಣೆ





ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ರಸ್ತೆಯಲ್ಲಿ ಬುಧವಾರ ಸಂಜೆ ಪೊಲೀಸರು ವಾಹನಗಳ ತಪಾಸಣೆ ನಡೆಸಿದರು.


ಮೈಸೂರು,ಜ.7(ಪಿಎಂ)– ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಾಲನೆ, ಅಪಘಾತ ತಡೆ ಹಾಗೂ ಸಂಚಾರ ನಿಯಮಗಳ ಉಲ್ಲಂಘನೆ ಸಂಬಂಧ ಬುಧವಾರ ಸಂಜೆ ಇಡೀ ನಗರದಾದ್ಯಂತ ಕಾನೂನು ಸುವ್ಯವಸ್ಥೆ ಹಾಗೂ ಸಂಚಾರ ಪೊಲೀಸರು ಜಂಟಿಯಾಗಿ ವಾಹನಗಳ ವಿಶೇಷ ತಪಾಸಣೆ ನಡೆಸಿದರು.

ವಿಶೇಷವಾಗಿ ವ್ಹೀಲಿಂಗ್ ಮಾಡುವುದರ ವಿರುದ್ಧ ಹಾಗೂ ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಾಲನೆ ಮಾಡುವುದನ್ನು ಕೇಂದ್ರೀಕರಿಸಿ ತಪಾಸಣೆ ನಡೆಸಲಾಯಿತು. ನಗರದ ಎಲ್ಲಾ ಪ್ರಮುಖ ರಸ್ತೆಗಳಲ್ಲಿ ವಾಹನಗಳ ತಪಾಸಣೆ ನಡೆಸಲಾಯಿತು.

ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಈ ವಿಶೇಷ ತಪಾಸಣೆ ನಡೆಸಲಾಗಿದ್ದು, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೂಚನೆ ಮೇರೆಗೆ ಡಿಸಿಪಿ ಸುಂದರರಾಜ್ ಅವರ ಮಾರ್ಗದರ್ಶನದಲ್ಲಿ ಪೊಲೀಸರು ತಪಾಸಣೆ ನಡೆಸಿದರು. ಇಡೀ ನಗರದ ಎಲ್ಲಾ ಸಂಚಾರ ಹಾಗೂ ಕಾನೂನು ಸುವ್ಯವಸ್ಥೆ ಠಾಣೆಗಳ ಪೊಲೀಸರು ಜಂಟಿಯಾಗಿ ಸಂಜೆ 5ರಿಂದ ರಾತ್ರಿ 9ರವರೆಗೆ ಕಾರ್ಯಾಚರಣೆ ನಡೆಸಿದರು. ಈ ವೇಳೆ ಸಂಚಾರ ನಿಯಮಗಳ ಉಲ್ಲಂಘನೆ ವಿರುದ್ಧ ಕ್ರಮ ಜರುಗಿಸಿದರು.

ಚಿತ್ರದುರ್ಗದಲ್ಲಿ ಮರಕ್ಕೆ ಬೊಲೆರೊ ವಾಹನ ಡಿಕ್ಕಿ: ನಾಲ್ವರು ಸಾವು

ಚಿತ್ರದುರ್ಗ: ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಸಾಸಲು ಬಳಿ ಕಳೆದ ರಾತ್ರಿ ಭೀಕರ ಅಪಘಾತ ಸಂಭವಿಸಿದೆ. ಮರಕ್ಕೆ ಬೊಲೆರೊ ವಾಹನ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ. ಕಿರಣ್(25), ಅರುಣ್(32), ಗಿರಿರಾಜ್(46) ಸ್ಥಳದಲ್ಲೇ ಮೃತಪಟ್ಟರೆ ಗಂಭೀರವಾಗಿ ಗಾಯಗೊಂಡಿದ್ದ ಹನುಮಂತಪ್ಪ (32) ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.



ಒಂದೇ ಗ್ರಾಮದ ನಾಲ್ವರ ಸಾವು: ಮಾಯಕೊಂಡದಲ್ಲಿ ಅಡಿಕೆ ಕೆಲಸಕ್ಕೆ ಹೋಗಿ ವಾಪಸ್ ಬರುವಾಗ ಈ ಭೀಕರ ಅಪಘಾತ ಸಂಭವಿಸಿದೆ. ಮೃತರೆಲ್ಲರೂ ಕಲ್ಲವ್ವ ನಾಗತಿಹಳ್ಳಿಯವರಾಗಿದ್ದಾರೆ. ಒಂದೇ ಗ್ರಾಮದ ನಾಲ್ವರು ಮೃತಪಟ್ಟಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಜ.11ಕ್ಕೆ ಫಿಟ್ ಮೈಸೂರು ವಾಕಥಾನ್

ಸಾವಿರಾರು ಹೆಜ್ಜೆಗಳೊಂದಿಗೆ ಆರೋಗ್ಯದ ಸಂದೇಶ

ಮೈಸೂರು, ಜ.7– ಮೈಸೂರನ್ನು ಸುಸಜ್ಜಿತ ನಗರವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾಲಯ, ಜೆಎಸ್‌ಎಸ್ ಸಿಎಸ್‌ಆರ್, ಜಿಮ್ ಅಸೋಸಿಯೇಷನ್ ಮತ್ತು ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ನೇತೃತ್ವದಲ್ಲಿ ನಮ್ಮ ನಡಿಗೆ, ಆರೋಗ್ಯದ ಕಡೆಗೆ ಘೋಷವಾಕ್ಯದೊಂದಿಗೆ ಜ.11ರಂದು ನಡೆಸುತ್ತಿರುವ 'ಫಿಟ್ ಮೈಸೂರು ವಾಕಥಾನ್'ಗೆ ಅರಮನೆಗಳ ನಗರಿ ಸಜ್ಜಾಗಿದೆ. ಆರೋಗ್ಯಕರ ಮೈಸೂರು, ಸ್ವಚ್ಛ ಮೈಸೂರು, ಹಸಿರು ಮೈಸೂರು, ಸುರಕ್ಷಿತ ಮೈಸೂರು ಘೋಷಣೆಯೊಂದಿಗೆ ವಾಕಥಾನ್ ಆಯೋಜಿಸಲಾಗಿದೆ

ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ: ಆರಂಭಿಕ ದಿನಗಳಲ್ಲಿ 40–50 ಜನರೊಂದಿಗೆ ನಡೆಸಲಾಗುತ್ತಿದ್ದ ಫಿಟ್ ಮೈಸೂರು ವಾಕಥಾನ್‌ಗೆ ದಿನಗಳು ಕಳೆದಂತೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರಿನ ವಿವಿಧ ಸಂಘ–ಸಂಸ್ಥೆಗಳ ಬೆಂಬಲ, ಸಹಕಾರದೊಂದಿಗೆ ನಡೆದು ಬಂದಿರುವ ಫಿಟ್ ಮೈಸೂರು ಅಭಿಯಾನ ಎರಡು ವರ್ಷಗಳ ಹೊಸ್ತಿಲಿಗೆ ತಲುಪಿದೆ. ಫಿಟ್ ಮೈಸೂರು ವಾಕಥಾನ್‌ನಲ್ಲಿ ಇದೀಗ ಸಾವಿರಾರು ಜನರು ಭಾಗವಹಿಸುತ್ತಿದ್ದು, ಜ.11ರಂದು ನಡೆಯುವ ಬೃಹತ್ ವಾಕಥಾನ್‌ನಲ್ಲಿ ಅಂದಾಜು 7ರಿಂದ 8 ಸಾವಿರಕ್ಕೂ ಅಧಿಕ ಜನರು ಸೇರುವ ನಿರೀಕ್ಷೆ ಮೂಡಿಸಿದೆ.

ಫಿಟ್ ಮೈಸೂರು ಯೋಜನೆ: ಮೈಸೂರು ವಿಶ್ವವಿದ್ಯಾಲಯ, ಜೆಎಸ್‌ಎಸ್ ಸಿಎಸ್‌ಆರ್, ಜಿಮ್ ಅಸೋಸಿಯೇಷನ್ ಮತ್ತು ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ನೇತೃತ್ವದಲ್ಲಿ ಜ.11ರ ಬೆಳಗ್ಗೆ 5.30ಕ್ಕೆ ಮಾನಸಗಂಗೋತ್ರಿಯ ಬಯಲು ರಂಗಮಂದಿರದಿಂದ ಫಿಟ್ ಮೈಸೂರು ವಾಕಥಾನ್ ಆರಂಭಗೊಳ್ಳಲಿದೆ. ಬಳಿಕ 5 ಕಿ.ಮೀ. ವ್ಯಾಪ್ತಿಯ ವಾಕಥಾನ್ ಕುಕ್ಕರಹಳ್ಳಿ ಕೆರೆ ವ್ಯಾಪ್ತಿಯಲ್ಲಿ ಸಂಚರಿಸಿ, ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಮುಕ್ತಾಯಗೊಳ್ಳಲಿದೆ. ಈ ವೇಳೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ನಾಡಗೀತೆ ಹಾಗೂ ವಂದೇ ಮಾತರಂ ಗಾಯನ ನಡೆಯಲಿದೆ. ವಾಕಥಾನ್ ಆರಂಭಕ್ಕೂ ಮುನ್ನ ಝುಂಬಾ ನೃತ್ಯ ನಡೆಸಲಾಗುತ್ತದೆ. ವಾಕಥಾನ್‌ಗೆ ಗ್ರಾವಿಟಿ ಒನ್, ಕರ್ನಾಟಕ ಬ್ಯಾಂಕ್, ನಾರಾಯಣ ಹೃದಯಾಲಯ, ಎಂಡಿಜೆಎ, ಡಿಆರ್‌ಸಿ ಹಾಗೂ ಟ್ರಿಪ್ ದಾರ್ ಸೇರಿದಂತೆ ಶಾಲಾ–ಕಾಲೇಜುಗಳು, ಹಾಸ್ಟೆಲ್‌ಗಳು, ಎನ್‌ಎಸ್‌ಎಸ್, ಎನ್‌ಜಿಒಗಳು, ವಿವಿಧ ವ್ಯಾಪಾರಿ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು ಹಾಗೂ ಸಾರ್ವಜನಿಕರು ಒತ್ತಾಸೆಯಾಗಿದ್ದಾರೆ. ಈ ಮಹತ್ವದ ಯೋಜನೆ ಯಶಸ್ವಿಯಾಗುವ ವಿಶ್ವಾಸವನ್ನು, ಇದರ ರೂವಾರಿಯೂ ಆದ ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥರಾದ ಯೋಗಾತ್ಮ ಶ್ರೀಹರಿ ದ್ವಾರಕನಾಥ್ ವ್ಯಕ್ತಪಡಿಸಿದ್ದಾರೆ.

ಕಾರ್ಮಿಕರ ಸುರಕ್ಷತಾ ಖಾತರಿಗೆ ತಾಂತ್ರಿಕ ಸಮಿತಿಯಿಂದ ಪರಿಶೀಲನೆಗೆ ಆಗ್ರಹ

ಮೈಸೂರು, ಜ.7(ಎಸ್‌ಪಿಎನ್)– ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಕಾರ್ಮಿಕರ ಸುರಕ್ಷತಾ ಕ್ರಮಗಳ ಬಗ್ಗೆ ತಕ್ಷಣವೇ ತಾಂತ್ರಿಕ ಸಮಿತಿಯಿಂದ ಪರಿಶೀಲನೆ ನಡೆಸುವಂತೆ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಒತ್ತಾಯಿಸಿದೆ.

ಬೆಳಗಾವಿ ಬೈಲಹೊಂಗಲ ಮರಕುಂಬಿಯಲ್ಲಿರುವ ಸಕ್ಕರೆ ಕಾರ್ಖಾನೆಯಲ್ಲಿ ಸಂಭವಿಸಿದ ಭೀಕರ ಬಾಯ್ಲರ್ ಸ್ಫೋಟದಲ್ಲಿ ನಾಲ್ವರು ಕಾರ್ಮಿಕರು ದಾರುಣವಾಗಿ ಮೃತಪಟ್ಟಿದ್ದು, ಜೊತೆಗೆ ಆರು ಮಂದಿ ಗಂಭೀರವಾಗಿ ಗಾಯಗೊಂಡಿರುವುದು ಅತ್ಯಂತ ನೋವಿನ ಸಂಗತಿ ಎಂದು ಎಐಯುಟಿಸಿ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಕೆ.ಸೋಮಶೇಖರ್ ಯಾದಗಿರಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದಾರೆ.

ಈ ದುರಂತಕ್ಕೆ ಕಾರ್ಖಾನೆ ಆಡಳಿತ ಮಂಡಳಿಯೇ ಕಾರಣವಾಗಿದೆ. ಹಾಗಾಗಿ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರು ಆಯಾಯ ಕುಟುಂಬಗಳಿಗೆ ಆಧಾರ ಸ್ತಂಭವಾಗಿದ್ದರು. ಮೃತರ ಕುಟುಂಬಕ್ಕೆ ತಲಾ 50 ಲಕ್ಷ ಪರಿಹಾರವನ್ನು ಘೋಷಿಸಬೇಕು. ದುರಂತ ಸಾವಿಗೀಡಾದ ಕುಟುಂಬದ ಸದಸ್ಯರಿಗೆ ಖಾಯಂ ಉದ್ಯೋಗ ನೀಡಬೇಕು. ಗಾಯಗೊಂಡವರಿಗೆ ಅತ್ಯಾಧುನಿಕ ಚಿಕಿತ್ಸೆ ಮತ್ತು ಸಂಪೂರ್ಣ ವೇತನ ಸಹಿತ ರಜೆಯನ್ನು ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕಾರ್ಮಿಕರ ಸುರಕ್ಷತೆಯಲ್ಲಿ ವೈಫಲ್ಯ ಕಂಡು ಬರುವಂತಹ ಕಾರ್ಖಾನೆಗಳ ವಿರುದ್ಧ ತಕ್ಷಣವೇ ಕ್ರಿಮಿನಲ್ ಮೊಕದ್ದಮೆ ಹೂಡಿ ಬಂಧಿಸಬೇಕು. ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಸುರಕ್ಷತಾ ಕ್ರಮಗಳ ಬಗ್ಗೆ ತಕ್ಷಣವೇ ತಾಂತ್ರಿಕ ಸಮಿತಿಯಿಂದ ಪರಿಶೀಲನೆ ನಡೆಸಬೇಕು. ಕಾರ್ಮಿಕರ ಜೀವಕ್ಕೆ ಕುತ್ತು ತರುವ ಕಾರ್ಖಾನೆಗಳ ಪರವಾನಗಿಯನ್ನು ಕೂಡಲೆ ಅಮಾನತ್ತಿನಲ್ಲಿಡಬೇಕು ಎಂದು ಒತ್ತಾಯಿಸಿದರು.

ಜ.10ಕ್ಕೆ ಲಯನ್ಸ್ ಸಂಸ್ಥೆ ಜಿಲ್ಲೆ 317–ಜಿ ಪ್ರಾಂತ್ಯ 8ರ ಪ್ರಾಂತೀಯ ಸಮ್ಮೇಳನ

ಮೈಸೂರು, ಜ.7(ಎಂಟಿವೈ)– ಮೈಸೂರಿನ ವಿದ್ಯಾರಣ್ಯಪುರಂನಲ್ಲಿನ ಅಕ್ಕ ಮಹಾದೇವಿ ರಸ್ತೆಯ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಜ.10ರಂದು ಬೆಳಗ್ಗೆ 8.30ರಿಂದ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಜಿಲ್ಲೆ 317–ಜಿ ಪ್ರಾಂತ್ಯ 8ರ ಪ್ರಾಂತೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ಮುಖ್ಯ ಸಲಹೆಗಾರ ಡಾ.ಎನ್. ಕೃಷ್ಣೇಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಾಂತೀಯ ಸಮ್ಮೇಳನ ಬೆಳಗ್ಗೆ 8.30ಕ್ಕೆ ಆರಂಭವಾದರೂ ಸಭಾ ಕಾರ್ಯಕ್ರಮ ಬೆಳಿಗ್ಗೆ 10.30ಕ್ಕೆ ಜರುಗಲಿದೆ. ಲಯನ್ ಸಂಸ್ಥೆಯ ಪ್ರಾಂತೀಯ ಅಧ್ಯಕ್ಷ ಲ.ಎಸ್.ವಾಸುಕಿ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಸಮ್ಮೇಳನವನ್ನು 'ನಿಸ್ವಾರ್ಥ ಸೇವಾ ಮನೋಭಾವ' ಶೀರ್ಷಿಕೆಯಲ್ಲಿ ನಡೆಸಲಾಗುತ್ತಿದೆ. ಸಮ್ಮೇಳನದಲ್ಲಿ ಲಯನ್ ಸಂಸ್ಥೆಯ ಜಿಲ್ಲಾ ರಾಜ್ಯಪಾಲ ಲ.ಕೆ.ಎಲ್.ರಾಜಶೇಖರ್, ಆಶಾಕಿರಣ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಎನ್. ಮೋತಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಮುಕ್ತ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಜ್ಯೋತಿಶಂಕರ್ ಪ್ರಧಾನ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಮ್ಮೇಳನದ ಅತಿಥೇಯ ಸಮಿತಿ ಅಧ್ಯಕ್ಷ ಲ.ಎನ್.ಆರ್. ಮಹದೇವ್, ಕಾರ್ಯದರ್ಶಿ ಲ. ಸುರೇಶ್, ಖಜಾಂಜಿ ಲ.ವಿಶಾಲ್, ಲ.ಟಿ.ಹೆಚ್. ವೆಂಕಟೇಶ್, ಜಿಲ್ಲಾ ಕ್ಯಾಬಿನೆಟ್ ಕಾರ್ಯದರ್ಶಿ ಲ.ಸುನೀಲ್ ಕುಮಾರ್, ವಲಯ ಅಧ್ಯಕ್ಷ ಲ.ಶಶಿಕುಮಾರ್, ಲ.ಸುಧೀರ್ ಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದರು.

ಇದೇ ವೇಳೆ ಲಯನ್ ಸಂಸ್ಥೆಯ ಪ್ರಾಂತೀಯ ಅಧ್ಯಕ್ಷ ಎಸ್.ವಾಸುಕಿ ಮಾತನಾಡಿ, ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಅಂತರರಾಷ್ಟ್ರೀಯ ಸಂಸ್ಥೆಯಾಗಿದ್ದು, 100ಕ್ಕೂ ಹೆಚ್ಚು ಕ್ಲಬ್ ಹಾಗೂ 3200ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ. ಪ್ರಾಂತೀಯ ಸಮ್ಮೇಳನದಲ್ಲಿ ಸುಮಾರು 3 ಲಕ್ಷ ರೂ. ಮೌಲ್ಯದ ಸೇವಾ ಕಾರ್ಯಗಳಿಗೆ ಚಾಲನೆ ನೀಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮ್ಮೇಳನದ ಅತಿಥೇಯ ಸಮಿತಿ ಅಧ್ಯಕ್ಷ ಎನ್.ಆರ್. ಮಹದೇವ್, ಕಾರ್ಯದರ್ಶಿ ಸುರೇಶ್ ಕುಮಾರ್, ಜಿಲ್ಲಾ ಸಮಿತಿ ಹೆಚ್ಚುವರಿ ಕಾರ್ಯದರ್ಶಿ ನವೀನ್ ಸುಬ್ರಹ್ಮಣ್ಯಂ ಇದ್ದರು.

ನೀರಿನ ರಭಸಕ್ಕೆ ಕೊಚ್ಚಿ ಹೋದ 'ಶ್ರಮಬಿಂದು ಸಾಗರ್ ಬ್ಯಾರೇಜ್' ಕ್ರೆಸ್ಟ್ ಗೇಟ್; ದುರಸ್ತಿಗೆ ಅಧಿಕಾರಿಗಳ ಹರಸಾಹಸ

ಬಾಗಲಕೋಟೆ, ಜ.7– ಭಾರತದ ಮೊದಲ ಖಾಸಗಿ ಬ್ಯಾರೇಜ್‌ನ ಕ್ರೆಸ್ಟ್ ಗೇಟ್ 'ಶ್ರಮಬಿಂದು ಸಾಗರ್ ಬ್ಯಾರೇಜ್' ಕ್ರೆಸ್ಟ್ ಗೇಟ್ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿದ್ದು, ಅದರ ದುರಸ್ತಿಗೆ ಅಧಿಕಾರಿಗಳು ಹರಸಾಹಸ ಪಡುತ್ತಿದ್ದಾರೆ.



ಬಾಗಲಕೋಟೆಯ ಜಮಖಂಡಿ ತಾಲೂಕಿನ ಹಿಪ್ಪರಗಿಯಲ್ಲಿರುವ ಭಾರತದ ಮೊದಲ ಖಾಸಗಿ ಬ್ಯಾರೇಜ್ 'ಶ್ರಮಬಿಂದು ಸಾಗರ್'ನ ಕ್ರೆಸ್ಟ್ ಗೇಟ್ ಭಾರೀ ನೀರಿನ ಒತ್ತಡದಿಂದಾಗಿ ಹಾನಿಗೊಳಗಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಭಾರತದ ಮೊದಲ ಖಾಸಗಿ ಬ್ಯಾರೇಜ್ ಶ್ರಮಬಿಂದು ಸಾಗರ್‌ನ ಕ್ರೆಸ್ಟ್ ಗೇಟ್ ಮಂಗಳವಾರ ನದಿಯಲ್ಲಿನ ಭಾರೀ ನೀರಿನ ಒತ್ತಡದಿಂದಾಗಿ ತೀವ್ರವಾಗಿ ಹಾನಿಗೊಳಗಾಗಿದೆ.

ಮಧ್ಯಾಹ್ನದ ಸುಮಾರಿಗೆ ಸಂಭವಿಸಿದ ಈ ಘಟನೆಯು ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಬ್ಯಾರೇಜ್‌ನ ಗೇಟ್ ಸಂಖ್ಯೆ 22 ಹಾನಿಗೀಡಾಗಿ ಕೊಚ್ಚಿಕೊಂಡು ಹೋಗಿದೆ. ಇದರ ಪರಿಣಾಮವಾಗಿ ಜಲಾಶಯದಿಂದ ಗಮನಾರ್ಹ ಪ್ರಮಾಣದ ನೀರು ನಷ್ಟವಾಯಿತು. ಈ ಬ್ಯಾರೇಜ್ ಅನ್ನು ಹಿಪ್ಪರಗಿ ಬ್ಯಾರೇಜ್ ಎಂದು ಜನಪ್ರಿಯವಾಗಿ ಕರೆಯಲಾಗುತ್ತದೆ.

ಬಾಗಲಕೋಟೆ ಜಿಲ್ಲಾಡಳಿತದ ಅಧಿಕಾರಿಗಳ ಪ್ರಕಾರ, 1989ರಲ್ಲಿ ಮಾಜಿ ಕೇಂದ್ರ ಸಚಿವ ದಿವಂಗತ ಸಿದ್ದು ನ್ಯಾಮಗೌಡ ನೇತೃತ್ವದಲ್ಲಿ ಸ್ಥಳೀಯ ರೈತರು ಸುಮಾರು 1 ಕೋಟಿ ರೂ.ಗಳನ್ನು ಸಂಗ್ರಹಿಸಿ ನಿರ್ಮಿಸಿದ ಬ್ಯಾರೇಜ್ ಇದಾಗಿದ್ದು, ಇದರಲ್ಲಿ ಸುಮಾರು 6 ಟಿಎಂಸಿ ನೀರು ಸಂಗ್ರಹವಾಗಿದ್ದು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಮಾರು 75,000 ಎಕರೆ ಕೃಷಿ ಭೂಮಿಗೆ ನೀರುಣಿಸಲಾಗಿತ್ತು. ಅದೃಷ್ಟವಶಾತ್, ಕೆಳಮುಖ ಪ್ರದೇಶಗಳಿಗೆ ನೀರು ಹಠಾತ್ತನೆ ನುಗ್ಗಿತಾದರೂ ಯಾವುದೇ ಬೆಳೆ ಹಾನಿಯಾಗಿಲ್ಲ ಎಂದು ಹಿರಿಯ ಕಂದಾಯ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

ವಿಶ್ವ ಪ್ರಸನ್ನ ತೀರ್ಥರ ಆಶೀರ್ವಾದ ಪಡೆದ ಶಾಸಕ ಟಿ.ಎಸ್.ಶ್ರೀವತ್ಸ



ಪೇಜಾವರ ಶ್ರೀಗಳನ್ನು ಶಾಸಕ ಟಿ.ಎಸ್.ಶ್ರೀವತ್ಸ ಭೇಟಿ ಮಾಡಿ ಆಶೀರ್ವಾದ ಪಡೆದರು.

ಮೈಸೂರು, ಜ.7(ಎಸ್‌ಪಿಎನ್)–ಮೈಸೂರು ತೊಣಚಿಕೊಪ್ಪಲಿನ ಶ್ರೀ ಕೃಷ್ಣಧಾಮದಲ್ಲಿ ಹಮ್ಮಿಕೊಂಡಿರುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಗಮಿಸಿದ್ದ ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಶ್ರೀ ಪಾದಂಗಳವರನ್ನು ಬುಧವಾರ ಶಾಸಕ ಟಿ.ಎಸ್.ಶ್ರೀವತ್ಸ ಭೇಟಿ ಮಾಡಿ, ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಮುಖಂಡರಾದ ರವಿಶಾಸ್ತ್ರಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ.ಆರ್. ಸತ್ಯನಾರಾಯಣ್, ಬಿಜೆಪಿ ಮುಖಂಡರಾದ ಪ್ರದೀಪ್ ಕುಮಾರ್, ಕಡಕೋಳ ಜಗದೀಶ್, ರಂಗನಾಥ್, ಚೇತನ್ ಇನ್ನಿತರರಿದ್ದರು.



ಅಭಿನಂದನೆ...

ಮೈಸೂರು ಗ್ರಾಮಾಂತರ ವಲಯ ಡಿವೈಎಸ್‌ಪಿಯಾಗಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಟಿ.ಬಿ ರಾಜಣ್ಣ ಅವರನ್ನು ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ಬುಧವಾರ ಅಭಿನಂದಿಸಿದರು.

ಜನಸಾಮಾನ್ಯರ ಹಲವು ಸಮಸ್ಯೆಗಳ ಈಗಾಗಲೇ ಪರಿಹರಿಸಿದ್ದೇನೆ

● ಸಂಸದ ಯದುವೀರ್ ಸ್ಪಷ್ಟನೆ ● ವಿವಿಧ ಗ್ರಾಮಗಳಲ್ಲಿ ಜನ ಸಂಪರ್ಕ ಸಭೆ

ಮೈಸೂರು, ಜ.7(ಬಿಎಲ್‌ಯು)– ಸಾರ್ವಜನಿಕರು ಸಲ್ಲಿಸಿರುವ ಅಹವಾಲುಗಳಿಗೆ ಈಗಾಗಲೇ ಪರಿಹಾರ ಕಲ್ಪಿಸಿದ್ದೇನೆ ಎಂದು ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ನಾಗನಹಳ್ಳಿ, ಬೆಲವತ್ತ ಹಾಗೂ ಆಲನಹಳ್ಳಿ ಗ್ರಾಮದಲ್ಲಿ ಇಂದು ಜನ ಸಂಪರ್ಕ ಸಭೆಯ ವೇಳೆ ಈ ವಿಚಾರವನ್ನು ಜನರ ಗಮನಕ್ಕೆ ತಂದರು.



ಜನ ಸಂಪರ್ಕ ಸಭೆಯಿಂದ ಜನಸಾಮಾನ್ಯರ ಸಮಸ್ಯೆ ಏನೆಂದು ನನ್ನ ಅರಿವಿಗೆ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಪಂಚಾಯತ್‌ಗೆ ಭೇಟಿ ನೀಡುತ್ತಿದ್ದೇನೆ. ರೈಲ್ವೆ, ರಸ್ತೆ, ಶಾಲಾ ಅಭಿವೃದ್ಧಿ ಹಾಗೂ ಕೆಎಸ್‌ಆರ್ ಟಿಸಿ ಬಸ್‌ಗಳ ಸಮಸ್ಯೆಯನ್ನು ಜನರು ತಿಳಿಸಿದ್ದಾರೆ. ಈಗಾಗಲೇ ಇಂತಹ ಹಲವು ಸಮಸ್ಯೆಗಳನ್ನು ಸ್ಥಳದಲ್ಲೇ ನಿವಾರಿಸಿದ್ದೇನೆ ಎಂದು ಯದುವೀರ್ ಹೇಳಿದರು.

ಜನರು ಸಲ್ಲಿಸುವ ಅಹವಾಲುಗಳನ್ನು ಪರಿಹರಿಸಲು ಮುಂದಾಗಬೇಕು ಎಂದು ಅಧಿಕಾರಿಗಳಿಗೂ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಅಗತ್ಯವಿದ್ದರೆ ನಾನೇ ಇಲಾಖಾ ಕಚೇರಿಗಳಿಗೆ ಭೇಟಿ ನೀಡಿ, ಪ್ರಗತಿ ಪರಿಶೀಲನೆ ನಡೆಸುತ್ತೇನೆ ಎಂದು ತಿಳಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜನಪರ ಕೆಲಸ ಮಾಡುತ್ತಿದ್ದಾರೆ. ಇದಕ್ಕಾಗಿ ಹಲವು ಮಹತ್ವದ ಯೋಜನೆ ಕೂಡ ರೂಪಿಸಿದ್ದಾರೆ. ಆದರೆ ಅವುಗಳನ್ನು ಅನುಷ್ಠಾನ ಮಾಡಲು ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ ಎಂದು ಆರೋಪಿಸಿದರು.

ಮುಂದಿನ ದಿನಗಳಲ್ಲಿ ಇಂತಹ ಜನ ಸಂಪರ್ಕ ಸಭೆಗಳನ್ನು ಹೆಚ್ಚಾಗಿ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ದಿನೇಶ್ ಸೇರಿದಂತೆ ಇತರರು ಯದುವೀರ್ ಅವರನ್ನು ಅಭಿನಂದಿಸಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ರಘು, ರುದ್ರಮೂರ್ತಿ, ಮಂಡಲದ ಅಧ್ಯಕ್ಷ ಪೈಲ್ವಾನ್ ರವಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ ಸೇರಿದಂತೆ ಅಧಿಕಾರಿಗಳು ಈ ವೇಳೆ ಹಾಜರಿದ್ದರು.

ದೇಶ - ವಿದೇಶ

ಎಸ್‌ಐಆರ್ ಒತ್ತಡಕ್ಕೆ ಏಳನೇ ಬಲಿ: ಪಶ್ಚಿಮ ಬಂಗಾಳದಲ್ಲಿ ಮತ್ತೊಬ್ಬ ಬಿಎಲ್‌ಓ ಸಾವು


ಕೋಲ್ಕತ್ತಾ: ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಬುಧವಾರ ಸಾವಿಗೀಡಾಗಿದ್ದು, ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಯಲ್ಲಿನ ಅತಿಯಾದ ಕೆಲಸದ ಹೊರೆಯಿಂದಾಗಿಯೇ ಅವರು ಒತ್ತಡಕ್ಕೊಳಗಾಗಿದ್ದರು ಎಂದು ಅವರ ಕುಟುಂಬ ಸದಸ್ಯರು ಆರೋಪಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಸಂಪ್ರೀತಾ ಚೌಧರಿ ಸನ್ಯಾಲ್ ಎಂದು ಗುರುತಿಸಲಾಗಿದ್ದು, ಅವರು ಕಳೆದ ಕೆಲವು ದಿನಗಳಿಂದ ಅಸ್ವಸ್ಥರಾಗಿದ್ದರು ಮತ್ತು ವೈದ್ಯರು ವಿಶ್ರಾಂತಿ ಪಡೆಯಲು ಸೂಚಿಸಿದ್ದರು. ಆದರೆ, ಅವರು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕಾಗಿ ಕೆಲಸ ಮುಂದುವರೆಸಿದರು ಎಂದು ಅವರ ಪತಿ ಹೇಳಿದ್ದಾರೆ.

ಎಸ್‌ಐಆರ್ ಕೆಲಸದ ಹೊರೆ ಹೆಚ್ಚಾದಂತೆ ಅವರ ಸ್ಥಿತಿ ಹದಗೆಟ್ಟಿತು. ಬುಧವಾರ ಮುಂಜಾನೆ ಅವರು ನಮ್ಮ ನಿವಾಸದಲ್ಲಿ ನಿಧನರಾದರು ಎಂದು ಅವರು ಹೇಳಿದರು. ಸನ್ಯಾಲ್ ಅವರು ಐಸಿಡಿಎಸ್ ಉದ್ಯೋಗಿಯಾಗಿ ಕೆಲಸ ಮಾಡುತ್ತಿದ್ದರು ಮತ್ತು ಇಂಗ್ಲಿಷ್ ಬಜಾರ್ ಪುರಸಭೆ ಪ್ರದೇಶದ ಬೂತ್ ಸಂಖ್ಯೆ 163ರ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಆಗಿ ಹೆಚ್ಚುವರಿ ಜವಾಬ್ದಾರಿಯನ್ನು ವಹಿಸಲಾಗಿತ್ತು.

ಬಿಹಾರದಲ್ಲಿ ಆಭರಣ ಅಂಗಡಿಗಳಿಗೆ ಹಿಜಾಬ್ ಸೇರಿ ಮುಖ ಮುಚ್ಚಿಕೊಂಡು ಬರುವ ಗ್ರಾಹಕರಿಗೆ ನಿಷೇಧ

ಪಾಟ್ನಾ: ಹಿಜಾಬ್ ಮತ್ತು ನಿಖಾಬ್ ಧರಿಸಿದವರು




ಸೇರಿದಂತೆ ಮುಖ ಮುಚ್ಚಿಕೊಂಡ ಗ್ರಾಹಕರಿಗೆ ಪ್ರವೇಶ ನಿರಾಕರಿಸಲು ಆಭರಣ ಅಂಗಡಿಗಳ ಮಾಲೀಕರು ನಿರ್ಧರಿಸಿದ್ದು, ಬಿಹಾರದಲ್ಲಿ ಹೊಸ ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಇಂತಹ ಕ್ರಮ ಜಾರಿಗೆ ತರುತ್ತಿರುವುದು ಇದೇ ಮೊದಲು. ಅಪರಾಧವನ್ನು ತಡೆಗಟ್ಟುವ ಉದ್ದೇಶವನ್ನು ಅಂಗಡಿ ಮಾಲೀಕರು ಹೊಂದಿದ್ದಾರೆ ಎಂದು ಹೇಳಿದ್ದರೂ, ವಿರೋಧ ಪಕ್ಷವಾದ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಇದನ್ನು ತೀವ್ರವಾಗಿ ವಿರೋಧಿಸಿದೆ. ಇದು ಸಂವಿಧಾನ ಬಾಹಿರ ಮತ್ತು ನಿರ್ದಿಷ್ಟ ಸಮುದಾಯದ ಧಾರ್ಮಿಕ ಭಾವನೆಗಳ ಮೇಲಿನ ದಾಳಿಯಾಗಿದೆ ಎಂದು ಟೀಕಿಸಿದೆ.

ಈ ಕ್ರಮವು ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಿದೆ ಮತ್ತು ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಲಾದ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಮೊಟಕುಗೊಳಿಸುವ ಪ್ರಯತ್ನವಾಗಿದೆ ಎಂದು ಆರ್‌ಜೆಡಿ ವಕ್ತಾರ ಎಜಾಜ್ ಅಹ್ಮದ್ ಹೇಳಿದ್ದಾರೆ. ಈ ನಿರ್ಧಾರಕ್ಕೆ ಅವರು ಬಿಜೆಪಿ–ಆರ್‌ಎಸ್‌ಎಸ್ ಅನ್ನು ದೂಷಿಸಿದ್ದಾರೆ.

ಭಯೋತ್ಪಾದನೆ ವಿರುದ್ಧದ ಹೋರಾಟ ಕುರಿತು ಪ್ರಧಾನಿ ಮೋದಿ–ನೆತನ್ಯಾಹು ಮಹತ್ವದ ಚರ್ಚೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಇಸ್ರೇಲ್



ಪ್ರಧಾನಿ ಬೆಂಜಮಿನ್ ನೆತನ್ಯಾಹು ಬುಧವಾರ ತಮ್ಮ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದ್ದಾರೆ.

Xನಲ್ಲಿ ಪೋಸ್ಟ್ ಮಾಡಿದ ಮೋದಿ, ಭಯೋತ್ಪಾದನೆಯ ವಿರುದ್ಧ ಹೆಚ್ಚಿನ ದೃಢನಿಶ್ಚಯದಿಂದ ಹೋರಾಡುವ ತಮ್ಮ ಹಂಚಿಕೆಯ ಸಂಕಲ್ಪವನ್ನು ಪುನರುಚ್ಚರಿಸಿದ್ದಾರೆ ಎಂದು ಹೇಳಿದರು.

ನನ್ನ ಸ್ನೇಹಿತ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಮಾತನಾಡಲು ಮತ್ತು ಅವರಿಗೆ ಮತ್ತು ಇಸ್ರೇಲ್ ಜನರಿಗೆ ಹೊಸ ವರ್ಷದ ಶುಭಾಶಯಗಳನ್ನು ತಿಳಿಸಲು ಸಂತೋಷವಾಗಿದೆ ಎಂದು ಮೋದಿ ಹೇಳಿದರು.

ಮುಂದಿನ ವರ್ಷದಲ್ಲಿ ಭಾರತ–ಇಸ್ರೇಲ್ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಮಾರ್ಗಗಳ ಬಗ್ಗೆ ನಾವು ಚರ್ಚಿಸಿದ್ದೇವೆ ಎಂದು ಮೋದಿ ಹೇಳಿದರು.

ಪ್ರಾದೇಶಿಕ ಪರಿಸ್ಥಿತಿಯ ಬಗ್ಗೆಯೂ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿರುವುದಾಗಿ ಮೋದಿ ತಿಳಿಸಿದ್ದಾರೆ.

ದುಡ್ಡು ಕೇಳಿದ್ರೆ ಲೈಂಗಿಕ ಕಿರುಕುಳ ಕೇಸ್ ಹಾಕ್ತೀನಿ: ನೂರಾರು ಕಿಮೀ ಪ್ರಯಾಣಿಸಿ ಕ್ಯಾಬ್ ಚಾಲಕನಿಗೆ ಮಹಿಳೆ ಬೆದರಿಕೆ!


ಗುರುಗ್ರಾಮ: ಮಹಿಳೆಯೊಬ್ಬಳು ಕ್ಯಾಬ್ ಚಾಲಕನ ಕಾರಿನಲ್ಲಿ ಗಂಟೆಗಟ್ಟಲೇ ಪ್ರಯಾಣಿಸಿದ ನಂತರ ಶುಲ್ಕ ಪಾವತಿಸಲು ನಿರಾಕರಿಸಿದ್ದಾಳೆ, ಜೊತೆಗೆ ಹಣ ಕೇಳಿದರೆ ಪೊಲೀಸರಿಗೆ ದೂರು ನೀಡುವ ಬೆದರಿಕೆ ಹಾಕಿದ್ದಾಳೆ.

ಜ್ಯೋತಿ ದಲಾಲ್ ಎಂಬ ಮಹಿಳೆ ಮಂಗಳವಾರ ಬೆಳಗ್ಗೆ 8 ಗಂಟೆ ಜಿಯಾವುದ್ದೀನ್ ಎಂಬ ಚಾಲಕನ ಕಾರು ಹತ್ತಿದ್ದಾಳೆ. ಮೊದಲಿಗೆ ಸೆಕ್ಟರ್ 31, ನಂತರ ಬಸ್ ನಿಲ್ದಾಣ, ಅದಾದ ಮೇಲೆ ಸೈಬರ್ ಸಿಟಿಗೆ ಕರೆದೊಯ್ಯುವಂತೆ ತಿಳಿಸಿದ್ದಾಳೆ. ನಂತರ ಜಿಯಾವುದ್ದೀನ್ ಬಳಿ ಆಕೆ ಸ್ವಲ್ಪ ಹಣ ಕೇಳಿದ್ದಾಳೆ. ಈ ವೇಳೆ ಚಾಲಕ 700 ರೂ ಹಣ ನೀಡಿದ್ದಾನೆ. ಅದರಲ್ಲಿ ಆಕೆ ವಿವಿಧ ಸ್ಥಳಗಳಲ್ಲಿ ತಿಂದು, ಕುಡಿದಿದ್ದಾಳೆ. ಮಧ್ಯಾಹ್ನದ ವೇಳೆಗೆ ಹಣ ಪಾವತಿಸಿ ಪ್ರಯಾಣವನ್ನು ಕೊನೆಗೊಳಿಸುವಂತೆ ನಾನು ಒತ್ತಾಯಿಸಿದಾಗ ಆಕೆ ಕೋಪಗೊಂಡು, ಹಣ ಕೇಳಿದರೆ ಪೊಲೀಸರ ಬಳಿ ಲೈಂಗಿಕ ಕಿರುಕುಳ ಮತ್ತು ಕಳ್ಳತನದ ದೂರು ನೀಡುವುದಾಗಿ ಬೆದರಿಕೆ ಹಾಕಿದ್ದಾಳೆ.

ನಂತರ ಚಾಲಕ ಸೆಕ್ಟರ್ 29 ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದಾನೆ. ಅಲ್ಲಿ ಗಲಾಟೆ ಮಾಡಿಕೊಂಡು ಆಕೆ ಪೊಲೀಸ್ ಠಾಣೆಯಿಂದ ಹೊರ ಹೋದ ನಂತರ ಚಾಲಕ ಪೂರ್ತಿ ಕಥೆ ಬಿಚ್ಚಿಟ್ಟಿದ್ದಾನೆ. ಜ್ಯೋತಿ ದಲಾಲ್ ಎಂಬ ಈ ಮಹಿಳೆ ಈ ಹಿಂದೆ ಕ್ಯಾಬ್ ಚಾಲಕ ಮತ್ತು ಸಲೂನ್ ನವರಿಗೆ ವಂಚಿಸಿದ್ದಾಳೆ ಎಂಬುದನ್ನು ಪೊಲೀಸರಿಗೆ ತಿಳಿಸಿದ್ದಾನೆ.

ತಮಿಳುನಾಡು ಚುನಾವಣೆ: ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟಕ್ಕೆ ಪಿಎಂಕೆ ಸೇರ್ಪಡೆ

ಚೆನ್ನೈ: 2026ರ ತಮಿಳುನಾಡು ವಿಧಾನಸಭಾ




ಚುನಾವಣೆಗೂ ಮುನ್ನ ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟಕ್ಕೆ ಸೇರುವ ನಿರ್ಧಾರವನ್ನು ಪಟ್ಟಾಳಿ ಮಕ್ಕಳ್ ಕಚ್ಚಿ(ಪಿಎಂಕೆ) ಬುಧವಾರ ಪ್ರಕಟಿಸಿದೆ.

ಇಂದು ಚೆನ್ನೈನ ಗ್ರೀನ್‌ವೇಸ್ ರಸ್ತೆಯಲ್ಲಿರುವ ಇಪಿಎಸ್ ಅವರ ನಿವಾಸದಲ್ಲಿ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ ಪಳನಿಸ್ವಾಮಿ ಮತ್ತು ಪಿಎಂಕೆ ಅಧ್ಯಕ್ಷ ಡಾ. ಅನ್ಬುಮಣಿ ರಾಮದಾಸ್ ಅವರು ಜಂಟಿಯಾಗಿ ಈ ಘೋಷಣೆ ಮಾಡಿದ್ದಾರೆ. ಮೈತ್ರಿ ವಿಧಾನಗಳ ಕುರಿತು ನಾಲ್ಕು ಗೋಡೆ ಮಧ್ಯ ಚರ್ಚಿಸಿದ ನಂತರ, ಇಬ್ಬರೂ ನಾಯಕರು ಜಂಟಿಯಾಗಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಪಿಎಂಕೆ ವಿರೋಧ ಪಕ್ಷಗಳೊಂದಿಗೆ ಅಧಿಕೃತವಾಗಿ ಕೈಜೋಡಿಸುತ್ತಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಪಳನಿಸ್ವಾಮಿ, ಎಐಎಡಿಎಂಕೆ ಮತ್ತು ಪಿಎಂಕೆ ಎರಡೂ ಪಕ್ಷಗಳ ನಾಯಕರು, ಕಾರ್ಯಕರ್ತರು ಮತ್ತು ಬೆಂಬಲಿಗರ ಆಶಯಗಳಿಗೆ ಅನುಗುಣವಾಗಿ ಈ ಮೈತ್ರಿ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಬಾಂಬ್ ಬೆದರಿಕೆ; ಜಿಲ್ಲಾದ್ಯಂತ ಕಟ್ಟೆಚ್ಚರ

ಜಿಲ್ಲೆಯ ಜನನಿಬಿಡ ಮತ್ತು ಆಯಕಟ್ಟಿನ ಪ್ರದೇಶಗಳಲ್ಲಿ ಬಾಂಬ್ ನಿಷ್ಕ್ರಿಯ ಮತ್ತು ಶ್ವಾನದಳ ತಪಾಸಣೆ ನಡೆಸಿತು.

ಮಡಿಕೇರಿ, ಜ.7–ಮೈಸೂರು ಸೇರಿದಂತೆ ರಾಜ್ಯದ ಕೆಲವೆಡೆ ಹುಸಿ ಬಾಂಬ್ ಬೆದರಿಕೆ ಕರೆ ಗಳು ಬಂದಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿಯೂ ಕಟ್ಟೆಚ್ಚರ ವಹಿಸಲಾಗಿದೆ. ಜಿಲ್ಲೆಯ ಜನನಿಬಿಡ ಮತ್ತು ಆಯಕಟ್ಟಿನ ಪ್ರದೇಶಗಳಲ್ಲಿ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಮತ್ತು ಎಫ್‌ಎಸ್ಎಲ್ ಸಿಬ್ಬಂದಿ ಜಂಟಿಯಾಗಿ ತಪಾಸಣೆ ನಡೆಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಣಿ ಆದೇಶದ ಮೇರೆಗೆ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಜಿಲ್ಲಾ ಕೋರ್ಟ್‌ನ ಆವರಣ, ಕೊಠಡಿಗಳು, ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್ ನಿಲ್ದಾಣ, ಜಿಲ್ಲಾಡಳಿತ ಭವನ, ತಾಲೂಕು ಸೌಧ ಸೇರಿದಂತೆ ಜನ ಜಂಗುಳಿ ಪ್ರದೇಶಗಳಲ್ಲಿ ತಪಾಸಣೆ ನಡೆಸಿದರು. ವಿಶೇಷವಾಗಿ ಹೊರ ರಾಜ್ಯದ ವಲಸೆ ಕಾರ್ಮಿಕರ ಲಗ್ಗೇಜ್‌ಗಳು, ಬಸ್‌ಗಳ ಕ್ಯಾರಿಯರ್‌ಗಳು, ಹಲವು ಸಮಯಗಳಿಂದ ನಿಲ್ಲಿಸಲಾಗಿರುವ ವಾಹನಗಳ ಬಳಿಯೂ ಸಂಶಯಾಸ್ಪದ ವಸ್ತುಗಳ ತಪಾಸಣೆ ನಡೆಸಿದರು.

ಮೈಸೂರು ಮತ್ತಿತರ ಕಡೆ ಹುಸಿ ಬಾಂಬ್ ಬೆದರಿಕೆ ಕರೆ ಬಂದಂತೆ ಈವರೆಗೆ ಯಾವುದೇ ಬೆದರಿಕೆ ಕರೆಗಳು ಬಂದಿಲ್ಲವಾದರೂ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲಾದ್ಯಂತ ಕಟ್ಟೆಚ್ಚರ ವಹಿಸಿರುವುದಾಗಿ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಭಾಗಮಂಡಲದಲ್ಲಿ ಇಂದು ಮಾನವ ಸರಪಳಿ

ಮಡಿಕೇರಿ, ಜ.7–ರಾಷ್ಟ್ರೀಯ ಜನಗಣತಿ ಸಂದರ್ಭ ಪ್ರತ್ಯೇಕವಾಗಿ 'ಕೊಡವ' ಎಂದು ದಾಖಲೀಕರಣಗೊಳ್ಳುವಂತೆ ಜನಜಾಗೃತಿ ಮೂಡಿಸುವ ಸಲುವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯಿಂದ ಮಾನವ ಸರಪಳಿ ಕಾರ್ಯಕ್ರಮ ಜ.8ರಂದು ಭಾಗಮಂಡಲದಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ. ಬೆಳಿಗ್ಗೆ 10.30 ಗಂಟೆಗೆ ಭಾಗಮಂಡದಲ್ಲಿ ಶಾಂತಿಯುತವಾಗಿ ಮಾನವ ಸರಪಳಿ ನಿರ್ಮಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಇಂದಿನಿಂದ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕಾರ್ಯಾಗಾರ

ಮಡಿಕೇರಿ: ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ವಿಧಿ ವಿಜ್ಞಾನ ಶಾಸ್ತ್ರ ವಿಭಾಗ ವತಿಯಿಂದ 'ತುರ್ತು ಆರೈಕೆಯಲ್ಲಿ ವೈದ್ಯಕೀಯ ಕಾನೂನು ಅಗತ್ಯತೆಗಳು ಮತ್ತು ಮೂಲ ಭೂತ ಜೀವ ಬೆಂಬಲ ಕುರಿತ' ಕಾರ್ಯಾಗಾರವು ಜ.8, 9 ರಂದು ಸಂಸ್ಥೆಯ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ ಎಂದು ವಿಜ್ಞಾನ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮೌಲಾನಾ ಆಜಾದ್ ಶಾಲಾ ಕಟ್ಟಡಕ್ಕೆ ಭೂಮಿಪೂಜೆ



ಮೌಲಾನಾ ಆಜಾದ್ ಶಾಲೆಯ ಕಟ್ಟಡಕ್ಕೆ ಶಾಸಕ ಡಾ.ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು.

ಕುಶಾಲನಗರ, ಜ.7–ಇಲ್ಲಿನ ಆರ್.ಕೆ. ಬಡಾವಣೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಮೌಲಾನಾ ಆಜಾದ್ ಮಾದರಿ ಶಾಲೆಯ ನೂತನ ಕಟ್ಟಡ ನಿರ್ಮಾಣಕ್ಕೆ ಶಾಸಕ ಡಾ. ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು.

ಶಿಕ್ಷಣಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಹೆಚ್ಚಿನ ಅನುದಾನ ಒದಗಿಸಲಾಗುತ್ತಿದೆ. ಎಲ್ಲಕ್ಕಿಂತ ಮಿಗಿಲಾದ ಸಂಪತ್ತು ಎಂದರೆ ಅದು ವಿದ್ಯೆ. ಎಲ್ಲಾ ಸಮುದಾಯದವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕಿದೆ. ಅದಕ್ಕೆ ಪೂರಕ ವಾತಾ ವರಣವನ್ನು ನಾವು ಸೃಷ್ಟಿಸಿ ಕೊಡುತಿದ್ದೇವೆ ಎಂದರು.

ಇದೇ ವೇಳೆ ನೂತನ ಶಾಲಾ ಕಟ್ಟಡ ಆವರಣದಲ್ಲಿರುವ ಪಾರ್ಕ್ ಅಭಿವೃದ್ಧಿಪಡಿಸಿ ಕೊಡಬೇಕು ಹಾಗೂ ಸಮೀಪದ ಹಿಂದೂ ರುದ್ರಭೂಮಿಗೆ ತಡೆಗೋಡೆ ನಿರ್ಮಿಸಿ ಕೊಡುವಂತೆ ಆರ್.ಕೆ. ಬಡಾವಣೆ ನಿವಾಸಿಗಳ ಮನವಿಗೆ ಶಾಸಕರು ಸೂಕ್ತವಾಗಿ ಸ್ಪಂದಿಸಿ ಪಾರ್ಕ್ ಅಭಿವೃದ್ಧಿಪಡಿಸಿ ಕೊಡುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ನೇತಾಜಿ ಬಡಾವಣೆ ಹಾಗೂ ಗುಮ್ಮನಕೊಲ್ಲಿ ಸರ್ಕಾರಿ ಶಾಲಾ ಹಿಂಭಾಗದಲ್ಲಿ ನೂತನವಾಗಿ ನಿರ್ಮಿಸಿದ ರಸ್ತೆಯನ್ನು ಇದೇ ಸಂದರ್ಭದಲ್ಲಿ ಉದ್ಘಾಟಿಸಿದರು. ಮುಳ್ಳುಸೋಗೆ ತಪೋವನಕ್ಕೆ ತೆರಳುವ ಮಾರ್ಗದ ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿ, ಈ ಭಾಗದಲ್ಲಿ ಹರಡಿದ್ದ ಕಸದ ರಾಶಿ ಕಂಡು ಆಕ್ರೋಶಗೊಂಡು ಕೂಡಲೆ ಕಸ ತೆರವುಗೊಳಿಸುವಂತೆ ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಿದರು. ಸಿಸಿ ಕ್ಯಾಮರಾ ಪರಿಶೀಲಿಸಿ ಕಸ ಬಿಸಾಡುವವರನ್ನು ಪತ್ತೆಹಚ್ಚಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಆದೇಶಿಸಿದರು.

ಕುಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಸದಸ್ಯ ಕಿರಣ್, ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಜಾಮಿಯಾ ಮಸೀದಿ ಕಾರ್ಯದರ್ಶಿ ಇರ್ಫಾನ್, ಖಜಾಂಚಿ ಆದಂ ಎಸ್, ನೂರ್ ಮಸೀದಿ ಅಧ್ಯಕ್ಷ ಶಬ್ಬೀರ್ ಅಹಮ್ಮದ್, ಬ್ಲಾಕ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಬ್ದುಲ್ ರಜಾಕ್, ರಾಜ್ಯ ಕಾರ್ಯದರ್ಶಿ ಸುಂಟಿಕೊಪ್ಪ ಉಸ್ಮಾನ, ಗ್ರಾಪಂ ಸುಂಟಿಕೊಪ್ಪ ರಫೀಕ್, ಸಿ.ಎಂ.ಅಜೀಜ್, ಮಜೀದ್, ಗಯಾಜ್, ರಫೀಕ್ ಅಹಮ್ಮದ್, ಅಶ್ರಫ್, ಹಕೀಂ, ಅಶ್ರಫ್ ಪುರಸಭೆ ಮುಖ್ಯಾಧಿಕಾರಿ ಗಿರೀಶ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿ ವೀರಭದ್ರಪ್ಪ, ಮೌಲಾನಾ ಆಜಾದ್ ಶಾಲೆಯ ಮುಖ್ಯ ಶಿಕ್ಷಕಿ ಶ್ವೇತ, ಶಿಕ್ಷಕ ಮಂಜುನಾಥ್, ಪುಟ್ಟಲಕ್ಷ್ಮಮ್ಮ, ಹೆಚ್.ಕೆ. ಶಿವಶಂಕರ್, ಎಂ.ಎಂ.ಪ್ರಕಾಶ್, ವಿ.ಜೆ.ನವೀನ್, ಪದ್ಮಾ, ಹರೀಶ್ ಎಂ.ವಿ, ಕರವೇ ಆನಂದ್, ಕಾಂಗ್ರೆಸ್ ಮಹಿಳಾ ಘಟಕ ಅಧ್ಯಕ್ಷೆ ಪುಷ್ಪಲತಾ, ಮುಖಂಡ ಹೆಬ್ಬಾಲೆ ರಂಜನ್ ಸೇರಿದಂತೆ ಇತರರು ಇದೇ ವೇಳೆ ಪಾಲ್ಗೊಂಡಿದ್ದರು.

ಬಡ ಕುಟುಂಬಕ್ಕೆ ಮನೆ ನೀಡಿ ಹುಟ್ಟುಹಬ್ಬ ಆಚರಿಸಿಕೊಂಡ ತಾಪಂ ಮಾಜಿ ಸದಸ್ಯ



ಬಡ ಕಾರ್ಮಿಕ ಮಂಜುಳರಿಗೆ ಮನೆಯ ಕೀಯನ್ನು ತಾಪಂ ಮಾಜಿ ಸದಸ್ಯ ಗಣೇಶ್ ನೀಡಿದರು.

ವಿರಾಜಪೇಟೆ, ಜ.7–ಕಡು ಬಡತನದ ಬೇಗೆಯಲ್ಲಿ ಅನಾರೋಗ್ಯಪೀಡಿತ ಪುತ್ರನೊಂದಿಗೆ ನಿರ್ವಸಿತರಾಗಿದ್ದ ವೃದ್ಧೆಯೊಬ್ಬರಿಗೆ ಜಿ.ಪಂ ಮಾಜಿ ಸದಸ್ಯರೊಬ್ಬರು ಸೂರು ಕಲ್ಪಿಸಿಕೊಟ್ಟ ದೃಷ್ಟಾಂತ ಮಾಸಿಹೋಗುವ ಮುನ್ನವೇ ಅಂಥದ್ದೇ ಕಾರ್ಯ ಮಾಡಿ ತಾಪಂ ಮಾಜಿ ಸದಸ್ಯರೊಬ್ಬರು ಮಾದರಿಯಾಗಿದ್ದಾರೆ.

ಸೂರು ಇಲ್ಲದ ಕಡು ಬಡ ಕಾರ್ಮಿಕ ಕುಟುಂಬಕ್ಕೆ ನೂತನ ಮನೆ ನಿರ್ಮಿಸಿ ಹಸ್ತಾಂತರ ಮಾಡುವ ಮೂಲಕ ಸೆಸ್ಕಾಂ ಗುತ್ತಿಗೆದಾರರ ಸಂಘದ ಅಧ್ಯಕ್ಷ, ತಾಪಂಮಾಜಿ ಸದಸ್ಯ ಬಿ.ಎಂ.ಗಣೇಶ್ ತಮ್ಮ 51ನೇ ಹುಟ್ಟುಹಬ್ಬವನ್ನು ವಿನೂತನವಾಗಿ ಆಚರಿಸಿಕೊಂಡಿದ್ದಾರೆ

ತಾಲೂಕಿನ ಬಿಟ್ಟಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಳುಗೋಡು ಗ್ರಾಮದ ಕಿರುಮಕ್ಕಿ ಕಾಲೋನಿಯ ಮಂಜುಳ ಎಂಬುವರಿಗೆ ಮೂರು ಹೆಣ್ಣುಮಕ್ಕಳಿದ್ದು, 5 ತಿಂಗಳ ಹಿಂದೆ ಪತಿ ಸನ್ನಿ ಮೃತಪಟ್ಟ ನಂತರ ಟಾರ್ಪಲ್ ಗುಡಿಸಲಿನಲ್ಲಿ ಜೀವನ ಸಾಗಿಸುವುದೇ ಕಷ್ಟಕರವಾಗಿತ್ತು. ಅಲ್ಲಿಗೆ ಭೇಟಿ ನೀಡಿದ ಸಮಾಜ ಸೇವಕ ಗಣೇಶ್ ಮಂಜುಳರ ಕಷ್ಟವನ್ನರಿತು ಅವರ ಗುಡಿಸಲನ್ನು ನೋಡಿ ಸರ್ಕಾರದ ಅನುದಾನವಿಲ್ಲದೆ, ತಮ್ಮ ಸ್ವಂತ ಹಣದಿಂದ 2 ಲಕ್ಷಕ್ಕೂ ಹೆಚ್ಚು ಹಣ ಖರ್ಚು ಮಾಡಿ ಸುಸ್ವಜಿತ ಮನೆನಿರ್ಮಿಸಿ ಇಂದು ಮನೆ ಬೀಗದ ಕೀಯನ್ನು ಮಂಜುಳಾ ಅವರಿಗೆ ಹಸ್ತಾಂತರ ಮಾಡಿದರು.

ಪಕ್ಷಬೇಧವಿಲ್ಲದೆ ರಾಜಕಿಯ ರಹಿತವಾಗಿ 5 ವರ್ಷಗಳಿಂದ ಸಮಾಜ ಸೇವೆಯ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡು ಬಂದಿದ್ದೇನೆ. ಮೊದಲನೇ ವರ್ಷದಲ್ಲಿ ಪೆರುಂಬಾಡಿ ಗ್ರಾಮದ ಕಾಳರಿಗೆ, 2ನೇ ವರ್ಷ ಕೆದ ಮುಳ್ಳೂರು ಗ್ರಾಪಂ, ತೆರ್ಮೆಮೊಟ್ಟೆ ಕಮಲ ಅವರಿಗೆ, 3ನೇ ವರ್ಷ ಆರ್ಜಿ ಗ್ರಾಪಂ ತೆರ್ಮೆಕಾಡು ಪೈಸಾರಿಯ ಎರವರ ಶಂಕರ ವಸಂತಿ ಅವರಿಗೆ, 4ನೇ ವರ್ಷ ಕಂಡಿ ಮಕ್ಕಿಯ ಕಿರಣ್ ಬೋಜಮ್ಮ ಅವರಿಗೆ ಮನೆ ನಿರ್ಮಿಸಿಕೊಟ್ಟಿದ್ದು, ಈ ವರ್ಷ ಕಿರು ಮಕ್ಕಿ ಕಾಲೋನಿಯ ಮಂಜುಳ ಅವರ ಚಿಕ್ಕ ಮಕ್ಕಳ ಪರಿಸ್ಥಿತಿಯನ್ನು ಅರಿತು ಇವರಿಗೆ ಮನೆ ನಿರ್ಮಿಸಿಕೊಡಲಾಗಿದ್ದು ಇವರ ಜೀವನ ಸುಖವಾಗಿ ನಡೆಯಲಿ ಎಂದು ಆಶಿಸಿ, ಮುಂದೆಯೂ ಸಹ ಅತೀ ಕಷ್ಟದಲ್ಲಿರುವ ಬಡ ಕೂಲಿ ಕಾರ್ಮಿಕರಿಗೆ ಸಹಾಯ ಮಾಡುವುದಾಗಿ ಘೋಷಿಸಿದರು.

ಸುಮ ಬಿ.ಎಂ.ಗಣೇಶ್, ನಿಗನ್ ಮುಕುಂದ್, ಬಿ.ಎಂ.ರಮೇಶ್, ಬಿ.ಆರ್. ಮಂಜಪ್ಪ ಬಿ. ಆರ್. ಪಾರ್ವತಿ, ಚುಪ್ಪ ನಾಗರಾಜ್, ವಿನೋದ್ ಮದು, ಬಿಟ್ಟಂಗಾಲ ಗ್ರಾ.ಪಂ. ಸದಸ್ಯ ಎಂ.ಪಿ. ನವಿನ್, ವಿಘ್ನ ವಿನಾಯಕ ಗಣೇಶ ಸಮಿತಿಯ ಬಿ.ಎಂ. ರಮೇಶ್ ಭಾಗವಹಿಸಿದ್ದರು.

ಸಮಾಜದಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸಿದವರು ಕುವೆಂಪು



ಕುವೆಂಪು ವಿಶ್ವ ಮಾನವ ಸಂದೇಶದ ಮಹತ್ವ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮಡಿಕೇರಿ, ಜ.7–ಸಮಾಜದಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸುವುದರೊಂದಿಗೆ ಸಮಾಜದಲ್ಲಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮ ಪಾಲು ಸಿಗಬೇಕು ಎಂದು ಹಂಬಲಿ ಸಿದವರು ಕನ್ನಡದ ಮೇರು ಕವಿ ಕುವೆಂಪು ಎಂದು ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ಜೆ.ಸೋಮಣ್ಣ ಬಣ್ಣಿಸಿದರು.

ಕುಶಾಲನಗರ ತಾಲೂಕಿನ ತೊರೆನೂರು ಗ್ರಾಮದ ರೇವೇಗೌಡನ ಕೊಪ್ಪಲಿನ ಶನೇಶ್ವರ ದೇವಸ್ಥಾನದ ಆವರಣದಲ್ಲಿ ಕಣಿವೆ ಕಟ್ಟೆ ಬಳಗದ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ವಿಶ್ವ ಮಾನವ ಸಂದೇಶದ ಮಹತ್ವ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ವ್ಯಕ್ತಿ ಜಾತಿಯಿಂದ ಮುಖ್ಯನಾಗಬಾರದು. ನೈತಿಕ ವ್ಯಕ್ತಿತ್ವದಿಂದ ಮುಖ್ಯನಾಗಬೇಕು ಎಂಬ ಪರಿಕಲ್ಪನೆ ಕುವೆಂಪು ಅವರದಾಗಿತ್ತು. ಹಾಗಾಗಿ ಕುವೆಂಪು ಅವರ ಜಾತ್ಯಾತೀತ ಮನೋಭಾವದಿಂದ ಮೂಡಿ ಬಂದ ಆಶಯವೇ ವಿಶ್ವ ಮಾನವ ಸಂದೇಶವಾಗಿದೆ ಎಂದು ಬಣ್ಣಿಸಿದರು.

ಸಾಹಿತಿ ಕಣಿವೆ ಭಾರದ್ವಾಜ ಆನಂದತೀರ್ಥ ಮಾತನಾಡಿ, ಕುವೆಂಪು ಅವರ ಬದುಕಿನ ಒಳ ನೋಟ ಹಾಗೂ ಅವರ ವೈಚಾರಿಕ ಚಿಂತನೆ ಬಗ್ಗೆ ತಿಳಿಸಿದರು. ಕುವೆಂಪು ಅವರ ಸಾಹಿತ್ಯ ರಚನೆ ಕುರಿತು ಲೀಡ್ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಆರ್.ಕೆ. ಬಾಲಚಂದ್ರ ಮಾತನಾಡಿದರು.

ಕನ್ನಡ ಸಿರಿಬಳಗದ ಅಧ್ಯಕ್ಷ ಬಿ.ಎಸ್. ಲೋಕೇಶ್ ಸಾಗರ್, ತೊರೆನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಕೆ.ಎಸ್. ಕೃಷ್ಣೇಗೌಡ, ಜಿಲ್ಲಾ ವೀರಶೈವ ಮಹಾ ಸಭಾದ ಅಧ್ಯಕ್ಷ ಎಚ್.ವಿ.ಶಿವಪ್ಪ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ನಾಪೋಕ್ಲುನಲ್ಲಿ ರಸ್ತೆ ಸುರಕ್ಷತಾ ಸಪ್ತಾಹ


ಮಡಿಕೇರಿ, ಜ.7–ನಾಪೋಕ್ಲು ಪೊಲೀಸ್ ಠಾಣೆ ವತಿಯಿಂದ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಪಟ್ಟಣದ ಮುಖ್ಯ ರಸ್ತೆಯಲ್ಲಿ ಜಾಥ ಮತ್ತು ಜಾಗೃತಿ ಕಾರ್ಯಕ್ರಮ ನಡೆಯಿತು. ಈ ಸಂದರ್ಭ ಬಸ್ ನಿಲ್ದಾಣದಲ್ಲಿ ಠಾಣಾಧಿಕಾರಿ ರಾಘವೇಂದ್ರ ಮಾತನಾಡಿ, ರಸ್ತೆ ಸುರಕ್ಷತೆ, ಸಂಚಾರ ಕಾನೂನು, ರಸ್ತೆ ಅಪಘಾತದ ಸಂದರ್ಭ ನಾಗರಿಕರ ಜವಾಬ್ದಾರಿ ಮುಂತಾದ ವಿಷಯಗಳ ಕುರಿತು ಮಾಹಿತಿ ಸಹಿತ ಜಾಗೃತಿ ಮೂಡಿಸಿದರು.

ಸೀತಮ್ಮ ನಿಧನ



ನಾಪೋಕ್ಲು, ಜ.7(ದುಗ್ಗಳ)–ಇಲ್ಲಿಗೆ ಸಮೀಪದ ಪಾಲೂರು ಗ್ರಾಮದ ನಿವಾಸಿ ಮಲೆಯರ ಸೀತಮ್ಮ (ಪಟ್ಟು73) ಮಂಗಳವಾರ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಪಾಲೂರು ಗ್ರಾಮ ಮೃತರ ಕುಟುಂಬದ ರುದ್ರಭೂಮಿಯಲ್ಲಿ ಜರುಗಿತು.

ಮುತ್ತತ್ತಿರಾಯನ ಸೇವೆಯೊಂದಿಗೆ ಚಿಕ್ಕಲ್ಲೂರು ಜಾತ್ರೆ ಸಂಪನ್ನ



ಚಿಕ್ಕಲ್ಲೂರು ಜಾತ್ರೆಯಲ್ಲಿ ನೆರೆದಿದ್ದ ಭಕ್ತರನ್ನು ಕಾಣಬಹುದು

ಚಾಮರಾಜನಗರ, ಜ.7– ಅಪಾರ ಜನಸಂದಣಿಯಿಂದ ಕೂಡಿದ್ದ ಚಿಕ್ಕಲ್ಲೂರು ಜಾತ್ರೆ ಬುಧವಾರ ಮುತ್ತತ್ತಿರಾಯನ ಸೇವೆಯೊಂದಿಗೆ ಮುಕ್ತಾಯಗೊಂಡಿತು.

ಬೊಪ್ಪೇಗೌಡನಪುರ ಮಠದ ಅಧ್ಯಕ್ಷ ಜ್ಞಾನಾನಂದ ಚನ್ನರಾಜೇ ಅರಸ್ ಅವರು ಪೂಜಾ ಕೈಂಕರ್ಯ ನಡೆಸಿ ಕೊನೆ ದಿನ ಮುತ್ತತ್ತಿರಾಯನ ಸೇವೆ ಮಾಡುವ ಮೂಲಕ ಜಾತ್ರೆಗೆ ತೆರೆ ಎಳೆದರು. ಜ.3 ರಿಂದ 5 ದಿನಗಳ ಕಾಲ ಗ್ರಾಮೀಣ ಸಂಸ್ಕೃತಿಯ ಸಮ್ಮಿಲನದೊಂದಿಗೆ ನಡೆದ ಜಾತ್ರೆ ಸಾಕಷ್ಟು ವೈಶಿಷ್ಟತೆಯೊಂದಿಗೆ ಸಂಭ್ರಮದಿಂದ ತೆರೆ ಕಂಡಿತು.

ಜಾತ್ರೆ ಮೊದಲ ದಿನ ಚಂದ್ರ ಮಂಡಲೋತ್ಸವ ಹಾಗೂ ಸಿದ್ದಪ್ಪಾಜಿ ಕಂಡಾಯ, ನಂತರ ಮಂಟೇಸ್ವಾಮಿ ಪರಂಜ್ಯೋತಿ ಉತ್ಸವಗಳು, ಹುಲಿವಾಹನ ಉತ್ಸವ, ಮುಡಿಸೇವೆ ಮತ್ತು ಪಂಕ್ತಿಸೇವೆಯೊಂದಿಗೆ ಅದ್ಧೂರಿಯಾಗಿ ನಡೆದ ಜಾತ್ರೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಲಕ್ಷಾಂತರ ಭಕ್ತರು ಆಗಮಿಸಿ ಪವಾಡ ಪುರುಷ ಸಿದ್ದಪ್ಪಾಜಿಗೆ ಪೂಜೆ, ಹರಕೆ ಸಲ್ಲಿಸುವ ಮೂಲಕ ಸಂಭ್ರಮ ಇಮ್ಮಡಿಗೊಳಿಸಿದರು.

ಬುಧವಾರ ಮುತ್ತತ್ತಿರಾಯನ ಸೇವೆಯೊಂದಿಗೆ ಕರಿಯಣ್ಣ, ಕೆಂಚಣ್ಣ ದೇವರನ್ನು ಹೊರವಲಯದಲ್ಲಿರುವ ಅರಳಿ ಮರದವರೆಗೆ ಕೊಂಡೊಯ್ದು, ಪೂಜೆ ಸಲ್ಲಿಸಿ ಅಲ್ಲಿಂದ ಭಕ್ತರು ಮೆರವಣಿಗೆ ಮೂಲಕ ಸಿದ್ದಪ್ಪಾಜಿ ದೇವಸ್ಥಾನಕ್ಕೆ ತಂದು ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನದ ಆವರಣದಲ್ಲಿರುವ ಆಂಜನೇಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ 5 ದಿನಗಳ ಸಡಗರದ ಜಾತ್ರೆಗೆ ತೆರೆ ಎಳೆಯಲಾಯಿತು.

ಪ್ರತಿದಿನವೂ ಒಂದಲ್ಲೊಂದು ಸೇವೆಯನ್ನು ಭಕ್ತರು ಸಲ್ಲಿಸುತ್ತಿದ್ದರಿಂದ ಚಿಕ್ಕಲ್ಲೂರಿನಲ್ಲಿ ಸಡಗರ, ಸಂಭ್ರಮ ನೆಲೆಗೊಂಡಿತ್ತು. ಇಡೀ ಜಾತ್ರೆ ಮೈದಾನ ಭಕ್ತ ಸಮೂಹದಿಂದ ತುಂಬಿತ್ತು. ಮಂಗಳವಾರದ ಪಂಕ್ತಿ ಸೇವೆಯಲ್ಲಂತೂ ಸಾವಿರಾರು ಭಕ್ತರು ನೆರೆದು, ಸಹಪಂಕ್ತಿ ಭೋಜನ ಸ್ವೀಕರಿಸಿ ಧನ್ಯತಾ ಭಾವ ಅನುಭವಿಸಿದರು.

ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಉಳಿದಂತೆ ಸಣ್ಣ–ಪುಟ್ಟ ಸಮಸ್ಯೆಗಳ ನಡುವೆಯೂ ಚಿಕ್ಕಲ್ಲೂರು ಜಾತ್ರೆಯಲ್ಲಿ ಸಂಭ್ರಮ ಕಳೆಗಟ್ಟಿತ್ತು. ಈ ಮೂಲಕ ಗ್ರಾಮೀಣ ಹಾಗೂ ನೀಲಗಾರ ಸಂಸ್ಕೃತಿ ಅನಾವರಣಗೊಂಡಿತು.

ಜಾತ್ರೆ ಅಂಗವಾಗಿ ಚಿಕ್ಕಲ್ಲೂರಿನಲ್ಲಿ ಬಿಡಾರಗಳನ್ನು ಹೂಡಿದ್ದ ಸಾವಿರಾರು ಭಕ್ತರು ಬುಧವಾರ ಜಾತ್ರೆಗೆ ತೆರೆ ಬಿದ್ದ ಹಿನ್ನೆಲೆಯಲ್ಲಿ ತಂಡೋಪತಂಡವಾಗಿ ತಮ್ಮೂರಿಗೆ ಹಿಂದಿರುಗುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬುಧವಾರ ದೇವಸ್ಥಾನಕ್ಕೆ ಸಂಸದ ಸುನೀಲ್ ಬೋಸ್, ದೇವಸ್ಥಾನದ ಟ್ರಸ್ಟಿ ಭರತ್ ಲಿಂಗರಾಜೇ ಅರಸ್, ಡಿವೈಎಸ್‌ಪಿ ಧರ್ಮೇಂದ್ರ, ಮಂಟೇಸ್ವಾಮಿ ಪರಂಪರೆ ರಕ್ಷಣಾ ಹೋರಾಟ ಸಮಿತಿಯ ಶಂಭುಲಿಂಗ ಸ್ವಾಮಿ, ಮಹದೇವು ಇತರರು ಭೇಟಿ ನೀಡಿದರು.

ದಿನದರ್ಶಿಕೆ ಬಿಡುಗಡೆ



ಗುಂಡ್ಲುಪೇಟೆಯ ರಾಘವೇಂದ್ರಸ್ವಾಮಿ ಮಠದಲ್ಲಿ ದಿನದರ್ಶಿಕೆ ಬಿಡುಗಡೆಗೊಳಿಸಲಾಯಿತು. ಈ ವೇಳೆ ಮಠದ ಆಡಳಿತ ಮಂಡಳಿ ಅಧ್ಯಕ್ಷೆ ರಾಜೇಶ್ವರಿ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೆ.ವಿ.ಗೋಪಾಲಕೃಷ್ಣ ಭಟ್, ಸಿಇಓ ರಮೇಶ್ ಮಾಸ್ಟರ್, ಮುಖಂಡರಾದ ಎನ್.ಮಲ್ಲೇಶ್, ಆರ್.ಮೋಹನ್ ಮತ್ತು ಆಡಳಿತ ಮಂಡಳಿ ಪದಾಧಿಕಾರಿಗಳು ಭಾಗವಹಿಸಿದ್ದರು.

ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಚಾಮರಾಜನಗರ, ಜ.7– ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಜ.9ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸುವರು. ಬಳಿಕ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭೋವಿ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸುವರು. ಭೋವಿ ಸಮುದಾಯದ ಜನಪ್ರತಿನಿಧಿಗಳು ಮತ್ತು ಮುಖಂಡರೊಂದಿಗೆ ಸಭೆ ನಡೆಸುವರು. ಮಧ್ಯಾಹ್ನ 3.30ಕ್ಕೆ ಹೆಬ್ಬಸೂರು ಗ್ರಾಮಕ್ಕೆ ಆಗಮಿಸಿ ಭೋವಿ ಕಾಲೋನಿಗೆ ಭೇಟಿ ನೀಡಿ ಪರಿಶೀಲಿಸುವರು. ಸಂಜೆ 5 ಗಂಟೆಗೆ ಮೈಸೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ನೂತನ ಡಿಸಿ ಶ್ರೀರೂಪ ಅವರಿಗೆ ಸ್ವಾಗತ



ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ಜಿಲ್ಲಾ ಸರ್ಕಾರಿ ವಾಹನ ಚಾಲಕರ ಸಂಘದ ಪದಾಧಿಕಾರಿಗಳು ಸ್ವಾಗತಿಸಿದರು. ಈ ವೇಳೆ ಗೌರವಾಧ್ಯಕ್ಷ ಬಿ.ಪಿ.ಪ್ರಕಾಶ್, ಅಧ್ಯಕ್ಷ ಆರ್.ಶ್ರೀನಿವಾಸ, ಉಪಾಧ್ಯಕ್ಷ ಆರ್.ರಮೇಶ್, ಪದಾಧಿಕಾರಿಗಳಾದ ಬಸವಣ್ಣ, ಸೋಮಣ್ಣ, ಪ್ರಕಾಶ್, ರಾಮಚಂದ್ರ, ಸಂತೋಷ ಕುಮಾರ್, ಸಂತೋಷ ನಾಯಕ, ಶರತ್, ಮಂಜು ಪ್ರಸಾದ್, ಕೃಷ್ಣ ಇತರರಿದ್ದರು.

ಪೋಷಕರಿಗೆ ಮನೋರಂಜನಾ ಆಟೋಟ ಸ್ಪರ್ಧೆ



ಪೋಷಕರಿಗಾಗಿ ಮನೋರಂಜನಾ ಆಟೋಟ ಸ್ಪರ್ಧೆ ಏರ್ಪಡಿಸಲಾಗಿತ್ತು.

ಬೇಗೂರು, ಜ.7– ಗ್ರಾಮದ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪೋಷಕರಿಗಾಗಿ ಮೋಜಿನ ಮೇಳ ಹಾಗೂ ಮನೋರಂಜನಾ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಈ ವೇಳೆ ಮಾತನಾಡಿದ ಪೋಷಕರು, ಶಾಲೆಯಲ್ಲಿ ಈ ರೀತಿಯ ಆಟಗಳನ್ನು ಹಮ್ಮಿಕೊಂಡಿರುವುದು ಸಂತಸದ ವಿಚಾರ. ಈ ಆಟಗಳು ನಮ್ಮ ಬಾಲ್ಯವನ್ನು ನೆನಪಿಸುತ್ತದೆ. ನಮ್ಮ ಬಿಡುವಿಲ್ಲದ ಸಮಯದ ನಡುವೆ ನಾವು ಆಟಗಳ ಬಗ್ಗೆ ಅಷ್ಟೊಂದು ಗಮನ ಹರಿಸುವುದಿಲ್ಲ. ಈ ತರಹದ ಕಾರ್ಯಕ್ರಮವನ್ನು ಹಮ್ಮಿಕೊಂಡಾಗ ನಾವು ಭಾಗವಹಿಸಿ ಆನಂದಿಸಲು ಸಿಕ್ಕ ಒಂದು ಅವಕಾಶವಾಗಿದೆ ಎಂದರು.

ಈ ವೇಳೆ ಶಾಲೆ ವ್ಯವಸ್ಥಾಪಕಿ ಅನಿತಾ, ಶೈಕ್ಷಣಿಕ ಮೇಲ್ವಿಚಾರಕಿ ಮುತ್ತುಲಕ್ಷ್ಮಿ, ಶಿಕ್ಷಕರಾದ ಮಹೇಶ್ವರಿ, ಸುರೇಶ್, ರಕ್ಷಿತಾ, ಕಾವ್ಯ, ಹೇಮಾವತಿ, ಸವಿತಾ, ಮಂಜುಳ, ತೇಜಸ್ವಿನಿ, ಮಾನಸ, ಸುನೀತಾ, ಶಾರದ ಸೇರಿದಂತೆ ಇತರರು ಹಾಜರಿದ್ದರು.

ಗ್ರಾಮಸ್ಥರ ನಕಲಿ ಸಹಿ ಮಾಡಿ ವರದಿ ನೀಡಿರುವ

ಪಿಡಿಓ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕೆ ಆಗ್ರಹ



ಸುದ್ದಿಗೋಷ್ಠಿಯಲ್ಲಿ ವೈ.ಕೆ.ಮೋಳೆ ಗ್ರಾಮದ ಮುಖಂಡ ಎಂ.ಶಿವಣ್ಣ ಮಾತನಾಡಿದರು.

ಯಳಂದೂರು, ಜ.7– ತಾಲೂಕಿನ ಅಂಬಳೆ ಗ್ರಾಪಂ ವ್ಯಾಪ್ತಿಯ ವೈ.ಕೆ.ಮೋಳೆಯಲ್ಲಿ ಕಬಿನಿ ನಾಲೆ ಭೂ ಸ್ವಾಧೀನ ಸಂಬಂಧ ಅಧಿಕಾರಿಗಳು ಸ್ಥಳ ಮಹಜರು ನಡೆಸಿದ ವೇಳೆ ಗ್ರಾಮಸ್ಥರ ನಕಲಿ ಸಹಿ ಮಾಡಿ ವರದಿ ನೀಡಿರುವ ಪಿಡಿಓ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವೈ.ಕೆ.ಮೋಳೆ ಗ್ರಾಮದ ಮುಖಂಡ ಎಂ.ಶಿವಣ್ಣ ಆಗ್ರಹಿಸಿದರು.

1996–97ರಲ್ಲಿ ಕಬಿನಿ ನಾಲೆ ನಿರ್ಮಿಸಲಾಗಿದ್ದು, ಈ ವೇಳೆ 17 ನಿವೇಶನಗಳು ಕಬಿನಿ ನಾಲೆಗೆ ಹೋಗಿದೆ. ಈ ಪೈಕಿ 14 ನಿವೇಶಗಳಿಗೆ ಮಾತ್ರ ಪರಿಹಾರ ನೀಡಲಾಗಿದೆ. ಉಳಿದ 3 ನಿವೇಶನಗಳಿಗೆ ಪರಿಹಾರ ನೀಡಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಈ ಸಂಬಂಧ ಪರಿಹಾರ ಪಡೆಯದವರು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದು, ಈ ವೇಳೆ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲಿಸಿ ಚದರ ಮೀಟರ್ ವ್ಯತ್ಯಾಸವಾಗಿರುವ ಹಾಗೂ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ಎಂಬುದರ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ವರದಿ ನೀಡುವಂತೆ ಉಪವಿಭಾಗಾಧಿಕಾರಿಗೆ ಸೂಚಿಸಿದ್ದರು. ಈ ವೇಳೆ ಸ್ಥಳ ಪರಿಶೀಲಿಸಿದ ಎಸಿ ಯಾವುದೇ ವರದಿ ನೀಡಿಲ್ಲ ಎಂದರು.

ಈ ಸಂಬಂಧ ಸ್ವತಃ ಪಿಡಿಓ ಕಾವ್ಯ ಅವರು ಸ್ಥಳ ಪರಿಶೀಲಿಸಿ ವರದಿ ನೀಡುವುದಾಗಿ ತಿಳಿಸಿದ್ದಾರೆ. ಆದರೆ ಸ್ಥಳ ಪರಿಶೀಲಿಸದೇ ಕಚೇರಿಯಲ್ಲಿ ಕುಳಿತು ಗ್ರಾಮಸ್ಥರ ನಕಲಿ ಸಹಿ ಮಾಡಿ ಸುಳ್ಳು ಮಹಜರು ದಾಖಲೆ ಸೃಷ್ಟಿಸಿ ಸಂಬಂಧಪಟ್ಟ ಮೇಲಾಧಿಕಾರಿಗೆ ವರದಿ ಸಲ್ಲಿಸಿದ್ದಾರೆ ಎಂದು ಆರೋಪಿಸಿದರು.

ನಕಲಿ ಸಹಿ ಮಾಡಿರುವ ಕುರಿತು ಡಿಸಿ, ಜಿಪಂ ಸಿಇಓ, ತಾಪಂ ಇಓ ಅವರಿಗೆ ದೂರು ನೀಡಿದ್ದು, ತಾಪಂ ಇಓ ಅವರು ಸ್ಥಳ ಮಹಜರು ವರದಿಯಲ್ಲಿ ಸಹಿ ಮಾಡಿರುವ ಗ್ರಾಮಸ್ಥರ ತಂದೆ ಹೆಸರು, ವಿಳಾಸ, ಗುರುತಿನ ದಾಖಲೆ ಹಾಗೂ ಅವರುಗಳ ಸಹಿ ದೃಢೀಕರಿಸಿ ಕಚೇರಿಗೆ ಸಲ್ಲಿಸುವಂತೆ ಪಿಡಿಓಗೆ ನೋಟಿಸ್ ನೀಡಿದ್ದು, ಇದಕ್ಕೆ ಪಿಡಿಓ ಉಡಾಫೆ ಉತ್ತರ ನೀಡಿದ್ದಾರೆ ಆರೋಪಿಸಿದರು.

ಅಲ್ಲದೇ ಸ್ಥಳ ಮಹಜರು ವರದಿ ಮೂಲ ಪ್ರತಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಪಡೆಯಲು ಸೂಕ್ತ ನಿರ್ದೇಶನ ನೀಡುವಂತೆ ತಾಪಂ ಇಓ ಅವರು ಜಿಪಂ ಸಿಇಓಗೆ ಪತ್ರ ಬರೆದಿದ್ದಾರೆ. ಆದರೆ, ಇಲ್ಲಿವರೆಗೆ ಅವರು ಕ್ರಮ ವಹಿಸಿಲ್ಲ. ಕೂಡಲೇ ಜಿಪಂ ಸಿಇಓ ಅವರು ವರದಿ ಮೂಲ ಪ್ರತಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಜೊತೆಗೆ ಪಿಡಿಓ ಕಾವ್ಯ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಗ್ರಾಮದ ಮುಖಂಡರಾದ ಶ್ರೀನಿವಾಸ್, ಮಹೇಶ್, ಬಿಳಿಗಿರಿ ರಂಗನಾಯಕ, ನಂದರಾಜ್ ಇದ್ದರು.

ವಾಣಿಜ್ಯ ಪರೀಕ್ಷೆ: ನಿಷೇಧಾಜ್ಞೆ

ಚಾಮರಾಜನಗರ, ಜ.7– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವಾಣಿಜ್ಯ ಪರೀಕ್ಷೆಗಳನ್ನು ಜ.12 ರಿಂದ 14ರವರೆಗೆ ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಕಾರ್ಯ ನ್ಯಾಯೋಚಿತವಾಗಿ ನಡೆಸುವ ಸದುದ್ದೇಶದಿಂದ, ಕಾನೂನು ಸುವ್ಯವಸ್ಥೆಗೆ ಭಂಗವಾಗದಂತೆ ಪರೀಕ್ಷಾ ಕೇಂದ್ರದ ಸುತ್ತಲ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸಾರ್ವಜನಿಕ ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಶ್ರೀರೂಪ ಆದೇಶ ಹೊರಡಿಸಿದ್ದಾರೆ. ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಕಲಂ 163 ರನ್ವಯ ಪರೀಕ್ಷಾ ದಿನಗಳಂದು ಬೆಳಗ್ಗೆ 6ರಿಂದ ಸಂಜೆ 6ವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಅಲ್ಲದೇ ಸದರಿ ದಿನಗಳಂದು ಪರೀಕ್ಷಾ ಕೇಂದ್ರ ವ್ಯಾಪ್ತಿಯ ಜೆರಾಕ್ಸ್ ಅಂಗಡಿ ಮುಚ್ಚಲು ಆದೇಶಿಸಲಾಗಿದೆ.

ಬಸ್–ಲಾರಿ ಡಿಕ್ಕಿ: ಬಸ್ ಚಾಲಕ ಸಾವು



ಚಾಮರಾಜನಗರ, ಜ.7– ತಾಲೂಕಿನ ಬೆಂಡರವಾಡಿ ಗ್ರಾಮದ ಬಳಿ ಮಂಗಳವಾರ ತಡರಾತ್ರಿ ಸಂಭವಿಸಿದ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಲಾರಿ ನಡುವಿನ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಬಸ್ ಚಾಲಕ ಸಾವನ್ನಪ್ಪಿದ್ದಾರೆ.

ತಾಲೂಕಿನ ಇರಸವಾಡಿ ಗ್ರಾಮದ ನಿವಾಸಿ ಹಾಗೂ ಬಸ್ ಚಾಲಕ ಮಂಜು ಸಾವನ್ನಪ್ಪಿದವರು. ತಮಿಳುನಾಡು ಮೂಲದ ಲಾರಿ ಚಾಲಕ ಗೋವಿಂದರಾಜು ಅವರ ಎರಡು ಕಾಲಿಗೂ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸ್ಥಳಕ್ಕೆ ಡಿಸಿ, ಎಸ್‌ಪಿ ಭೇಟಿ: ಬೆಂಡರವಾಡಿ ಗ್ರಾಮದ ಬಳಿ ಕೆಎಸ್‌ಆರ್‌ಟಿಸಿ ಬಸ್ ಮತ್ತು ಲಾರಿ ನಡುವೆ ಸಂಭವಿಸಿದ ಅಪಘಾತ ಸ್ಥಳಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಭೇಟಿ ನೀಡಿ ಪರಿಶೀಲಿಸಿದರು.

ಬಳಿಕ ಅಪಘಾತ ಕುರಿತು ಮಾಹಿತಿ ಪಡೆದರು. ಸಾರ್ವಜನಿಕರು, ವಾಹನ ಸಂಚಾರ ಸುರಕ್ಷತೆಗೆ ಅಗತ್ಯವಿರುವ ಕ್ರಮ ಕೈಗೊಳ್ಳುವಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಹನುಮಂತ ಉಪ್ಪಾರ್ ಸೇರಿದಂತೆ ಇನ್ನಿತರರಿದ್ದರು.



ಬೆಂಡರವಾಡಿ ಬಳಿ ಸಂಭವಿಸಿದ ಅಪಘಾತ ಸ್ಥಳಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಭೇಟಿ ನೀಡಿ ಪರಿಶೀಲಿಸಿ ಸಾರ್ವಜನಿಕರಿಂದ ಮಾಹಿತಿ ಪಡೆದರು.

ಜ.12, ಕೇಂದ್ರ ರೈಲ್ವೆ, ಜಲಶಕ್ತಿ ರಾಜ್ಯ ಸಚಿವರ ಪ್ರವಾಸ



ಚಾಮರಾಜನಗರ, ಜ.7– ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಜ.12 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಚಾಮರಾಜನಗರಕ್ಕೆ ಆಗಮಿಸುವ ಅವರು 11 ಗಂಟೆಗೆ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ಮಧ್ಯಾಹ್ನ 2.45ಕ್ಕೆ ಸಂತೇಮರಹಳ್ಳಿಗೆ ಆಗಮಿಸಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 3.10ಕ್ಕೆ ದುಗ್ಗಟ್ಟಿ ಗ್ರಾಮಕ್ಕೆ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬಳಿಕ 3.30ಕ್ಕೆ ಬೆಂಗಳೂರಿಗೆ ತೆರಳುವರು.

ಸಾಹಿತ್ಯ ಕೂಟದ ದ್ವಿತೀಯ ವಾರ್ಷಿಕೋತ್ಸವ



ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿ ಜಯನಗರ ಸಾಹಿತ್ಯ ಕೂಟದ ದ್ವಿತೀಯ ವಾರ್ಷಿಕೋತ್ಸವ ಸಮಾರಂಭ ಬುಧವಾರ ನಡೆಯಿತು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ, ಪರಿಷದ್ ಕರ್ನಾಟಕ ಪ್ರಾಂತ್ಯದ ವಲಯ ಪ್ರಮುಖ್ ಡಾ.ವಿ.ರಂಗನಾಥ್, ಬೆಳಗೋಡು ರಮೇಶ್, ಜಿಲ್ಲಾ ಸಮಿತಿಯ ಅಧ್ಯಕ್ಷ ಎಸ್.ಸುಬ್ರಹ್ಮಣ್ಯ ಹಾಗೂ ಉದ್ಯಮಿ ಡಾ.ಜಗನ್ನಾಥ್ ಶೆಣೈ ಉಪಸ್ಥಿತರಿದ್ದರು.

ಅಂತರ ಶಾಲಾ ಚೆಸ್ ಟೂರ್ನಮೆಂಟ್



ಮೈಸೂರು, ಜ.7 – ಮೈಸೂರು ಚೆಸ್ ಸೆಂಟರ್ ವತಿಯಿಂದ ಅಂತರ ಶಾಲಾ ಚೆಸ್ ಟೂರ್ನಮೆಂಟ್ ಅನ್ನು ಜ.18 ರಂದು ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಆಯೋಜಿಸಲಾಗಿದೆ. ಈ ಟೂರ್ನಮೆಂಟ್ ಶಾಲಾ ಮಕ್ಕಳಲ್ಲಿ ತಾರ್ಕಿಕ ಚಿಂತನೆ, ಏಕಾಗ್ರತೆ, ನಿರ್ಧಾರ ಸಾಮರ್ಥ್ಯ ಮತ್ತು ಕ್ರೀಡಾ ಸ್ಫೂರ್ತಿಯನ್ನು ಬೆಳೆಸುವ ಉದ್ದೇಶವನ್ನು ಹೊಂದಿದೆ. ಮೈಸೂರು ಮತ್ತು ಸುತ್ತಮುತ್ತಲಿನ ವಿವಿಧ ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಈ ಟೂರ್ನಮೆಂಟ್ ಅನ್ನು ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ನಿಯಮಾವಳಿಗಳ ಪ್ರಕಾರ ನಡೆಸಲಾಗುತ್ತಿದೆ.

ಸ್ಪರ್ಧೆಯು ವಿಭಾಗ ಎ: 1ನೇ ತರಗತಿಯಿಂದ 4ನೇ ತರಗತಿ, ವಿಭಾಗ ಬಿ : 5ನೇ ತರಗತಿಯಿಂದ 7ನೇ ತರಗತಿ, ವಿಭಾಗ ಸಿ : 8ನೇ ತರಗತಿಯಿಂದ 10ನೇ ತರಗತಿ ವಿಭಾಗಗಳಲ್ಲಿ ನಡೆಯಲಿದೆ.

ಪ್ರತಿ ವಿಭಾಗದಲ್ಲಿಯೂ ಆಕರ್ಷಕ ಟ್ರೋಫಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ.8123819220, 6361393935 ಸಂಪರ್ಕಿಸಬಹುದು.

ವೀಣಾವಾದನ



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ವಿದುಷಿ ರೇವತಿ ಕಾಮತ್ ವೀಣಾವಾದನ ಪ್ರಸ್ತುತಪಡಿಸಿದರು. ಪೃಥ್ವಿ ಭಾಸ್ಕರ್ (ಪಿಟೀಲು), ವಿದ್ವಾನ್ ಬಿ.ಎಸ್.ಪ್ರಶಾಂತ್ (ಮೃದಂಗ), ಶಂಕರ್ ಕೌಶಿಕ್ (ಘಟಂ) ಪಕ್ಕವಾದ್ಯದಲ್ಲಿ ಸಾತ್ ನೀಡಿದರು.

ಅಶ್ಲೀಲ ಗೀತೆಗಳಿಗೆ ಕಡಿವಾಣಕ್ಕೆ ಒತ್ತಾಯ

ಮೈಸೂರು: ಉತ್ತರ ಕರ್ನಾಟಕ ಸಂಗೀತಕ್ಕೆ ಶ್ರೀಮಂತ ಇತಿಹಾಸವಿದೆ. ಆದರೆ ಈಚೆಗೆ ಅಶ್ಲೀಲ, ದ್ವಂದ್ವಾರ್ಥದ ಹಾಡುಗಳ ಮೂಲಕ ಈ ಪರಂಪರೆಗೆ ಮಸಿ ಬಳಿಯಲಾಗುತ್ತಿದೆ ಎಂದು ಸಾಮಾಜಿಕ ಕಾರ್ಯಕರ್ತ ವಿಕ್ರಮ ಅಯ್ಯಂಗಾರ್ ಆರೋಪಿಸಿದ್ದಾರೆ.

ಇಲ್ಲಿನ ಜನಪದ ಸಾಹಿತ್ಯ ಹಾಡು ನಮ್ಮ ಸಂಸ್ಕೃತಿ ಪರಂಪರೆಯನ್ನು ಶತಮಾನಗಳಿಂದ ಬಿತ್ತರಿಸುತ್ತಾ ಬಂದಿವೆ. ಇಲ್ಲಿನ ಕಲಾವಿದರು ಅಶ್ಲೀಲ ಗೀತೆ, ಸಂಗೀತ ಹಾಡುವುದನ್ನು ಬಿಡಬೇಕು. ರೀಲ್ಸ್ ಹುಚ್ಚಾಟ ಬಿಟ್ಟು, ಮೂಲ ಜಾನಪದ ಸಂಗೀತ, ಸಾಹಿತ್ಯವನ್ನು ಸಾಮಾಜಿಕ ತಾಣದಲ್ಲಿ ಪ್ರದರ್ಶಿಸುವ ಮೂಲಕ ಶ್ರೀಮಂತ ಸಂಸ್ಕೃತಿಯನ್ನು ಉಳಿಸ ಬೇಕು ಎಂದು ಅವರು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ. ಮನೆ ಮಂದಿ ಕುಳಿತು ಕೇಳು ವಂತಹ ಸಾಹಿತ್ಯವನ್ನು ರಚಿಸಿ ಹಾಡುವ ಕಾರ್ಯಕ್ರಮ ನೀಡಬೇಕು. ರಸಮಂಜರಿ ಮತ್ತಿತರ ಕಾರ್ಯಕ್ರಮಗಳಲ್ಲಿ ಅಶ್ಲೀಲ ಜಾನಪದ ಗೀತೆಗಳನ್ನು ಹಾಡದಂತೆ ಎಚ್ಚರಿಕೆ ನೀಡುವ ಮೂಲಕ ಸರ್ಕಾರ ಅಶ್ಲೀಲ ಗೀತೆಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದ್ದಾರೆ.

ಪ್ರತಿಭಾ ಕಾರಂಜಿ



2025–26ನೇ ಸಾಲಿನ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಡಿಡಿಪಿಐ ಉದಯಕುಮಾರ್ ಇತರರು ಪಾಲ್ಗೊಂಡಿದ್ದರು. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹಂಗಾಮಿ ಅಧ್ಯಕ್ಷೆ ಜಿ.ಎನ್. ಜ್ಯೋತಿ ಉಪಸ್ಥಿತರಿದ್ದಾರೆ.

ಸರ್ಕಾರ ಚಾಪೆ ಕೆಳಗೆ ನುಸುಳಿದರೆ, ರೆಸಾರ್ಟ್‌ನವರು ರಂಗೋಲಿ ಕೆಳಗೆ ನುಸುಳುವ ಚಾಣಾಕ್ಷರು

ಕಾಡಿನ ಸಫಾರಿ ಬಂದ್: ಕಬಿನಿ ಹಿನ್ನೀರಿನಲ್ಲಿ ಈಗ ಶುರುವಾಗಿದೆ ಅಕ್ರಮ ಬೋಟ್ ಸಫಾರಿ

ಸರ್ಕಾರ, ಸಂಬಂಧಪಟ್ಟ ಇಲಾಖೆಗಳು ದಿವ್ಯ ಮೌನ



ಹೆಚ್.ಡಿ.ಕೋಟೆ ಕಬಿನಿ ಹಿನ್ನೀರಿನಲ್ಲಿ ಅಕ್ರಮವಾಗಿ ನಡೆಯುತ್ತಿರುವ ಬೋಟ್ ಸಫಾರಿ.

ಹೆಚ್.ಡಿ.ಕೋಟೆ, ಜ.7(ಮಂಜು)– ಸರ್ಕಾರ ಚಾಪೆ ಕೆಳಗೆ ನುಸುಳಿದರೆ, ರೆಸಾರ್ಟ್‌ನವರು ರಂಗೋಲಿ ಕೆಳಗೆ ನುಸುಳುವ ಚಾಣಾಕ್ಷತನ ತೋರಿದ್ದಾರೆ. ಮಾನವ–ಪ್ರಾಣಿ ಸಂಘರ್ಷ ತಡೆಯಲು ಅರಣ್ಯ ಪ್ರದೇಶದಲ್ಲಿ ಸಫಾರಿ ನಿಲ್ಲಿಸಿ ಸರ್ಕಾರ ಆದೇಶ ಹೊರಡಿಸಿದ್ದರೂ ರೆಸಾರ್ಟ್‌ನವರು ಅಕ್ರಮವಾಗಿ ಬೋಟ್ ಸಫಾರಿ ನಡೆಸುವ ಮೂಲಕ ಪ್ರವಾಸಿಗರನ್ನು ಆಕರ್ಷಿಸಿ ಹಣ ಮಾಡುವ ಕೆಲಸಕ್ಕೆ ಮುಂದಾಗಿದ್ದಾರೆ.

ಅರಣ್ಯ ಪ್ರದೇಶದಲ್ಲಿ ಸಫಾರಿ ಸ್ಥಗಿತಗೊಂಡಾಗಿನಿಂದ ರೆಸಾರ್ಟ್‌ನವರು ಸದ್ದಿಲ್ಲದೆ ಅಕ್ರಮವಾಗಿ ಕಬಿನಿ ಹಿನ್ನೀರಿನಲ್ಲಿ ಬೋಟ್ ಸಫಾರಿ ನಡೆಸುತ್ತಿದ್ದರೂ ಸರ್ಕಾರ ಮತ್ತು ಸಂಬಂಧಪಟ್ಟ ಎಲ್ಲಾ ಇಲಾಖೆಗಳು ದಿವ್ಯ ಮೌನವಹಿಸಿದೆ.

ತಾಲೂಕಿನಲ್ಲಿ ಇತ್ತೀಚೆಗಷ್ಟೇ ನಾಗರಹೊಳೆ ಅಭಯಾರಣ್ಯದಿಂದ ಗ್ರಾಮಗಳಿಗೆ ಹುಲಿ ಬಂದು, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರ ಮೇಲೆ ದಾಳಿ ನಡೆಸಿ ಮೂವರನ್ನು ಬಲಿ ತೆಗೆದುಕೊಂಡು, ಓರ್ವ ರೈತನನ್ನು ತೀವ್ರವಾಗಿ ಗಾಯಗೊಳಿಸಿತ್ತು. ಜೊತೆಗೆ ಜಾನುವಾರುಗಳ ಮೇಲೆಯೂ ದಾಳಿ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಕಾಡಿನ ಪ್ರದೇಶದಲ್ಲಿ ಸಫಾರಿ ನಡೆಸುವುದಕ್ಕೆ ಭಾರೀ ವಿರೋಧ ವ್ಯಕ್ತವಾಗಿತ್ತು. ಇದರಿಂದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಸಫಾರಿ ಬಂದ್ ಮಾಡಿ ಆದೇಶ ಹೊರಡಿಸಿದ್ದರು. ಆದರೆ, ಅರಣ್ಯ ಸಚಿವರು ಹಾಗೂ ಸರ್ಕಾರದ ಆದೇಶಕ್ಕೆ ರೆಸಾರ್ಟ್‌ನವರು ತಲೆಕೆಡಿಸಿಕೊಳ್ಳದೆ ಪ್ರವಾಸಿಗರನ್ನು ಸೆಳೆಯಲು ತಾಲೂಕಿನ ಕಬಿನಿ ಹಿನ್ನೀರಿನಲ್ಲಿ ಹೆಚ್ಚಿನ ಪ್ರಮಾಣದ ಮೋಟಾರ್ ಬೋಟ್‌ಗಳನ್ನು ತರಿಸಿ ಬೋಟ್ ಸಫಾರಿ ನಡೆಸುತ್ತಿದ್ದಾರೆ.

> “ಕಬಿನಿ ಹಿನ್ನೀರಿನಲ್ಲಿ ನಿಯಮ ಉಲ್ಲಂಘಿಸಿ ಬೋಟ್ ಸಫಾರಿ ನಡೆಸುವ ರೆಸಾರ್ಟ್‌ನವರಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿರುವ ರೆಸಾರ್ಟ್ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ. ಕೆಲವು ರೆಸಾರ್ಟ್‌ನವರು ಅಕ್ರಮವಾಗಿ ಬೋಟ್ ಸಫಾರಿ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದೆ. ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಈ ಸಂಬಂಧ ಪತ್ರ ಬರೆಯಲಾಗುವುದು.
> – ಗಣೇಶ್, ಕಬಿನಿ ಸಹಾಯಕ ಕಾರ್ಯ ಪಾಲಕ ಅಭಿಯಂತರರು.

ನಾಗರಹೊಳೆ ಮತ್ತು ಬಂಡೀಪುರ ವ್ಯಾಪ್ತಿಯಲ್ಲಿ ಕಾಡಿನಿಂದ ಹೊರಗೆ ಬಂದಿದ್ದ 22 ಹುಲಿಗಳನ್ನು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅರಣ್ಯ ಇಲಾಖೆಯವರು ಸೆರೆ ಹಿಡಿದಿದ್ದಾರೆ. ಸಫಾರಿ ಎರಡು ತಿಂಗಳಾದರೂ ನಡೆಯದೇ ಇರುವ ಹಿನ್ನೆಲೆಯಲ್ಲಿ ಪ್ರವಾಸಿಗರ ಸಂಖ್ಯೆ ಇಳಿಮುಖಗೊಂಡ ಹಿನ್ನೆಲೆಯಲ್ಲಿ ಅಧಿಕೃತ ಮತ್ತು ಅನಧಿಕೃತವಾಗಿರುವ ರೆಸಾರ್ಟ್‌ಗಳು, ಹೋಂಸ್ಟೇಗಳು ನಷ್ಟ ಅನುಭವಿಸುವ ಪರಿಸ್ಥಿತಿ ಉಂಟಾಗಿತ್ತು.

ಈ ಹಿನ್ನೆಲೆಯಲ್ಲಿ ರೆಸಾರ್ಟ್‌ಗಳಿಗೆ ಪ್ರವಾಸಿಗರನ್ನು ಆಕರ್ಷಿಸಲು ಹೊಸ ವರ್ಷದ ಆಚರಣೆಯ ಹಿನ್ನೆಲೆಯಲ್ಲಿ ಕಬಿನಿ ಹಿನ್ನೀರಿನಲ್ಲಿ ಬಹುತೇಕ ರೆಸಾರ್ಟ್‌ನವರು ಬೋಟ್ ಸಫಾರಿ ನಡೆಸಿ ಕಾಡಂಚಿನಲ್ಲಿರುವ ವನ್ಯಪ್ರಾಣಿಗಳನ್ನು ತೋರಿಸುವ ಕೆಲಸವನ್ನು ದಿನಕ್ಕೆ 4–5 ಬಾರಿ ಪೈಪೋಟಿ ಮೇಲೆ ಮಾಡುತ್ತಿದ್ದಾರೆ. ಇದು ಈಗಲೂ ಮುಂದುವರೆದಿದ್ದು ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ. 2–3 ತಿಂಗಳ ಹಿಂದೆ ಕಬಿನಿ ಹಿನ್ನೀರಿನಲ್ಲಿ ಬೆರಳೆಣಿಕೆಯಷ್ಟು ಬೋಟ್‌ಗಳು ಮಾತ್ರ ಸಫಾರಿ ನಡೆಸುತ್ತಿದ್ದವು. ಕೆಲವೊಂದು ರೆಸಾರ್ಟ್‌ನವರು ಬೋಟ್ ಸಫಾರಿ ನಡೆಸಲು ನೀರಾವರಿ ಇಲಾಖೆ ಮೂಲಕ ಅನುಮತಿ ಪಡೆದಿದ್ದರೆ ಮತ್ತೆ ಅನೇಕರು ಅನುಮತಿಯನ್ನೇ ಪಡೆಯದೆ ನಿಯಮಬಾಹಿರವಾಗಿ ಸಫಾರಿ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ.

> “ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಪ್ರವಾಸಿಗರನ್ನು ಆಕರ್ಷಿಸಲು ಅಕ್ರಮವಾಗಿ ಕಬಿನಿ ಹಿನ್ನೀರಿನಲ್ಲಿ ಬೋಟ್ ಸಫಾರಿ ಮಾಡುತ್ತಿದ್ದಾರೆ ಎಂಬ ಮಾಹಿತಿಗಳು ಲಭ್ಯವಾಗಿರುವುದರಿಂದ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಜರುಗಿಸಲಾಗುವುದು. –ಶ್ರೀನಿವಾಸ್, ತಹಸೀಲ್ದಾರ್.

ಕಬಿನಿ ಹಿನ್ನೀರಿನ ಬೋಟ್ ಸಫಾರಿಯಿಂದ ಯಾರಿಗೆ ಅನುಕೂಲ, ಅನಾನುಕೂಲ ಎಂಬುದಕ್ಕಿಂತ ಹೆಚ್ಚಾಗಿ ಪರಿಸರ, ನೀರು, ವನ್ಯಪ್ರಾಣಿಗಳು, ಅರಣ್ಯ, ರೈತರು, ಕೂಲಿ ಕಾರ್ಮಿಕರ ಮೇಲೆ ಉಂಟಾಗುವ ಪರಿಣಾಮಗಳ ಕುರಿತು ಯೋಚಿಸಬೇಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಮ್ಮನಕಟ್ಟೆಯ ಮತ್ತು ಬಂಡೀಪುರದ ಸಫಾರಿಗಳನ್ನು ಹಂತ ಹಂತವಾಗಿ ಆರಂಭಿಸುವ ನಿಟ್ಟಿನಲ್ಲಿ ಅಧ್ಯಯನ ಮಾಡಲು ತಜ್ಞರ ಸಮಿತಿ ರಚಿಸಿ ವರದಿ ನೀಡುವಂತೆ ಕರ್ನಾಟಕ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಸೂಚಿಸಿದ್ದರು. ವರದಿ ಬಂದ ಬಳಿಕ ತಾಲೂಕಿನಲ್ಲಿ ಹಂತ ಹಂತವಾಗಿ ನಿಯಮಾನುಸಾರವಾಗಿ ಅರಣ್ಯ ಸಫಾರಿ ಪ್ರಾರಂಭಿಸುವ ಸೂಚನೆ ನೀಡಿದ್ದಾರೆ. ಅಷ್ಟರಲ್ಲಿ ಈ ಬೋಟ್ ಸಫಾರಿ ನಿರಂತರವಾಗಿ ನಡೆಯುತ್ತಿದೆ.

ಅಕ್ರಮವಾಗಿ ಸಾಗಿಸುತ್ತಿದ್ದ ಪಡಿತರ ಅಕ್ಕಿ ವಶ

ಚಾಲಕ, ಲಾರಿ ವಶ, ಪ್ರಕರಣ ದಾಖಲು





ಕೆ.ಆರ್.ನಗರದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಕಳ್ಳಸಾಗಣೆ ಮಾಡುತ್ತಿದ್ದ ಲಾರಿ ಮತ್ತು ವಶಪಡಿಸಿಕೊಳ್ಳಲಾದ ಅಕ್ಕಿ.

ಕೆ.ಆರ್.ನಗರ: ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಕ್ಯಾಂಟರ್ ಮತ್ತು ಚಾಲಕನನ್ನು ವಶಕ್ಕೆ ಪಡೆದಿರುವ ಪಟ್ಟಣದ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಟ್ಟಣದ ಹಾಸನ ರಸ್ತೆ ಕಡೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಕ್ಯಾಂಟರ್‌ನಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಕಳ್ಳಸಾಗಣೆಯಾಗುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿಯನ್ನಾಧರಿಸಿ ಮೈಸೂರು ದಕ್ಷಿಣ ವಲಯ ಡಿವೈಎಸ್‌ಪಿ ಟಿ.ಬಿ.ರಾಜಣ್ಣ ನೇತೃತ್ವದಲ್ಲಿ ಪೊಲೀಸರು ಪಟ್ಟಣದ ವೆಂಕಟೇಶ್ವರ ಚಿತ್ರಮಂದಿರದ ಬಳಿ ದಾಳಿ ನಡೆಸಿದರು. ಈ ವೇಳೆ ಲಾರಿ ಸಮೇತ 98 ಮೂಟೆಯ 46 ಕ್ವಿಂಟಾಲ್ ಪಡಿತರ ಅಕ್ಕಿಯೊಂದಿಗೆ ಚಾಲಕ ಮಹಮ್ಮದ್ ಸಜ್ಜದ್‌ನನ್ನು ವಶಕ್ಕೆ ಪಡೆಯಲಾಯಿತು.

ಯಾವುದೇ ದಾಖಲೆ ಇಲ್ಲದೆ ಸಾಗಣೆ ಮಾಡುತ್ತಿದ್ದ ಬಗ್ಗೆ ಮಾಹಿತಿ ಆಧರಿಸಿ ಲಾರಿಯನ್ನು ತಡೆದು ಪರಿಶೀಲಿಸಲಾಯಿತು. ಈ ಸಂದರ್ಭದಲ್ಲಿ ಸರ್ಕಾರಿ ಮುದ್ರೆಯ ಪಡಿತರ ಅಕ್ಕಿಯ ಚೀಲದ ಹೊಲಿಗೆಯನ್ನು ಬಿಚ್ಚದೆ ಚೀಲಸಮೇತ ಅಕ್ಕಿಯನ್ನು ಅಕ್ರಮವಾಗಿ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.

> ವಶಕ್ಕೆ ಪಡೆಯಲಾಗಿರುವ ಪಡಿತರ ಅಕ್ಕಿ ಆಹಾರ ನಿಗಮದ ಗೋಡೌನ್‌ನಿಂದ ಬಂದಿರುವ ಅಕ್ಕಿಯಾದರೂ ಅದು ಪಡಿತರ, ಬಿಸಿಯೂಟ, ಹಾಸ್ಟೆಲ್ ಅಥವಾ ಖಾಸಗಿಯವರು ಖರೀದಿಸುವ ಅಕ್ಕಿಯೇ ಎಂಬುದು ಇನ್ನೂ ಖಚಿತವಾಗಿಲ್ಲ. ತನಿಖೆ ನಡೆಸಿದ ನಂತರ ಅಕ್ಕಿ ಯಾವ ಗೋಡೌನ್‌ನಿಂದ ಬಂದಿದೆ ಎಂಬುದನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. –ಸುರೇಶ್, ಆಹಾರ ನಿರೀಕ್ಷಕರು, ಆಹಾರ ಇಲಾಖೆ

ಈ ಸಂಬಂಧ ಆಹಾರ ಇಲಾಖೆ ನಿರೀಕ್ಷಕರಾದ ಕುಮಾರ್ ಮತ್ತು ಸುರೇಶ್ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಇದುವರೆಗೆ ಮೂರನೇ ಘಟನೆ: ಪಟ್ಟಣದಲ್ಲಿ ಈ ಪ್ರಕರಣ ಸೇರಿದಂತೆ ಮೂರು ಬಾರಿ ಅಕ್ರಮವಾಗಿ ಸಾಗಣೆ ಮಾಡುತ್ತಿರುವ ಹಾಗೂ ಅಕ್ರಮವಾಗಿ ಶೇಖರಣೆ ಮಾಡಿದ್ದ ಪಡಿತರ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ.

ಕೆಲವು ತಿಂಗಳ ಹಿಂದೆಯಷ್ಟೆ ಕ್ಯಾಂಟರ್‌ನಲ್ಲಿ ಅಕ್ರಮ ಸಾಗಣೆ ಮಾಡುತ್ತಿದ್ದ 9.7 ಕ್ವಿಂಟಾಲ್ ಅಕ್ಕಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿತ್ತು. ಪಟ್ಟಣದ ಖಾಸಗಿ ಗೋಡೌನ್ ಮೇಲೆ ಮತ್ತೆ ದಾಳಿ ನಡೆಸಿ 14 ಕ್ವಿಂಟಾಲ್ ಅಕ್ಕಿ, ಐದೂವರೆ ಕ್ವಿಂಟಾಲ್ ರಾಗಿ ಹಾಗೂ ನಾಲ್ಕೂವರೆ ಕ್ವಿಂಟಾಲ್ ಗೋಧಿಯನ್ನು ವಶಕ್ಕೆ ಪಡೆಯಲಾಗಿತ್ತು. ಇದೀಗ ಮತ್ತೊಮ್ಮೆ ಪಡಿತರ ಅಕ್ಕಿ ಕಳ್ಳಸಾಗಣೆ ನಡೆದಿದೆ. ಇದರ ಹಿಂದೆ ದೊಡ್ಡ ಮಾಫಿಯಾ ಇದೆ ಎಂದು ಸಾರ್ವಜನಿಕರು ಸಂಶಯ ವ್ಯಕ್ತಪಡಿಸಿದ್ದಾರೆ.

ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಸ್ಥಳೀಯ ಸಂಸ್ಥೆ ಅಧಿಕಾರ ಹಿಡಿಯೋಣ

ಬಿಜೆಪಿ ಮುಖಂಡರಿಗೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕರೆ



ತಿ.ನರಸೀಪುರ ಬೈರಾಪುರ ಮಹಾ ಶಕ್ತಿ ಕೇಂದ್ರದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹೆಳವರ ಹುಂಡಿ ನಂದೀಶ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಸನ್ಮಾನಿಸಿದರು.

ತಿ.ನರಸೀಪುರ, ಜ.7– ಬಿಜೆಪಿ ಕಾರ್ಯಕರ್ತರು ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಸ್ಥಳೀಯ ಸಂಸ್ಥೆಯ ಚುನಾವಣೆಗೆ ಸಜ್ಜಾಗಬೇಕು ಎಂದು ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಬೈರಾಪುರ ಮಹಾ ಶಕ್ತಿ ಕೇಂದ್ರದ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಹೆಳವರ ಹುಂಡಿ ನಂದೀಶ್ ಅವರು ಭೇಟಿ ಮಾಡಿ ಅಭಿನಂದಿಸಿದ ನಂತರ ಮಾತನಾಡಿದ ಅವರು ವರುಣ ವಿಧಾನಸಭಾ ಕ್ಷೇತ್ರದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗುವ ಮೂಲಕ ಅಧಿಕಾರ ಹಿಡಿಯಬೇಕು ಎಂದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಸೂಚನೆಯಂತೆ ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸಿ ಚಾಮರಾಜನಗರ ಮತ್ತು ಮೈಸೂರು ಹಾಗೂ ಕೊಡಗು ಕ್ಷೇತ್ರಗಳು ಬಿಜೆಪಿ ವಶವಾಗುವಂತೆ ಮಾಡೋಣ ಎಂದರು. ವರುಣದಲ್ಲಿ ಈ ಬಾರಿ ಜಿಪಂ, ತಾಪಂ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾದರೂ ಅವರ ಪರ ಕೆಲಸ ಮಾಡಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಬೇಕು ಎಂದರು. ವರುಣ ಮಂಡಲ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ, ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ಮಂಜು (ನಂದ), ಅಡಿಗೆ ವಿಜಿ, ಆಟೋ ಮೂರ್ತಿ, ಡಾಲಿ ಮಹೇಂದ್ರ ಈ ವೇಳೆ ಭಾಗವಹಿಸಿದ್ದರು.

ಪ್ರೀತ್ಸೇ...ಪ್ರೀತ್ಸೇ... ಅಂತ ಅಪ್ರಾಪ್ತೆ ಹಿಂದೆ ಬಿದ್ದ ರೋಮಿಯೋ

ಬೇಸತ್ತ ವಿದ್ಯಾರ್ಥಿನಿ ನೇಣಿಗೆ ಶರಣು



ನಂಜನಗೂಡು: ತನ್ನ ಹಿಂದೆ ಬಿದ್ದು ಪ್ರೀತಿಸುವಂತೆ ಒತ್ತಾಯಿಸಿ ಮದುವೆ ಆಗುವಂತೆ ಪೀಡಿಸಿ ಮಾನಸಿಕ ಕಿರುಕುಳ ನೀಡಿದ ಹಿನ್ನೆಲೆಯಲ್ಲಿ ಅಪ್ರಾಪ್ತ ವಿದ್ಯಾರ್ಥಿನಿ ನೇಣಿಗೆ ಶರಣಾದ ಘಟನೆ ನಗರದ ನೀಲಕಂಠನಗರ ಬಡಾವಣೆಯಲ್ಲಿ ನಡೆದಿದೆ.

ನೀಲಕಂಠ ನಗರದ ಗುರುಮೂರ್ತಿ ಅವರ ಪುತ್ರಿ ದಿವ್ಯ(17) ಮೃತ ದುರ್ದೈವಿ. ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ವರ್ಷದ ಪಿಯುಸಿ ವಿದ್ಯಾಭ್ಯಾಸ ಮಾಡುತ್ತಿದ್ದ ದಿವ್ಯಾಳ ಹಿಂದೆ ದೇಬೂರು ಗ್ರಾಮದ ಆದಿತ್ಯ ಎಂಬ ಯುವಕ ಪ್ರೀತಿಸುವಂತೆ ದುಂಬಾಲು ಬಿದ್ದಿದ್ದಾನೆ. ದಿವ್ಯಾ, ಆದಿತ್ಯನ ಒತ್ತಾಯವನ್ನು ತಿರಸ್ಕರಿಸಿದ್ದಾಳೆ. ಅಲ್ಲದೆ ಆದಿತ್ಯಾ ನೀಡುತ್ತಿದ್ದ ಕಿರುಕುಳದ ಬಗ್ಗೆ ಪೋಷಕರ ಗಮನಕ್ಕೂ ತಂದಿದ್ದಾಳೆ ಎನ್ನಲಾಗಿದೆ.

ಹುಡುಗನಿಗೆ ಬುದ್ದಿ ಹೇಳುವಂತೆ ತಂದೆ ಗುರುಮೂರ್ತಿ ಕೆಲವು ಹಿರಿಯರಿಗೆ ಹೇಳಿದ್ದಾರೆ. ಹೀಗಿದ್ದೂ ಆದಿತ್ಯ ತನ್ನ ವರ್ತನೆ ಬದಲಿಸಿಕೊಳ್ಳದೆ ದಿವ್ಯಾ ಹಿಂದೆ ಬಿದ್ದು. ಪ್ರೀತಿಸುವಂತೆ ಕಿರುಕುಳ ನೀಡಿದ್ದರಿಂದಾಗಿ ಮನನೊಂದ ದಿವ್ಯಾ ತನ್ನ ಮನೆಯಲ್ಲಿ ನೇಣಿಗೆ ಶರಣಾಗಿದ್ದಾಳೆ. ಆದಿತ್ಯಾ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೃತಳ ತಂದೆ ಗುರುಮೂರ್ತಿ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ದೇವರಾಜ ಅರಸು ಬಾಳಿ ಬದುಕಿದ ಮನೆಯನ್ನು ಸ್ಮಾರಕ ಮಾಡಿ



ಹುಣಸೂರು, ಜ.7– ಕರ್ನಾಟಕ ಕಂಡ ಧೀಮಂತ ನಾಯಕ, ಸಾಮಾಜಿಕ ನ್ಯಾಯದ ಹರಿಕಾರರಾದ ಡಿ.ದೇವರಾಜ ಅರಸು ಅವರು ಬಾಳಿ ಬದುಕಿದ ಕಲ್ಲಹಳ್ಳಿ ಮನೆಯನ್ನು ಸ್ಮಾರಕ ಮಾಡುವಂತೆ ಹುಣಸೂರಿನ ಪ್ರಗತಿಪರ ಸಂಘಟನೆಗಳ ಮುಖಂಡರುಗಳು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಕಲ್ಲಹಳ್ಳಿ ಮನೆಯ ಬಳಿ ಮಾತನಾಡಿದ ದಸಂಸ ರಾಜ್ಯ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ, ಡಿ. ದೇವರಾಜ ಅರಸು ಅವರ ಆಡಳಿತಾವಧಿಯಲ್ಲಿ ಸಾಮಾಜಿಕವಾಗಿ ಬಳಲುತ್ತಿದ್ದ ದಲಿತ ಸಮಾಜಕ್ಕೆ ಆತ್ಮಸ್ಥೈರ್ಯ ತುಂಬಿ ಅಸ್ಪೃಶ್ಯತೆ, ಅಸಮಾನತೆ, ಜಾತೀಯತೆಯಂತಹ ಪಿಡುಗನ್ನು ನಿರ್ಮೂಲನೆ ಮಾಡಲು ಶ್ರಮಿಸುತ್ತಾ ಉಳುವವನೇ ಭೂಮಿ ಒಡೆಯನಿಗೆ ಭೂ ಮಾಲೀಕತ್ವನ್ನು ಕೊಟ್ಟು ತಲೆ ಮೇಲೆ ಮಲ ಹೊರುತ್ತಿದ್ದ ಪೌರಕಾರ್ಮಿಕರಿಗೆ, ಜೀತಗಾರಿಕೆ ಮಾಡುತ್ತಿದ್ದ ಅನೇಕ ಸಾವಿರಾರು ಜನರಿಗೆ ಮುಕ್ತಿಯನ್ನು ಕೊಟ್ಟು ಸಾಮಾಜಿಕ ಬದಲಾವಣೆಯನ್ನು ತಂದರು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನಿಕ ಕಾನೂನುಗಳನ್ನು ಯಥಾವತ್ತಾಗಿ ಜಾರಿಗೆ ತಂದ ದೇಶದ ಮುಖ್ಯಮಂತ್ರಿಗಳಲ್ಲಿ ಅರಸುರವರು ಮಾತ್ರ ಎಂಬುದು ಹೆಮ್ಮೆ ಪಡುವ ವಿಷಯವಾಗಿದೆ. ಇಂತಹ ಮಾನವೀಯತೆಯ ಗುಣವನ್ನು ಹೊಂದಿದ್ದ ಡಿ.ದೇವರಾಜ ಅರಸು ಅವರು ಬಾಳಿ ಬದುಕಿದ ಅರಸು ಕಲ್ಲಹಳ್ಳಿ ಮನೆಯು ಶಿಥಿಲಾವಸ್ಥೆಯಿಂದ ಕೂಡಿ ಇಂದೋ ನಾಳೆಯೋ ಬಿದ್ದು ಹೋಗುವ ಸ್ಥಿತಿಯಲ್ಲಿರುವುದು ನಮ್ಮ ಜನರಿಗೆ ನೋವು ತರುತ್ತಿದೆ ಎಂದರು.

ಈ ಕೂಡಲೇ ತಾಲೂಕಿನ ಶಾಸಕರಾದ ಜಿ.ಡಿ.ಹರೀಶ್‌ಗೌಡರು, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಮತ್ತು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಬಳಿ ಹೋಗಿ ಮನವಿ ಸಲ್ಲಿಸಿ ಶಿಥಿಲಾವಸ್ಥೆಯಲ್ಲಿರುವ ಅರಸುರವರ ಮನೆಯನ್ನು ದುರಸ್ತಿ ಮಾಡಿಸಿ ಮ್ಯೂಸಿಯಂ ಮಾಡಬೇಕಾಗಿ ದಸಂಸದ ವತಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಎಂದರು. ಡಿ.ದೇವರಾಜ ಅರಸು ಅವರ ಮುಖ್ಯಮಂತ್ರಿಗಳಾಗಿದ್ದ ಅವಧಿಗಿಂತ ಹೆಚ್ಚಿನ ಅವಧಿಯ ದಿನಗಳನ್ನು ಇಂದಿನ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಪೂರೈಸಿರುವುದರಿಂದ ನೆನಪಿಗಾಗಿ ಕಲ್ಲಹಳ್ಳಿ ಗ್ರಾಮಕ್ಕೆ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿ ಅವರು ವಾಸಿಸಿದ್ದ ಮನೆಯನ್ನು ಮ್ಯೂಸಿಯಂ ಆಗಿ ಮಾಡಬೇಕು ಎಂದರು.

ಭೋವಿ ಸಮಾಜದ ತಾಲ್ಲೂಕು ಮುಖಂಡರು ಮತ್ತು ಅರಸುರವರ ಅಭಿಮಾನಿಯಾದ ವಿ.ಗಣೇಶ್ ಅವರು ಮಾತನಾಡಿ, ಕಲ್ಲಹಳ್ಳಿ ಗ್ರಾಮದ ಅಭಿವೃದ್ಧಿಗೆ 10 ಕೋಟಿ ಹಾಗೂ ಹುಣಸೂರು ತಾಲೂಕಿನ ಅಭಿವೃದ್ಧಿಗೆ 50 ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸುವಂತೆ ಮನವಿ ಮಾಡಿದರು. ತಾಲೂಕು ಕುಂಬಾರ ಮತ್ತು ಅಹಿಂದ ಸಮಾಜದ ಮುಖಂಡರಾದ ನಾಗರಾಜು ಚಿಲ್ಕುಂದ ಅವರು ಮಾತನಾಡಿದರು. ಈ ವೇಳೆ ಗ್ರಾಮದ ಭೋಗಪ್ಪ, ಮಹದೇವಪ್ಪ, ಪಾಪಣ್ಣ ಕೌಶಿ ಮುಂತಾದವರು ಹಾಜರಿದ್ದರು.

ಕದ್ದ ಬೈಕಿಗೆ ಬೆಂಕಿ ಹಚ್ಚಿದ ಕಳ್ಳರು



ನಂಜನಗೂಡು: ಮನೆ ಮುಂದೆ ನಿಂತಿದ್ದ ಬೈಕ್ ಕಳ್ಳತನ ಮಾಡಿ ನಗರದ ಕೋರೆ ಹುಂಡಿ ಬಡಾವಣೆಯ ನಿರ್ಜನ ಪ್ರದೇಶದಲ್ಲಿ ಸುಟ್ಟು ಹಾಕಿರುವ ಘಟನೆ ಬುಧವಾರ ಜರುಗಿದೆ.

ನಗರದ ಮಹದೇಶ್ವರ ಬಡಾವಣೆಯ ಸುರೇಶ್ ಎಂಬುವರಿಗೆ ಸೇರಿದ ಪಲ್ಸರ್ ಬೈಕ್ ಅನ್ನು ಸೋಮವಾರ ರಾತ್ರಿ ದುಷ್ಕರ್ಮಿಗಳು ಕಳ್ಳತನ ಮಾಡಿದ್ದಾರೆ, ಅದೇ ಬೈಕ್ ಅನ್ನು ಕಳೆದ ಕೆಲ ದಿನಗಳ ಹಿಂದೆ ನಗರದ ಕೋರೆಹುಂಡಿಯ ನಿರ್ಜನ ಪ್ರದೇಶದಲ್ಲಿ ಯುವಕ ನೋರ್ವನನ್ನು ಬೈಕ್ ಸಮೇತ ಸಜೀವವಾಗಿ ಸುಟ್ಟು ಹಾಕಿದ್ದ ಪ್ರದೇಶದ ಪಕ್ಕದಲ್ಲಿಯೇ ಕಳ್ಳತನವಾಗಿರುವ ಬೈಕನ್ನು ಸುಟ್ಟು ಹಾಕಲಾಗಿದೆ. ಈ ಸಂಬಂಧ ಸುರೇಶ್ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ನೂತನ ದಿನದರ್ಶಿಕೆ ಬಿಡುಗಡೆ



ತಿ.ನರಸೀಪುರ ತಾಲೂಕು ಮುಸುವಿನ ಕೊಪ್ಪಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ದಿನದರ್ಶಿಕೆಯನ್ನು ಸಂಘದ ಅಧ್ಯಕ್ಷ ಎಂ ಶಿವರಾಮ ಬಿಡುಗಡೆಗೊಳಿಸಿದರು, ಉಪಾಧ್ಯಕ್ಷ ಕೆಬ್ಬೆ ಹುಂಡಿ ಮಹೇಶ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎನ್ ರಾಜು, ನಿರ್ದೇಶಕರಾದ ಎಂ.ಚಂದ್ರಪ್ಪ, ಪುಟ್ಟ ಮಾದಯ್ಯ, ಶಿವಕುಮಾರ್, ಎನ್ ಮಹೇಶ್, ಮಹದೇವಯ್ಯ, ಶಿವಣ್ಣ, ಚಿಕ್ಕಮಾದ ನಾಯಕ, ನಿಂಗರಾಜು, ಶಾಂತಮ್ಮ, ಕಮಲಮ್ಮ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಶೇಖರ್, ನಿರ್ಮಲ ಹಾಜರಿದ್ದರು.



ಕಂಪಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಅಧ್ಯಕ್ಷ ಮಹದೇವ್, ಉಪಾಧ್ಯಕ್ಷ ತಮ್ಮಯ್ಯ, ಸಿಇಓ ಹರ್ಷ, ನಿರ್ದೇಶಕರಾದ ಕುಮಾರ್, ಪ್ರಕಾಶ್ ಗೌಡ, ಮಾದೇವ್, ಲಕ್ಷ್ಮಣ್, ಸಂತೋಷ್, ಭಾಗ್ಯ ರಾಜೇಗೌಡ, ರವಿ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

ಜ.10, ಚಾ.ನಗರದಲ್ಲಿ ವಿಶ್ವ ರೈತ ದಿನ ಆಚರಣೆ



ಸುದ್ದಿಗೋಷ್ಠಿಯಲ್ಲಿ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡುತ್ತಿರುವುದು.

ನಂಜನಗೂಡು: ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಜ.10 ರಂದು ಚಾಮರಾಜನಗರದ ಡಾ.ರಾಜಕುಮಾರ್ ಸಭಾಂಗಣದಲ್ಲಿ ವಿಶ್ವ ರೈತ ದಿನಾಚರಣೆ ಹಾಗೂ ಅನ್ನದಾತ ಸಂಸ್ಕೃತ ಗ್ರಂಥ ಬಿಡುಗಡೆ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿ ಕೆರೆ ಉಂಡಿ ಭಾಗ್ಯರಾಜ್ ಹೇಳಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರೈತರ ವಿವಿಧ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿ ಬೆಳಕು ಚೆಲ್ಲುವ ಸಲುವಾಗಿ ಈ ಸಮಾರಂಭವನ್ನು ಏರ್ಪಡಿಸಲಾಗಿದ್ದು, ಸಮಾರಂಭದಲ್ಲಿ ರೈತರ ದಿನನಿತ್ಯದ ಸಮಸ್ಯೆಗಳಾದ ತೂಕದಲ್ಲಿ ಮೋಸ ತಪ್ಪಿಸಲು ಸಕ್ಕರೆ ಕಾರ್ಖಾನೆಗಳ ಮುಂದೆ ತೂಕ ಯಂತ್ರ ಅಳವಡಿಕೆ ಮಾಡಬೇಕು, ಮತ್ತು ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಗೊಳಿಸಬೇಕು, ಇಳುವರಿಯಲ್ಲಿನ ಮೋಸ ತಪ್ಪಿಸಲು ಇಳುವರಿ ಪ್ರಯೋಗಾಲಯ ಸ್ಥಾಪಿಸಬೇಕು, ಸಕ್ಕರೆ ಕಾರ್ಖಾನೆಗಳ ಲಾಭ ಅಂಶ ರೈತರ ಹಂಚಿಕೆಗೆ ಕ್ರಮ ಕೈಗೊಳ್ಳಬೇಕು, ಕಬ್ಬಿನ ಹೊಲದಲ್ಲಿ ಪಿ.ಆರ್.ಪಿ ದರ ನಿಗದಿಗೊಳಿಸಬೇಕು, ಎನ್‌ಡಿಆರ್‌ಎಫ್ ಮುಖಾಂತರ ಅತಿವೃಷ್ಟಿ ಬೆಳೆ ಹಾನಿ ಹಾಗೂ ಪ್ರಾಕೃತಿಕ ವಿಕೋಪದ ಬೆಳೆ ನಷ್ಟಕ್ಕೆ ವೈಜ್ಞಾನಿಕ ನಷ್ಟ ಪರಿಹಾರ ನೀಡುವ ಮಾನದಂಡ ಜಾರಿಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಕಾರ್ಯಕ್ರಮದಲ್ಲಿ ಆಗ್ರಹಿಸಲಾಗುವುದು ಎಂದರು.

ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ್ ದಳವಾಯಿ ಅನ್ನದಾತ ಗ್ರಂಥ ಬಿಡುಗಡೆಗೊಳಿಸುವರು. ಪ್ರೊ.ಅಶೋಕ್ ಆಲೂರು ಅವರು ವಿಚಾರಗೋಷ್ಠಿ ಮಂಡಿಸುವರು ಎಂದರು.

ವೈಭವದ ವೈಮಾಳಿಗೆ ಉತ್ಸವದೊಂದಿಗೆ ತ್ರಿಪುರ ಸುಂದರಿ ಅಮ್ಮನವರ ಜಾತ್ರೆ ಸಂಪನ್ನ

ಸಾವಿರಾರು ಭಕ್ತರು ಭಾಗಿ, ಗ್ರಾಮದಲ್ಲಿ ಮೆರವಣಿಗೆ, ಭಕ್ತರಿಂದ ಪೂಜೆ ಸಲ್ಲಿಕೆ, ಪ್ರಸಾದ ವಿತರಣೆ



ಮೂಗೂರು: ಮೂಗೂರಿನ ಐತಿಹಾಸಿಕ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗ ವಾಗಿ ಕಡೆಯ ದಿನವಾದ ಬುಧವಾರ ವೈಮಾಳಿಗೆ ಉತ್ಸವ ವೈಭವದಿಂದ ಸಹಸ್ರಾರು ಗ್ರಾಮಸ್ಥರ ಸಮ್ಮುಖದಲ್ಲಿ ನಡೆಯಿತು

ಚಿಗುರು ಕಡಿಯುವ ಕಾರ್ಯಕ್ರಮದ ಮಾರನೇ ದಿನ ಅಮ್ಮನವರಿಗೆ ದೇಗುಲದಲ್ಲಿ ವಿಶೇಷವಾಗಿ ಹೂವಿನ ಅಲಂಕಾರದೊಂದಿಗೆ ಬೆಳಗಿನ ಜಾವ ಅಭಿಷೇಕ, ವಿಶೇಷ ಪೂಜೆಗಳು ನಡೆದವು. ಜಾತ್ರೆ, ಧಾರ್ಮಿಕ ಆಚರಣೆಯಲ್ಲಿ ಸಂತೃಪ್ತಿ ಹೊಂದಿದ ಅಮ್ಮನವರನ್ನು, ರಾಜಗೋಪುರದ ಎದುರಿನ ಮಂಟಪದಲ್ಲಿ ಉಯ್ಯಾಲೆಯಲ್ಲಿದ್ದ ವೇಳೆ ಮಹಿಳೆಯರು ಅಮ್ಮನವರ ದರ್ಶನ ಪಡೆದು ನಮಿಸಿದರು. ಬಳಿಕ ಗ್ರಾಮದ ಬಂಡಿ ಬೀದಿಯ ನಿವಾಸಿ ಬಸಣ್ಣ ಸುಕಂದಮ್ಮರವರು ಪ್ರತಿ ವರ್ಷದಂತೆ ಈ ಬಾರಿಯೂ ಆಳು ಪಲ್ಲಕ್ಕಿ ಉತ್ಸವದ ಸೇವಾರ್ಥದಾರರಾಗಿ ಧಾರ್ಮಿಕ ಕಾರ್ಯ ನೇರವೇರಿಸಿದರು.

ಬೆಳಿಗ್ಗೆ 11 ಗಂಟೆಗೆ ವಿವಿಧ ಹೂವಿನಿಂದ ಅಲಂಕೃತಗೊಂಡ ಪಲ್ಲಕ್ಕಿಯಲ್ಲಿ ಅಮ್ಮನವರನ್ನು ಕೂರಿಸಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ತಮಟೆ, ವಾದ್ಯ ಗೋಷ್ಠಿ, ಗೊರವನ ಕುಣಿತದೊಂದಿಗೆ ಉತ್ಸವ ಸಾಗಿತು. ದಾರಿಯುದ್ದಕ್ಕೂ ಅಮ್ಮನವರಿಗೆ ಸ್ಥಳೀಯರು ಬೆಲ್ಲದಾರತಿ, ಪೂಜೆ ಸಲ್ಲಿಸಿ ಅಲ್ಲಲ್ಲಿ ಸಿಹಿ ವಿತರಿಸಿದರು. ಜಾತ್ರೆಯ ವೈಮಾಳಿಗೆ ದಿನ ಗ್ರಾಮಸ್ಥರು ಗ್ರಾಮ ಹಾಗೂ ಕುಟುಂಬಸ್ಥರ ಒಳಿತಿಗಾಗಿ ಅಲ್ಲಲ್ಲಿ ಫಲಾಮೃತ ಪೂಜೆ, ಸಲ್ಲಿಸಿ ಭಕ್ತಿಯಿಂದ ನಮಿಸಿದರು.

ದೇವಾಲಯದ ಬಳಿ ಆಗಮಿಸುತ್ತಿದ್ದಂತೆ ಉತ್ಸವದ ಸೇವಾರ್ಥದಾರರು ಪ್ರಸಾದ ವಿತರಿಸಿದರು. ನಂತರ ಅಮ್ಮನವರ ಉತ್ಸವ ಮೂರ್ತಿಯನ್ನು ದೇಗುಲಕ್ಕೆ ಕೊಂಡೊಯ್ದರು.

ಮಧ್ಯಾಹ್ನ 3.30ರಲ್ಲಿ ಅಮ್ಮನವರ ಉತ್ಸವ ಮೂರ್ತಿಗೆ ವಿವಿಧ ಬಗೆಯ ಹೂವಿನಿಂದ ವಿಶೇಷ ಅಲಂಕಾರದೊಂದಿಗೆ ದೇಗುಲದ ಸುತ್ತ 12 ಸುತ್ತು ಪ್ರದಕ್ಷಿಣೆಯೊಂದಿಗೆ ಉತ್ಸವ ಸಾಗಿತು. ಜಾತ್ರೆಯ ಕಡೆಯ ದಿನ ಗ್ರಾಮದಲ್ಲಿನ ಎಲ್ಲಾ ಸ್ತ್ರೀಯರು ತಮ್ಮ ಕುಟುಂಬಸ್ಥರ ಜೊತೆಗೂಡಿ ದೇಗುಲದ ಆವರಣದಲ್ಲಿ ಜಮಾಯಿಸಿದ್ದರು.

ಅಸಂಖ್ಯಾತ ಭಕ್ತರು ಇಷ್ಟಾರ್ಥ ಈಡೇರಲೆಂದು ವೀಳ್ಯದೆಲೆ, ಹೂ, ಹಣ್ಣನ್ನು ಅಮ್ಮನವರಿಗೆ ಅರ್ಪಿಸಿ ಧನ್ಯತೆ ಮೆರೆದರು. ವೈಮಾಳಿಗೆಯ ಕೊನೆಯ ಸುತ್ತಿನಲ್ಲಿ ಅಮ್ಮನವರ ಅನುಗ್ರಹ ದೊರೆಯುವಂತೆ ಅರ್ಚಕರು ಪಂಚ ಪತ್ರ ಪುಷ್ಪಾರ್ಚನೆ ಮಾಡಿದರು. ದೇವಾಲಯದಲ್ಲಿ ನೆರೆದಿದ್ದ ಜನತೆ ವೈಮಾಳಿಗ ಉತ್ಸವದ ವೇಳೆ ದಕ್ಷಿಣ ದ್ವಾರದ ಮೂಲಕ ಅಮ್ಮನವರು ಒಳಪ್ರವೇಶಿಸುವಾಗ ಈಡುಗಾಯಿ ಸುರಿಮಳೆಗೈದು ಝೇಂಕಾರ ಮೊಳಗಿಸಿ ವೈಮಾಳಿಗೆ ಉತ್ಸವದ ವೈಭವವನ್ನು ಕಣ್ತುಂಬಿಕೊಂಡರು. ರಾತ್ರಿ ದೇಗುಲದಲ್ಲಿ ಅಮ್ಮನವರಿಗೆ ಪೂರ್ಣಾಭಿಷೇಕ ಹಾಗೂ ವಿಶೇಷ ಪೂಜೆಗೆ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಹಾಗೂ ಕುಟುಂಬ ವರ್ಗದವರು ಭಾಗವಹಿಸಿದ್ದರು.

ಗ್ರಾಮಸ್ಥರ ಸಮ್ಮುಖದಲ್ಲಿ ಮಹಾ ಮಂಗಳಾರತಿ ನೆರವೇರಿಸಿದರು. ವೈಭವದ ವೈಯಾರದ ವೈಮಾಳಿಗೆ ಉತ್ಸವದೊಂದಿಗೆ ಮೂಗೂರು ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತು.

ಜಯಮ್ಮ ನಿಧನ



ತಿ.ನರಸೀಪುರ, ಜ.7– ತಾಲೂಕಿನ ಕೆಬ್ಬೆಹುಂಡಿ ಗ್ರಾಮದ ನಿವೃತ್ತ ಸರ್ವರ್ ನಾಗೇಶ್‌ಗೌಡ ಅವರ ಪತ್ನಿ ಜಯಮ್ಮ(60) ಇಂದು ಸಂಜೆ ಹೃದಯಘಾತದಿಂದ ನಿಧನರಾದರು. ಮೃತರು ಕಾಂಗ್ರೆಸ್ ಮುಖಂಡ ಜಯರಾಮು ಸೇರಿದಂತೆ ಇಬ್ಬರು ಪುತ್ರರನ್ನು ಆಗಲಿದ್ದಾರೆ. ಅಂತ್ಯಕ್ರಿಯೆಯನ್ನು ಗುರುವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಕೆಬ್ಬೆ ಹುಂಡಿಯಲ್ಲಿ ನರವೇರಿಸಲಾಗುವುದೆಂದು ಕುಟುಂಬದ ಮೂಲಗಳು ತಿಳಿಸಿವೆ. ಇತ್ತೀಚೆಗೆ ಇವರ ಅಣ್ಣ ಪಟ್ಟಣ ಪಂಚಾಯತಿಯ ಮಾಜಿ ಅಧ್ಯಕ್ಷ ಬಸವಣ್ಣ ನಿಧನರಾಗಿದ್ದನ್ನು ಸ್ಮರಿಸಬಹುದು.

ಮೈಸೂರು ಮಿತ್ರ

ಮೈಸೂರು ವಿಮಾನ ನಿಲ್ದಾಣದಲ್ಲಿ ಹುಲಿಗಾಗಿ ಮುಂದುವರೆದ ಡ್ರೋನ್ ಕಾರ್ಯಾಚರಣೆ

● ಇಲವಾಲದ ಅಲೋಕದಲ್ಲಿ ಬೀಡುಬಿಟ್ಟ ದಸರಾ ಗಜಪಡೆ ● ಅರಣ್ಯ ಇಲಾಖೆಗೆ ತಲೆ ನೋವಾದ ಹುಲಿ ಬಂತು ಹುಲಿ!



ಮಂಡಕಳ್ಳಿ ವಿಮಾನ ನಿಲ್ದಾಣದ ಆವರಣದಲ್ಲಿ ಡ್ರೋನ್ ಮೂಲಕ ಪರಿಶೀಲನೆ ನಡೆಸುತ್ತಿರುವ ಕೂಂಬಿಂಗ್ ತಂಡ.

ಮೈಸೂರು, ಜ.7(ಎಂಟಿವೈ)– ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಂಡಿದ್ದ ಹುಲಿಗಾಗಿ ಎರಡು ದಿನದಿಂದ ನಡೆದ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಹುಲಿ ಪತ್ತೆಯಾಗದಿರುವುದು ಅರಣ್ಯ ಇಲಾಖೆಗೆ ತೀವ್ರ ತಲೆ ನೋವಾಗಿದೆ. ಅತ್ತ ಕೂಂಬಿಂಗ್ ಕಾರ್ಯಾಚರಣೆಗಾಗಿ ಕರೆಸಿರುವ ದಸರಾ ಗಜಪಡೆಯ ನಾಲ್ಕು ಆನೆಗಳು ಇಲವಾಲದ ಆಲೋಕದಲ್ಲಿ ಬೀಡುಬಿಟ್ಟಿವೆ.

ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಜ.5ರಂದು ಬೆಳಗ್ಗೆ 6 ಗಂಟೆಯಲ್ಲಿ ವಿಮಾನ ನಿಲ್ದಾಣದ ಹಿಂಭಾಗದ ಸರ್ವಿಸ್ ರಸ್ತೆಯಲ್ಲಿ ವಿಹರಿಸುತ್ತಿದ್ದ ಹುಲಿ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಹಿನ್ನೆಲೆಯಲ್ಲಿ ಅಂದು ದಿನವಿಡೀ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಎಲ್‌ಟಿಎಫ್, ಇಟಿಎಫ್ ಸಿಬ್ಬಂದಿ ಸೇರಿದಂತೆ 100ಕ್ಕೂ ಹೆಚ್ಚು ಮಂದಿ, ವಿಮಾನ ನಿಲ್ದಾಣದ ಆವರಣದಲ್ಲಿ ಶೋಧ ನಡೆಸಿದ್ದರು. ಅಲ್ಲದೆ, ಡ್ರೋನ್ ಹಾಗೂ ಥರ್ಮಲ್ ಡ್ರೋನ್‌ನಿಂದ ಹಗಲು, ರಾತ್ರಿ ಪರಿಶೀಲನೆ ನಡೆಸಿದರೂ, ಕಾಡಂದಿ ಹೊರತುಪಡಿಸಿ, ಹುಲಿ ಸುಳಿವಿಲ್ಲ!

ಆದರೂ ಮುಂಜಾಗ್ರತಾ ಕ್ರಮವಾಗಿ ದುಬಾರೆ ಕ್ಯಾಂಪ್‌ನಿಂದ ಪ್ರಶಾಂತ, ಹರ್ಷ, ಸುಗ್ರೀವ ಹಾಗೂ ಕಂಜನ್ ಆನೆಗಳ ಕರೆಸಲಾಗಿದ್ದು, ಇವುಗಳು ಇಲವಾಲದ ಅಲೋಕದಲ್ಲಿ ಬೀಡುಬಿಟ್ಟಿವೆ. ವಿಮಾನ ನಿಲ್ದಾಣದಲ್ಲಿ ಡ್ರೋನ್‌ನಲ್ಲಿ ಇಲ್ಲವೆ ಸಿಸಿ ಕ್ಯಾಮರಾದಲ್ಲಿ ಮತ್ತೆ ಹುಲಿ ಸುಳಿವು ಸಿಕ್ಕರೆ ಕೂಡಲೇ ಅಲೋಕದಲ್ಲಿರುವ ಆನೆಗಳನ್ನು ಕರೆಸಿ ಸೆರೆ ಹಿಡಿಯುವ ಪ್ರಕ್ರಿಯೆ ಮುಂದುವರೆಸಲಾಗುತ್ತದೆ.

ವರ್ಷದಿಂದ ಇಲ್ಲೇ ಸುತ್ತಾಡುತ್ತಿರುವ ಶಂಕೆ!

ವಿಮಾನ ನಿಲ್ದಾಣದ ಆವರಣದಲ್ಲಿ ಪ್ರತ್ಯಕ್ಷವಾಗಿರುವ ಹುಲಿಗೆ ಮೂರು ವರ್ಷವಾಗಿರಬಹುದು ಎಂದು ಅಂದಾಜಿಸಲಾಗಿದೆ. 2023ರ ಡಿಸೆಂಬರ್ ಹಾಗೂ 2024ರ ಜನವರಿ ತಿಂಗಳಲ್ಲಿ ಕಡಕೊಳ, ಟಿವಿಎಸ್ ಫ್ಯಾಕ್ಟರಿ, ದೊಡ್ಡಕಾನ್ಯ, ಚಿಕ್ಕಕಾನ್ಯ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ತಾಯಿಂಯೊಂದಿಗೆ ಓಡಾಡುತ್ತಿದ್ದ ಮೂರು ಮರಿಗಳಲ್ಲಿ ಒಂದು ಮರಿ 2024ರ ಜ.28ರಂದು ಮಧ್ಯರಾತ್ರಿ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಕಾರು ಡಿಕ್ಕಿ ಹೊಡೆದು ಮೃತಪಟ್ಟಿತ್ತು. ಅವುಗಳಲ್ಲಿನ ಒಂದು ಮರಿ ಈಗ ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ವಿಮಾನ ನಿಲ್ದಾಣದ ಆವರಣದಲ್ಲಿ ಕಾಡುಹಂದಿಯನ್ನು ಬೇಟೆಯಾಡಿ ನೆಲೆ ಕಂಡುಕೊಂಡಿರಬಹುದು ಎಂದು ಹೇಳಲಾಗುತ್ತಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಅಖಂಡ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	3 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಅರಣ್ಯ ನಾಶದಿಂದ ರೈತರಿಗೆ ಸಂಕಷ್ಟ ಖಚಿತ

● ನಿವೃತ್ತ ಅರಣ್ಯ ಇಲಾಖೆ ಕಾರ್ಯದರ್ಶಿ ಎ.ಸಿ.ಲಕ್ಷ್ಮಣ ಎಚ್ಚರಿಕೆ
● ದಕ್ಷ ಇಬ್ಬರು ಮಹಿಳಾ ಅರಣ್ಯಾಧಿಕಾರಿಗಳಿಗೆ ಸನ್ಮಾನ



ಮೈಸೂರಿನ ರೇಸ್‌ಕ್ಲಬ್‌ನಲ್ಲಿ ನಿವೃತ್ತ ಅರಣ್ಯಾಧಿಕಾರಿಗಳ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ ಹಾಗೂ ಕೋಲಾರದ ಡಿಸಿಎಫ್ ಸರೀನಾ ಸಿಕ್ಕಲಿಗಾರ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜ.7(ಎಂಟಿವೈ)– ಅರಣ್ಯ ಹಾಗೂ ಪರಿಸರ ನಾಶದಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು, ಅದನ್ನು ತಡೆಗಟ್ಟಲು ಯೋಜನೆ ರೂಪಿಸಿ ಜಾರಿಗೊಳಿಸಬೇಕಾಗಿದೆ ಎಂದು ಅರಣ್ಯ ಇಲಾಖೆ ನಿವೃತ್ತ ಕಾರ್ಯದರ್ಶಿ ಎ.ಸಿ.ಲಕ್ಷ್ಮಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರೇಸ್‌ಕ್ಲಬ್‌ನಲ್ಲಿ ನಿವೃತ್ತ ಅರಣ್ಯಾಧಿಕಾರಿಗಳ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿರುವ ಇಬ್ಬರು ಮಹಿಳಾ ಐಎಫ್‌ಎಸ್ ಅಧಿಕಾರಿಗಳಾದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ ಹಾಗೂ ಕೋಲಾರದ ಡಿಸಿಎಫ್ ಸರೀನಾ ಸಿಕ್ಕಲಿಗಾರ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಅರಣ್ಯ ನಾಶದ ಪರಿಣಾಮವನ್ನು ನಾವು ವನ್ಯಜೀವಿ ಹಾಗೂ ಮಾನವ ಸಂಘರ್ಷದ ರೂಪದಲ್ಲಿ ನೋಡುತ್ತಿದ್ದೇವೆ. ಅರಣ್ಯ ಹರಿದು ಹಂಚಿ ಹೋಗಿ ಸಂಘರ್ಷ ಪರಾಕಾಷ್ಠತೆಯನ್ನು ತಲುಪಿ ಜನ ತೊಂದರೆ ಅನುಭವಿಸುವಂತಾಗಿದೆ. ಇದಕ್ಕೆಲ್ಲಾ ಪರಿಹಾರ ಕಂಡುಕೊಂಡರೆ ಮಾತ್ರ ಅರಣ್ಯ, ವನ್ಯಜೀವಿಗಳು ಉಳಿದು ನಾಡು ರಕ್ಷಣೆಯಾಗಲಿದೆ. ಜನ ನೆಮ್ಮದಿಯಿಂದ ಇರಬೇಕೆಂದರೆ ಅರಣ್ಯ ಸಂರಕ್ಷಣೆ ಅತೀ ಮುಖ್ಯ. ವಿಜ್ಞಾನಿಗಳು, ಅರಣ್ಯ ಸಂರಕ್ಷಕರು, ಆಡಳಿತಗಾರರು ಇದಕ್ಕಾಗಿ ಸಹಭಾಗಿತ್ವ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು.

ಅರಣ್ಯ ಇಲಾಖೆಯಲ್ಲಿ ಹಲವು ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಸಿಬ್ಬಂದಿಗಳೂ ಕೈಜೋಡಿಸಿ ಕೆಲಸ ಮಾಡಿದ್ದರಿಂದಲೇ ದೇಶದಲ್ಲಿ ಕರ್ನಾಟಕದ ಅರಣ್ಯಕ್ಕೆ ತನ್ನದೇ ಆದ ಮಹತ್ವವಿದೆ. ಈಗಿನ ತಲೆಮಾರಿನ ಹಲವು ಅಧಿಕಾರಿಗಳು ಅದೇ ರೀತಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಎಂತಹ ಒತ್ತಡ ಬಂದರೂ ಸಂಯಮ, ಸಮಚಿತ್ತತೆ, ಸ್ನೇಹಮಯವಾಗಿ ಕೆಲಸ ಮಾಡುವುದು. ಮುಂದಾಳತ್ವ ವಹಿಸುವುದು ಅತಿಮುಖ್ಯ. ಇದಕ್ಕೆ ಈ ಇಬ್ಬರನ್ನು ಆತ್ಮೀಯವಾಗಿ ಸನ್ಮಾನಿಸಲಾಗಿದೆ ಎಂದರು.

ಅರಣ್ಯ ಇಲಾಖೆಯಲ್ಲಿ ಹಲವು ವರ್ಷ ಕೆಲಸ ಮಾಡಿದ ಚಂಗಪ್ಪ ಅವರು ಈಗಲೂ ಸೇವಾಪರತೆಯನ್ನು ಮುಂದುವರೆಸಿದ್ದಾರೆ. ಮೈಸೂರು ರೇಸ್‌ಕ್ಲಬ್‌ನ ಸ್ಟೀವರ್ಡ್ ಆಗಿ ಆಯ್ಕೆಯಾಗಿರುವುದು ಸಂತಸದ ವಿಚಾರ ಎಂದು ಹೇಳಿದರು.

ದಕ್ಷ ಅಧಿಕಾರಿಗಳು: ಸದ್ಯ ಹಿಂದೆ ವಿಜಯಪುರ, ಬೆಂಗಳೂರು ನಂತರ ಈಗ ಕೋಲಾರದಲ್ಲಿ ಡಿಸಿಎಫ್ ಆಗಿ ಅರಣ್ಯ ಒತ್ತುವರಿ ತೆರವು ಮಾಡಲು ಶ್ರಮ ಹಾಕುತ್ತಿರುವ ಸರೀನಾ ಸಿಕ್ಕಲಿಗಾರ, ಕೊಡಗು, ಮಂಡ್ಯ, ಹುಣಸೂರು ನಂತರ ಈಗ ನಾಗರಹೊಳೆ ಹುಲಿ ಯೋಜನೆ ನಿರ್ದೇಶಕರಾಗಿ ಸಂರಕ್ಷಣೆ ಜತೆಗೆ ಗಿರಿಜನರ ಹಿತರಕ್ಷಣೆಗೆ ಒತ್ತು ನೀಡುತ್ತಿರುವ ಪಿ.ಎ.ಸೀಮಾ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಅರಣ್ಯಾಧಿಕಾರಿಗಳಾದ ಎಂ.ಕೆ.ಅಪ್ಪಯ್ಯ, ಟಿ..ಬಾಲಚಂದ್ರ, ರಾಜಾಲಕ್ಕಿ, ಎಚ್.ಸಿ.ಕಾಂತರಾಜು, ಶ್ರೀಧರ್, ರಾಮಲಿಂಗೇಗೌಡ, ನಾಗರಾಜ ಆಚಾರ್ ಇನ್ನಿತರರು ಉಪಸ್ಥಿತರಿದ್ದರು.

ವಿಮಾನ ನಿಲ್ದಾಣದಿಂದ ಹುಲಿ ಪರಾರಿ

ಮಂಡಕಳ್ಳಿ ವಿಮಾನ ನಿಲ್ದಾಣದ ಆವರಣದಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿದ್ದು, ಹುಲಿ ಪತ್ತೆಯಾಗಿಲ್ಲ. ವಿಮಾನ ನಿಲ್ದಾಣದ ಹಿಂಭಾಗದ ಕಾಂಪೌಂಡ್ ಗೋಡೆ ಹಾರಿ ಹುಲಿ ಪರಾರಿಯಾಗಿರುವ ಶಂಕೆ ವ್ಯಕ್ತವಾಗಿದೆ. ಕಾಂಪೌಂಡ್ ಮೇಲೆ ಅಳವಡಿಸಿರುವ ತಂತಿಯಲ್ಲಿ ಹುಲಿಯ ಕೂದಲು ಹಾಗೂ ರಕ್ತ ಅಂಟಿಕೊಂಡಿದ್ದು, ಅದು ಹುಲಿಯದ್ದೇ ಎಂದು ಪಶುವೈದ್ಯರು ಖಚಿತಪಡಿಸಿದ್ದಾರೆ. ಅಲ್ಲದೆ, ವಿಮಾನ ನಿಲ್ದಾಣದಿಂದ 1.50 ಕಿ.ಮಿ ದೂರದ ಜಮೀನೊಂದರಲ್ಲಿ ಹುಲಿ ಹೆಜ್ಜೆ ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಹೆಜ್ಜೆ ಗುರುತು ಪತ್ತೆಯಾದ ಸ್ಥಳ, ಟಿವಿಎಸ್ ಫ್ಯಾಕ್ಟರಿ ಸುತ್ತಮುತ್ತ ಥರ್ಮಲ್ ಡ್ರೋನ್ ಬಳಸಿ ಪರಿಶೀಲಿಸಲಾಗಿದೆ. ಆದರೆ, ಹುಲಿ ಸುಳಿವಿಲ್ಲ. ಆದರೂ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ರಾತ್ರಿ ವೇಳೆ ಎಚ್ಚರವಾಗಿರಬೇಕಿದೆ.

– ಕೆ.ಪರಮೇಶ್, ಡಿಸಿಎಫ್

ನಾಳೆ ಕೃಷಿ ವಿಜ್ಞಾನಿ ಡಾ. ವಸಂತ ಕುಮಾರ್ ತಿಮಕಾಪುರ ರಚಿತ ಕೃತಿ ಬಿಡುಗಡೆ

ವಸಂತೋತ್ಸವ ಅಭಿನಂದನಾ ಸಮಾರಂಭ



ತಿಮಕಾಪುರ

ಮೈಸೂರು, ಜ.7(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಜ.9ರಂದು ಸಂಜೆ 4 ಗಂಟೆಗೆ ಕೃಷಿ ವಿಜ್ಞಾನಿ ಡಾ.ವಸಂತ ಕುಮಾರ್ ತಿಮಕಾಪುರ ರಚಿತ ಕೃತಿ ಬಿಡುಗಡೆ ಹಾಗೂ 'ವಸಂತೋತ್ಸವ' ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಅಭಿನಂದನಾ ಸಮಿತಿ ಅಧ್ಯಕ್ಷೆ ಪ್ರೊ.ಹೆಚ್.ಎಂ.ವಸಂತಮ್ಮ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ವಸಂತ ಕುಮಾರ್ ತಿಮಕಾಪುರ ಅಭಿನಂದನಾ ಸಮಿತಿ ಹಾಗೂ ವಿಸ್ಮಯ ಬುಕ್ ಹೌಸ್ ವತಿಯಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ನಿಶ್ಚಲಾನಂದ ಸ್ವಾಮೀಜಿ ವಹಿಸಲಿದ್ದಾರೆ. ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಹೈದರಾಬಾದ್‌ನ ಇಕ್ರಿಸ್ಯಾಟ್‌ನ ನಿವೃತ್ತ ಉಪ ಮಹಾನಿರ್ದೇಶಕ ಡಾ.ಸಿ.ಎಲ್.ಲಕ್ಷ್ಮಿಪತಿ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ 'ವಸಂತ ವಿಹಾರ' ಕೃತಿಯನ್ನು ಬಿಡುಗಡೆ ಮಾಡಲಿದ್ದಾರೆ. ಕೃತಿ ಕುರಿತು ನಿವೃತ್ತ ಪ್ರಾಧ್ಯಾಪಕ ಡಾ.ಸಿ. ನಾಗಣ್ಣ ಮಾತನಾಡುವರು. 'ಪ್ಲಾಂಟ್ ಡಾಕ್ಟರ್' ಕೃತಿಯನ್ನು ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎ.ಹೆಚ್. ರಾಜಾಸಾಬ್ ಬಿಡುಗಡೆಗೊಳಿಸುವರು. ಪ್ರಾಧ್ಯಾಪಕ ಪ್ರೊ.ಎಸ್.ಉಮೇಶ್ ಅವರು ಕೃತಿ ಕುರಿತು ಮಾತನಾಡಲಿದ್ದಾರೆ. ವಿಶೇಷ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎನ್. ನಾಗರಾಜ, ಲೇಖಕ ಆರ್.ರಘು ಕೌಟಿಲ್ಯ ಆಗಮಿಸುವರು. ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ, ವಿಸ್ಮಯ ಬುಕ್ ಹೌಸ್‌ನ ಪ್ರಕಾಶ್ ಚಿಕ್ಕಪಾಳ್ಯ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಅಭಿನಂದನಾ ಸಮಿತಿ ಖಜಾಂಚಿ ಸ್ವಾಮಿನಾಥನ್, ಸದಸ್ಯರಾದ ವಸಂತ್ ಕುಮಾರ್, ಸೋಮಶೇಖರ್, ಉಮೇಶ್, ಹರೀಶ್, ಪ್ರಸಾದ್ ಇದ್ದರು.

ರಾಕೇಶ್ ಸಿದ್ದರಾಮಯ್ಯ ಅಭಿಮಾನಿಗಳ ಬಳಗದಿಂದ ಸಂಭ್ರಮಾಚರಣೆ



ಸಿದ್ದರಾಮಯ್ಯ ಅವರು ಸುದೀರ್ಘ ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ಮೈಸೂರಿನ ದಿ.ರಾಕೇಶ್ ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಆಶ್ರಯದಲ್ಲಿ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸುವ ಮೂಲಕ ಸಂಭ್ರಮಾಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ ಸೋಮಶೇಖರ್, ಬಳಗದ ರಾಜ್ಯ ಅಧ್ಯಕ್ಷ ವಿಶ್ವನಾಥ್ (ವಿಶ್ವ), ಉದ್ಯಮಿ ಸುಪ್ರಿಯ ಮಹದೇವ, ಕೃಷ್ಣದೇವರಾಯ ಕನ್ನಡ ಸಂಘದ ಅಧ್ಯಕ್ಷ ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಜೋಗಿ ಮಹೇಶ್, ಪಟಾಕಿ ಮಂಜುನಾಥ್, ಉತ್ತನಹಳ್ಳಿ ಶಿವಣ್ಣ, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹಮದ್ ಫಾರೂಕ್, ನಾಗಣ್ಣ, ಸೋಮಶೇಖರ್, ಮಾದೇವ, ರಮೇಶ, ಮೊಟ್ಟೆ ಮಂಜು, ಪೈಲ್ವಾನ್ ಯಶವಂತ್ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ರಿಷಿ ವಿಶ್ವಕರ್ಮ ಹಾಗೂ ಸಹಕಾರ ಸಂಘದ ಅಧ್ಯಕ್ಷ ಜಯರಾಮಾಚಾರ್ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಮೈಸೂರು, ಜ.7(ಎಂಟಿವೈ)– ಮೈಸೂರಿನ ವಿಶ್ವಕರ್ಮ ಪತ್ತಿನ ಸಹಕಾರ ಸಂಘ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಇಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆಯಿತು.


ಕಾರ್ಯಕ್ರಮದಲ್ಲಿ ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ರಿಷಿ ವಿಶ್ವಕರ್ಮ ಹಾಗೂ ಸಹಕಾರ ಸಂಘದ ಅಧ್ಯಕ್ಷ ಜಯರಾಮಾಚಾರ್ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಜಿಲ್ಲಾ ವಿಶ್ವಕರ್ಮ ಸಹಕಾರ ಸಂಘದ ಅಧ್ಯಕ್ಷ ಜಯರಾಮಾಚಾರ್ ಮಾತನಾಡಿ, ವಿಶ್ವಕರ್ಮ ಸಹಕಾರ ಸಂಘ ಕಳೆದ 22 ವರ್ಷಗಳಿಂದ ಜನಾಂಗದ ಒಳಿತಿಗೆ ನಾನಾ ಕಾರ್ಯಕ್ರಮ ಹಮ್ಮಿಕೊಂಡಿದೆ. ಈಗ ಸದಸ್ಯತ್ವ ಅಭಿಯಾನ ಹಮ್ಮಿಕೊಂಡಿದ್ದು, ಮೈಸೂರು ತಾಲೂಕು ಹಾಗೂ ನಗರದಲ್ಲಿ ವಾಸವಿರುವ ವಿಶ್ವಕರ್ಮ ಸಮುದಾಯದವರು, ಸಂಘ–ಸಂಸ್ಥೆ ಸದಸ್ಯರು ಹಾಗೂ ಸಮುದಾಯದ ಮುಖಂಡರು ಸದಸ್ಯತ್ವ ನೋಂದಣಿ ಮಾಡಲು ಕೋರಿದರು.

ಈ ಮೂಲಕ ಯಶಸ್ವಿನಿ ಆರೋಗ್ಯ ಯೋಜನೆ, ಪಿಗ್ಮಿ ಖಾತೆ, ಉಳಿತಾಯ ಖಾತೆ, ಎಫ್‌ಡಿ ಅನುಕೂಲ ಪಡೆಯಬಹುದಾಗಿದೆ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕೆ.ಪಿ.ಶ್ರೀಕಾಂತ್ ಆಚಾರ್, ರಿಷಿ ವಿಶ್ವಕರ್ಮ, ಪಿ.ಬಸವರಾಜು, ಆರ್. ಮಂಜುನಾಥ್, ಎ.ಎನ್.ನರಸಿಂಹಾಚಾರ್, ಪಿ.ಬಸವರಾಜು, ಟಿಂಬರ್ ನಾಗರಾಜು, ಲೋಹಿತೇಶಾಚಾರ್, ಪಿ.ಸಿದ್ದಾಚಾರ್ ಇದ್ದರು.

ಬಿವಿಬಿ ಶಾಲೆಯಲ್ಲಿ ಭಗವದ್ಗೀತೆ ತರಗತಿ



ಮೈಸೂರು, ಜ.7(ಎಂಟಿವೈ)– ಮೈಸೂರಿನ ವಿಜಯನಗರ ಮೊದಲನೇ ಹಂತದ ವೇದಶ್ರೀ ಫೌಂಡೇಶನ್ ವತಿಯಿಂದ ವಿಜಯನಗರದ ಭಾರತೀಯ ವಿದ್ಯಾ ಭವನ (ಬಿವಿಬಿ) ಶಾಲೆಯಲ್ಲಿ 7ರಿಂದ 13 ವರ್ಷದ ಮಕ್ಕಳಿಗಾಗಿ ಪ್ರತಿ ಗುರುವಾರ ಸಂಜೆ 4.30ರಿಂದ 6ರವರೆಗೆ ಭಗವದ್ಗೀತೆ ತರಗತಿ ಆಯೋಜಿಸಲಾಗುತ್ತಿದೆ ಎಂದು ಫೌಂಡೇಷನ್‌ನ ವಿಕಾಸ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಮೌಲ್ಯಾಧಾರಿತ ವಿಷಯ ತಿಳಿಸಿ, ಭವಿಷ್ಯದ ಜವಾಬ್ದಾರಿಯುತ ನಾಗರಿಕರನ್ನಾಗಿಸುವ ಉದ್ದೇಶದಿಂದ ಭಗವದ್ಗೀತೆ ತರಗತಿ ನಡೆಸಲಾಗುತ್ತಿದೆ. ಈ ತರಗತಿಯಲ್ಲಿ ಭಗವದ್ಗೀತೆ ಆಧಾರಿತ ಕ್ರೀಡೆ, ಗುಂಪು ಚಟುವಟಿಕೆ, ಕಥೆ ಇನ್ನಿತರ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗುವುದು. ಜ.8ರಂದು ಸಂಜೆ 7ಕ್ಕೆ ಉದ್ಘಾಟನೆ ನಡೆಯಲಿದೆ. ಮಾಹಿತಿಗೆ ಮೊ.ಸಂ.82176 41068 ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಲೋಹಿತ್ ಇದ್ದರು.

ಭುಗತಗಳ್ಳಿಯಲ್ಲಿ ಸಿಎಂ ಸಿದ್ದರಾಮಯ್ಯನವರ ಸಾಧನೆ ಸಂಭ್ರಮೋತ್ಸವ



ಭುಗತಗಳ್ಳಿ ಗ್ರಾಮದಲ್ಲಿ ಸಿದ್ದರಾಮಯ್ಯನವರ ಆಡಳಿತಾವಧಿ ದಾಖಲೆ ಸಂಭ್ರಮೋತ್ಸವ

ಸುತ್ತೂರು, ಜ. 7– ವರುಣಾ ಕ್ಷೇತ್ರದ ಭುಗತಗಳ್ಳಿ ಗ್ರಾಮದಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಸಾಧಿಸಿದ ಸಾಧನೆಯ ವಿಜಯೋತ್ಸವವನ್ನು ಗ್ರಾಮದ ಶ್ರೀ ಬೇತಾಳೇಶ್ವರಿ ಅಮ್ಮನವರ ದೇವಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.


ಇದೇ ವೇಳೆ ಕಾಂಗ್ರೆಸ್ ಪಕ್ಷದ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಬಿ.ಜೆ. ವಿಜಯ್ ಕುಮಾರ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ ನಂತರ ಸಿದ್ದರಾಮಯ್ಯನವರು ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ಜನ ಮಾನಸದಲ್ಲಿ ನೆಲೆಸಿದ್ದಾರೆ. ಅವರ ಸರ್ಕಾರದ ಅವಧಿಯಲ್ಲಿ ಅನ್ನಭಾಗ್ಯ, ಕ್ಷೀರಭಾಗ್ಯ, ಪಂಚ ಗ್ಯಾರಂಟಿ ಯೋಜನೆ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಬಡ ಜನತೆಗೆ ಅನುಕೂಲ ಮಾಡಿಕೊಟ್ಟು ಸಾಮಾಜಿಕ ನ್ಯಾಯದಡಿ ಎಲ್ಲ ವರ್ಗದವರಿಗೆ ಸಮಾನತೆಯ ಸಿಹಿಯನ್ನು ನೀಡಿದಂತಹ ಧೀಮಂತ ರಾಜಕಾರಣಿ ಹಾಗೂ ವರುಣಾ ಕ್ಷೇತ್ರದ ವರಪುತ್ರ ಎಂದು ಬಣ್ಣಿಸಿದರಲ್ಲದೇ ಇಡೀ ಭಾರತ ದೇಶದಲ್ಲಿ ಉತ್ತರ ಭಾರತದಲ್ಲಿ ಜ್ಯೋತಿ ಬಸು ಹಾಗೂ ದಕ್ಷಿಣ ಭಾರತದಲ್ಲಿ ಸಿದ್ದರಾಮಯ್ಯರವರು ಭ್ರಷ್ಟಾಚಾರ ರಹಿತ ಮುಖ್ಯಮಂತ್ರಿಯಾಗಿ ಅಪಾರ ಜನ ಮನ್ನಣೆಗಳಿಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವರುಣಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಭುಗತಗಳ್ಳಿ ಮಣಿಯಯ್ಯ ಮಾತನಾಡಿ, ಅತೀ ಹೆಚ್ಚು ಆಡಳಿತಾವಧಿ ದಾಖಲೆ ಬರೆದಿದ್ದ ಡಿ.ದೇವರಾಜ ಅರಸುರವರ ಅವಧಿಗೂ ಮೀರಿ ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಾ ಎಲ್ಲಾ ವರ್ಗದ ಬಡ ಜನರ ಏಳಿಗೆಗಾಗಿ ಶ್ರಮಿಸುವ ಮೂಲಕ ಮಾದರಿ ಮುಖ್ಯಮಂತ್ರಿಯಾಗಿದ್ದಾರೆ. ಹಾಗೆ ಮುಂದಿನ 2028ರ ಚುನಾವಣೆಯಲ್ಲೂ ಸಿದ್ದರಾಮಯ್ಯರವರೇ ಮುಖ್ಯಮಂತ್ರಿಯಾಗಿ ಮುಂದುವರೆಯುವಂತೆ ಶ್ರೀ ಬೇತಾಳೇಶ್ವರಿ ಅಮ್ಮನವರು ಆಶೀರ್ವದಿಸಲಿ ಎಂದು ತಿಳಿಸಿದರಲ್ಲದೇ ವಿಧಾನ ಪರಿಷತ್ ಸದಸ್ಯರಾಗಿರುವ ಡಾ॥ ಯತೀಂದ್ರ ಸಿದ್ದರಾಮಯ್ಯರವರು ಕ್ಯಾಬಿನೆಟ್ ಸಚಿವರಾಗಲು ಶ್ರೀ ಬೇತಾಳೇಶ್ವರಿ ಅಮ್ಮನವರಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಇದೇ ವೇಳೆ ಗ್ರಾಮದ ದೇವಾಲಯ ಸಮಿತಿ ಹಾಗೂ ಗ್ರಾಮಸ್ಥರಿಂದ ಸುಮಾರು 5 ಸಾವಿರ ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಿಹಿ ಭೋಜನ ಏರ್ಪಡಿಸಲಾಗಿತ್ತು.

ಕಾಂಗ್ರೆಸ್ ಮುಖಂಡರಾದ ನಾಡನಹಳ್ಳಿ ರವಿ, ಜಿ.ಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮೆಲ್ಲಹಳ್ಳಿ ನಾಗರಾಜು, ಸಿದ್ದಯ್ಯ, ಸ್ವಾಮಿ, ತಾ.ಪಂ ಮಾಜಿ ಸದಸ್ಯ ಮುದ್ದರಾಮೇಗೌಡ, ರವಿಕುಮಾರ್, ವರುಣಾ ಚಿಕ್ಕದೇವಯ್ಯ, ಚೋರನಹಳ್ಳಿ ರಾಜು, ಶಕಳ್ಳಿ ಬಸವರಾಜು, ಚಿಕ್ಕಳ್ಳಿ ಕೃಷ್ಣ, ಶಕಳ್ಳಿ ರಂಗಯ್ಯ, ಮಂಜು, ಮಹದೇವು, ವರಕೋಡು ಉಮೇಶ್, ಸಣ್ಣಮಾದು, ನವೀನ್ ಶಂಕರ್, ದೇವರಾಜು, ಗೋಪಾಲರಾಜು, ಸೋಮು, ವೆಂಕಟೇಶ್, ಅಂಕನಾಯ್ಕ, ಪಿಳ್ಳಳ್ಳಿ ಶಿವಕುಮಾರ್, ವರುಣಾ ಹಾಗೂ ಭುಗತಗಳ್ಳಿ ಸೇರಿದಂತೆ ಸುತ್ತ ಮುತ್ತಲ ಗ್ರಾಮಸ್ಥರು, ಮತ್ತು ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಹೆಣ್ಣು ಮಕ್ಕಳು ವಿದ್ಯಾವಂತರಾದರೆ ಅನಿಷ್ಠ ಪದ್ಧತಿ ದೂರ

ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಭಿಪ್ರಾಯ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಯ ಸಭಾಂಗಣದಲ್ಲಿ ಬುಧವಾರ ನಡೆದ ಭಾರತದ ಮೊದಲ ಶಿಕ್ಷಕಿ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಅವರ 195ನೇ ಜನ್ಮದಿನಾಚರಣೆಯನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಉದ್ಘಾಟಿಸಿದರು.

ಮೈಸೂರು, ಜ.7(ಜಿಎ)–ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಸಮಾಜದ ಅರ್ಥ ಅನಿಷ್ಠ ಪದ್ಧತಿಗಳು ದೂರವಾಗುತ್ತದೆ ಹಾಗೂ ಸಮಾಜದಲ್ಲಿ ಬೆಳವಣಿಗೆಯನ್ನು ಕಾಣಬಹುದು ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಸಭಾಂಗಣದಲ್ಲಿ ಬುಧವಾರ ನಡೆದ ಭಾರತದ ಮೊದಲ ಶಿಕ್ಷಕಿ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಅವರ 195ನೇ ಜನ್ಮದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಇಂದಿಗೂ ಕೂಡ ರಾಜ್ಯದ ಕೆಲವು ಕಡೆ ಬಾಲ್ಯ ವಿವಾಹ ನಡೆಯುತ್ತಿವೆ. ಇವುಗಳನ್ನೆಲ್ಲಾ ಹೋಗಲಾಡಿಸಬೇಕೆಂದರೆ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಸಮಾಜದ ಅರ್ಥ ಅನಿಷ್ಠ ಪದ್ಧತಿಗಳು ದೂರವಾಗುತ್ತದೆ. ಬೆಳವಣಿಗೆಯನ್ನೂ ಕಾಣಬಹುದು ಎಂದರು.

ಶಿಕ್ಷಣ ಮತ್ತು ಆರೋಗ್ಯ ಖಾಸಗೀಕರಣವಾಗುತ್ತಿರುವುದರಿಂದ ಗುಣಮಟ್ಟದ ಶಿಕ್ಷಣ ಬಡ ಮಕ್ಕಳಿಗೆ ಸಿಗುವುದು ಕಷ್ಟವಾಗುತ್ತಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಕೂಡ ನಾವು ಇನ್ನೂ ಅಭಿವೃದ್ಧಿ ಶೀಲ ರಾಷ್ಟ್ರ ಎಂದು ಗುರುತಿಸಿಕೊಳ್ಳುತ್ತಿದ್ದೇವೆ. ಕಾರಣ ನಮಗೆ ಉನ್ನತ ಶಿಕ್ಷಣ ಸಿಗುತ್ತಿಲ್ಲ ಎಂದು ಹೇಳಿದರು.

ಈಗಾಗಲೇ ದೇಶದ ಜನಸಂಖ್ಯೆ 130 ಕೋಟಿ ಮೀರಿದೆ. ಇದಕ್ಕೆ ಕಾರಣ ಹೆಣ್ಣು ಮಕ್ಕಳಿಗೆ ಬೇಗ ಮದುವೆ ಮಾಡುತ್ತಿರುವುದು. ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವುದರಿಂದ ಅವರಿಗೂ ತಿಳುವಳಿಕೆ ಮೂಡಿ 23 ಅಥವಾ 24 ರಲ್ಲಿ ಮದುವೆ ಮಾಡಿದರೆ ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸಬಹುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಲವಾರು ಅವಕಾಶಗಳನ್ನು ಕಲ್ಪಿಸಿಕೊಡುತ್ತಿದೆ. ಆದರೂ ಕೂಡ ಸಮಾಜದಲ್ಲಿ ಹಲವಾರು ಕಾರಣಗಳಿಂದ ಪಡೆದುಕೊಳ್ಳುವಲ್ಲಿ ವಂಚಿತರಾಗುತ್ತಿದ್ದಾರೆ. ಇತ್ತೀಚೆಗೆ ಚಾಮರಾಜನಗರದಲ್ಲಿ ವಿದ್ಯಾರ್ಥಿನಿಯೊಬ್ಬರು ವಿಜ್ಞಾನ ವಿಭಾಗದಲ್ಲಿ ಶೆ.85 ಅಂಕ ಪಡೆದಿದ್ದರೂ ಪೋಷಕರ ಒತ್ತಾಯದಿಂದ ಎರಡು ವರ್ಷ ಶಿಕ್ಷಣದಿಂದ ದೂರವಾಗಿದ್ದರು. ಮುಂದೆ ಆಕೆಗೆ ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಸೀಟ್ ಕೊಡಲಾಯಿತು ಎಂದರು.

ಶಿಕ್ಷಣದಿಂದ ಮಹಿಳಾ ಸಬಲೀಕರಣ ಸಾಧ್ಯ ಎಂದು ತಿಳಿದಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದ್ದರು. ಹಾಗೇ ಮಹಿಳೆಯರು ವಿದ್ಯಾವಂತರಾಗಿ ಉನ್ನತ ಮಟ್ಟದ ಜೀವನ ನಡೆಸಲು ಸಾವಿತ್ರಿಬಾಯಿ ಫುಲೆ ಅವರು ಅಂದೇ ಸ್ತ್ರೀ ಶಿಕ್ಷಣಕ್ಕೆ ಬೆಂಬಲ ನೀಡಿ ಅವರೇ ಸ್ವತಃ ಶಿಕ್ಷಣ ನೀಡುತ್ತಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್.ಆನಂದ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ.ಪಿ.ಮಂಜುನಾಥ್ ಉಪಸ್ಥಿತರಿದ್ದರು.

ಬಳ್ಳಾರಿ ಬಡಿದಾಟ ಪ್ರಕರಣ

ಪೊಲೀಸ್ ಅಧಿಕಾರಿಗಳ ಸಭೆ ನಡೆಸಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಯಾರು?

● ಕೇಂದ್ರ ಸಚಿವ ಕುಮಾರಸ್ವಾಮಿ ವಾಗ್ದಾಳಿ ● ರಾಜ್ಯದಲ್ಲಿರುವುದು ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರಾ!

ಬೆಂಗಳೂರು, ಜ.7(ಕೆಎಂಶಿ)– ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸುವುದಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಯಾರು? ಅವರಿಗೆ ಅಧಿಕಾರ ಕೊಟ್ಟವರು ಯಾರು? ಕರ್ನಾಟಕದಲ್ಲಿ ಇರುವುದು ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರಾ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ನವದೆಹಲಿ ಗೃಹ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಘಟನೆಗಳ ಬಗ್ಗೆ ನನಗೆ ಮಾಹಿತಿ ಕೊಡುವವರು ಇದ್ದಾರೆ. ಅದರ ಸತ್ಯಾಸತ್ಯತೆ ಪರಿಶೀಲಿಸಿ ಮಾಧ್ಯಮಗಳಿಗೆ ವಿವರಿಸಿದ್ದೇನೆ. ಜನತೆಗೆ ಸತ್ಯ ತಿಳಿಯಬೇಕಲ್ಲ ಎಂದರು.

ಶಿವಕುಮಾರ್ ಬಳ್ಳಾರಿಯಲ್ಲಿ ಪೊಲೀಸ್ ಅಧಿ ಕಾರಿಗಳ ಸಭೆ ನಡೆಸುವ ಮೂಲಕ ಗೃಹ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಕಾಂಗ್ರೆಸ್ ಸತ್ಯ ಶೋಧನಾ ಸಮಿತಿಗೆ ಅಧಿಕಾರಿಗಳು ಯಾವ ಮಾಹಿತಿ ಕೊಡುತ್ತಾರೆ. ಕಾರ್ಯಕರ್ತರು, ಕಾಂಗ್ರೆಸ್ ನಾಯಕರು ಘಟನೆಗೆ ಕಾರಣರಾದ ಶಾಸಕರ ವಿರುದ್ಧವೇ ಸತ್ಯಶೋಧನೆ ಸಮಿತಿಯ ಮುಂದೆ ದೂರು ನೀಡಿದ್ದಾರೆ, ನಿಮ್ಮ ತನಿಖೆಯ ಹಣೇಬರಹ ಏನು ಎಂದು ಪ್ರಶ್ನಿಸಿದರು.

ಬಳ್ಳಾರಿ ಪ್ರಕರಣ ಮುಚ್ಚಿ ಹಾಕಲು ಸರ್ಕಾರ ತರಾತುರಿಯಲ್ಲಿ ಕೆಲಸ ಮಾಡುತ್ತಿದೆ. ಬ್ಯಾನರ್ ಕಟ್ಟುವ ವಿಚಾರಕ್ಕೆ ಬೀದಿಯಲ್ಲಿ ಗುಂಡು ಹಾರಿಸುತ್ತಾರಾ, ಮರಣೋತ್ತರ ಪರೀಕ್ಷೆ ನಂತರ ಕೊಲೆಯಾದ ಕಾರ್ಯಕರ್ತನ ಮೃತದೇಹವನ್ನು ತರಾತುರಿಯಲ್ಲಿ ಸುಟ್ಟು ಹಾಕಿದ್ದು ಏಕೆ? ಕುಟುಂಬದವರಿಗೆ ಅಂತಿಮ ವಿಧಿವಿಧಾನ ನಡೆಸುವುದಕ್ಕೂ ಅವಕಾಶ ನೀಡದೆ ತರಾತುರಿಯಲ್ಲಿ ಮೃತ ದೇಹ ಸುಟ್ಟರು! ಇದ ಕ್ಕೆ ಲ್ಲಾ ಸರ್ಕಾರ ಉತ್ತರ ಕೊಡಬೇಕು.


ಕುಮಾರಸ್ವಾಮಿ

ಬಳ್ಳಾರಿಯಲ್ಲಿ ಅಹಿತಕರ ಘಟನೆ, ಸಾವು ಪ್ರಕರಣ ಎಲ್ಲರಿಗೂ ನೋವು ತರುತ್ತದೆ. ಕಳೆದ ಒಂದು ವಾರದಿಂದ ಹಲವು ನಾಯಕರು ಬಳ್ಳಾರಿಗೆ ಭೇಟಿ ನೀಡುತ್ತಿದ್ದಾರೆ. ಕಾಂಗ್ರೆಸ್ ನಾಯಕರು ಸತ್ಯಶೋಧನೆ ಮಾಡುತ್ತೇವೆ ಎಂದು ಹೋಗಿದ್ದರು. ಅಲ್ಲಿ ಅವರೇನು ಸತ್ಯ ಶೋಧನೆ ಮಾಡಿದರು ಎಂಬುದನ್ನು ಜನರ ಮುಂದೆ ಹೇಳಲಿ.

ಏಕೆಂದರೆ ಕಾಂಗ್ರೆಸ್ಸಿಗರು ಸತ್ಯ ಬಿಟ್ಟು ಬೇರೇನೂ ಹೇಳುವುದಿಲ್ಲ. ಹಾಗಿದ್ದ ಮೇಲೆ ಈ ಸಮಿತಿ ಸತ್ಯವನ್ನೇ ಹೇಳಲಿ ಎಂದು ವ್ಯಂಗ್ಯವಾಡಿದರು.

ನಮ್ಮದು ಹಳೇ ಕಥೆ: ನನ್ನ ಮತ್ತು ಜನಾರ್ದನ ರೆಡ್ಡಿ ನಡುವಿನ ಗಲಾಟೆ ಹಳೇ ಕಥೆ. ಅದನ್ನು ಈಗ ಮುಂದೆ ತಂದು ಏನು ಮಾಡಲು ಸಾಧ್ಯ. ನಾನು ಯಾವುದೇ ರಾಗ-ದ್ವೇಷ ಇಲ್ಲದೇ ಮಾಧ್ಯಮಗಳ ಮುಂದೆ ಸತ್ಯ ಹೇಳಿದ್ದೇನೆ.

ಕಾಂಗ್ರೆಸ್ ಜತೆ ಕೂಡ ಸರ್ಕಾರ ಮಾಡಿದ್ದೇನೆ. ಆಗ ಬಂಡೆ ತರ ನಿಂತಿದ್ದು ಇವರೇ ತಾನೇ. ಎಲ್ಲರೂ ಜೋಡೆತ್ತು ಎಂದರು. ಆಮೇಲೆ ಆಗಿದ್ದು ಏನು, ಬೆನ್ನಿಗೆ ಚೂರಿ ಹಾಕಿ ವಿಶ್ವಾಸ ದ್ರೋಹ ಎಸಗಿದರು.

ತಮ್ಮ ಹೇಳಿಕೆ ಬಗ್ಗೆ ಲಘುವಾಗಿ ಮಾತನಾಡಿದ ಸಚಿವ ಪ್ರಿಯಾಂಕ ಖರ್ಗೆ ಮೊದಲು ಗುರುಮಿಠಕಲ್ ಕ್ಷೇತ್ರಕ್ಕೆ ನಿಮ್ಮ ಹಾಗೂ ನಿಮ್ಮ ತಂದೆ ಕೊಡುಗೆ ಏನು ಅಂತ ಹೇಳಲಿ, ಕಲ್ಯಾಣ ಕರ್ನಾಟಕ ಬಿಡಿ, ನಿಮ್ಮ ಕ್ಷೇತ್ರ ನೋಡಿದರೆ ನೀವು ಮಾಡಿದ ಅಭಿವೃದ್ಧಿ ಏನು, ಎಂತದ್ದು ಎಂಬುದು ಗೊತ್ತಾಗುತ್ತದೆ.

ಇಬ್ಬರು ವೈದ್ಯರಿಂದ ಪೋಸ್ಟ್ ಮಾರ್ಟಂ: ಪೋಸ್ಟ್ ಮಾರ್ಟಂಗೆ ಇಬ್ಬರು ವೈದ್ಯರನ್ನು ಕರೆಸಿದ್ದು ಏಕೆ, ಒಬ್ಬ ವೈದ್ಯರು ಪೋಸ್ಟ್ ಮಾರ್ಟಂ ಮಾಡುತ್ತಿದ್ದರೆ, ಎರಡನೇ ವೈದ್ಯರನ್ನು ಪೂಜೆ ಮಾಡಲು ಕರೆಸಿದಿರಾ ಎಂದು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಇದು ಡಿಜಿಟಲ್ ಯುಗ, ಕುಳಿತಲ್ಲೇ ಮಾಹಿತಿ ಪಡೆಯಬಹುದು. ಪ್ರಕರಣದ ಸರಿಯಾದ ತನಿಖೆ ನಡೆದರೆ ಯಾರ ಯಾರ ತಲೆ ಉರುಳುತ್ತೋ ಗೊತ್ತಿಲ್ಲ ಎಂಬುದಾಗಿ ಪೊಲೀಸ್ ಅಧಿಕಾರಿಗಳೇ ಮಾತಾಡುತ್ತಿದ್ದಾರೆ, ನಾನು ಗೊತ್ತಿದ್ದೇ ಮಾತನಾಡಿದ್ದೇನೆ, ನಾನು ನಾಲಿಗೆ ತೀಟೆ ತೀರಿಸಿಕೊಳ್ಳಲು ಮಾತಾಡಲ್ಲ.

ಕರ್ನಾಟಕವನ್ನು ಜಂಗಲ್ ರಾಜ್ಯ ಮಾಡಲಾಗುತ್ತಿದೆ, ಇದು ಅತ್ಯಂತ ಗಂಭೀರ ಪ್ರಕರಣ. ಮುಖ್ಯಮಂತ್ರಿ ಈ ಬಗ್ಗೆ ಬಾಯಿ ಬಿಡುತ್ತಿಲ್ಲ ಏಕೆ. ನಿಮ್ಮ ಶಾಸಕರೇ ಕೊಲೆ ಮಾಡಿಸಿದರೂ ಯಾರು ಕೇಳುವಂತಿಲ್ಲ ಎನ್ನುವಂತೆ ಆಗಿದೆ. ನನ್ನ ಬಗ್ಗೆ ಲಘುವಾಗಿ ಮಾತಾಡುವುದು ಬೇಡ ಅಂಥ ನಿಮ್ಮ ಗೃಹ ಸಚಿವರಿಗೆ, ಇನ್ನೊಬ್ಬರಿಗೆ ಹೇಳಿ ಎಂದರು.

ಸಿಬಿಐ ತನಿಖೆಗೆ ಕೊಡಿ: ಗೃಹ ಸಚಿವ ಡಾ.ಜಿ.ಪರಮೇಶ್ವರ್ ನಕಲಿ ಶಾಮನ ಮಾತು ನಿಲ್ಲಿಸಿ. ಮೊದಲು ಬಳ್ಳಾರಿ ಪ್ರಕರಣ ಸಿಬಿಐ ತನಿಖೆಗೆ ಕೊಡಿ. ಯಾರ ಯಾರ ತಲೆ ಉರುಳುತ್ತದೆ ಎನ್ನುವುದು ನಿಮಗೆ ಗೊತ್ತಾಗುತ್ತದೆ.

ಬಳ್ಳಾರಿ ಬಿಮ್ಸ್ ನಿರ್ದೇಶಕರೇ ಹೇಳುವಂತೆ ಡಾ.ಯೋಗೀಶ್ ಎಂಬುವರು ಮೊದಲು ಮರಣೋತ್ತರ ಪರೀಕ್ಷೆ ಶುರು ಮಾಡಿದರು. ಅವರ ಪರೀಕ್ಷೆ ತಡವಾಯಿತು ಎಂದು ಇನ್ನೊಬ್ಬ ವೈದ್ಯ ಡಾ.ಚೇತನ್ ಎಂಬುವರನ್ನು ಕರೆಸಿದ್ದಾರೆ.

ಆ ವೈದ್ಯರನ್ನು ಕರೆಸಿದ್ದು ಏಕೆ? ಯಾರ ಆದೇಶದಂತೆ ಅವರನ್ನು ಕರೆಸಲಾಯಿತು, ಇತಿಹಾಸದಲ್ಲಿ ಮೊದಲ ಬಾರಿಗೆ ಮರಣೋತ್ತರ ಪರೀಕ್ಷೆಗೆ ಇಬ್ಬರು ವೈದ್ಯರನ್ನು ಕರೆಸಿ ಮಾಡಿಸಿದ್ದಾರೆ. ಇದು ಏಕಾಯಿತು. ಯಾರು ಒತ್ತಡ ಹೇರಿದರು. ಯಾರನ್ನು ರಕ್ಷಣೆ ಮಾಡಲಿಕ್ಕೆ ಇದೆಲ್ಲವನ್ನೂ ಮಾಡಿದಿರಿ ಎಂಬುದನ್ನು ಜನರಿಗೆ ಹೇಳಬೇಕು.

ನಾನು ಯಾವುದೇ ವಿಷಯವನ್ನು ದಾಖಲೆಗಳು ಇಲ್ಲದೇ ಮಾತಾಡಲ್ಲ. ನೀವೆಲ್ಲಾ ಯಾರನ್ನು ತಪ್ಪಿತಸ್ಥರನ್ನಾಗಿ ಮಾಡಲು ಹೊರಟಿದ್ದೀರಿ ಎಂಬುದು ಗೊತ್ತಿದೆ. ಜನಾರ್ದನ ರೆಡ್ಡಿ ಮನೆ ಮೇಲೆ ದಾಳಿ ನಡೆಸುತ್ತಿದ್ದ ಗುಂಪನ್ನು ಕೇವಲ ಐದು ನಿಮಿಷದಲ್ಲಿ ಚದುರಿಸಬಹುದಿತ್ತು ಏಕೆ ಚದುರಿಸಲಿಲ್ಲ ಪೊಲೀಸರ ಕೈ ಯಾರು ಕಟ್ಟಿ ಹಾಕಿದರು.

ಖಾಸಗಿ ಗನ್ ಮ್ಯಾನ್‌ಗಳು ಮನಸ್ಸೋ ಇಚ್ಛೆ ಫೈರಿಂಗ್ ಮಾಡುತ್ತಿದ್ದರೂ ಪೊಲೀಸರು ಸುಮ್ಮನೆ ಇದ್ದರು, ಏಕೆ ಎಂದು ಪ್ರಶ್ನಿಸಿದರು.

ಮಾದಕ ವಸ್ತುಗಳ ವಿರುದ್ಧ ಜಾಗೃತಿ ಅಭಿಯಾನ ಪ್ರಯುಕ್ತ

ತನ್ವೀರ್ ಸೇಠ್ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ


ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಮೈಸೂರು,ಜ.7(ಪಿಎಂ)– ಆರೋಗ್ಯವಂತ ಸಮಾಜ ದೇಶದ ಸಂಪತ್ತು ಮತ್ತು ಆರೋಗ್ಯವಂತ ಯುವ ಜನಾಂಗವೇ ದೇಶದ ಶಕ್ತಿ. ಆದರೆ ಯುವಜನರೇ ಹೆಚ್ಚಾಗಿ ಮಾದಕ ವಸ್ತುಗಳ ದಾಸರಾಗುತ್ತಿರುವುದು ಆತಂಕಕಾರಿ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ಮೈಸೂರಿನ ರಾಜೀವ್‌ನಗರದ ಈದ್ಗಾ ಮೈದಾನದಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ವತಿಯಿಂದ 'ಡ್ರಗ್ಸ್ ಎಂಡ್ಸ್ ಆಲ್ ಡ್ರೀಮ್ಸ್ (ಮಾದಕ ವಸ್ತುಗಳಿಂದ ನಮ್ಮ ಕನಸುಗಳ ನಾಶ)' ಶೀರ್ಷಿಕೆಯಡಿ 'ಮಾಸ್ ಆಂಟಿ ಡ್ರಗ್ಸ್ ಅವೇರ್ನೆಸ್ ಡ್ರೈವ್ (ಮಾದಕ ವಸ್ತುಗಳ ವಿರುದ್ಧ ಸಾಮೂಹಿಕ ಜಾಗೃತಿ ಅಭಿಯಾನ) ಅಂಗವಾಗಿ ಹಮ್ಮಿಕೊಂಡಿರುವ 10 ದಿನಗಳ 'ತನ್ವೀರ್ ಸೇಠ್ ಕಪ್' ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು.

ಮಾದಕ ವಸ್ತುಗಳ ಸೇವನೆಯು ಒಂದು ಕುಟುಂಬದ ಅವನತಿಗೆ ಕಾರಣವಾಗುತ್ತದೆ. ಸಾಮಾನ್ಯವಾಗಿ ಶ್ರಮಿಕ ವರ್ಗ, ಬಡ ಕುಟುಂಬಗಳ ಮಕ್ಕಳು ಈ ಚಟಕ್ಕೆ ಬಲಿಯಾಗುತ್ತಿವೆ. ಕೇಂದ್ರ ಸರ್ಕಾರ ತಂಬಾಕು ಉತ್ಪನ್ನಗಳ ತೆರಿಗೆಯನ್ನು ಸಾಕಷ್ಟು ಹೆಚ್ಚು ಮಾಡುತ್ತಿದ್ದರೂ ಅದರ ಬಳಕೆ ಹೆಚ್ಚಾಗುತ್ತಲೇ ಇದೆ ಎಂದರು.

ಸ್ವಾಸ್ಥ್ಯ ಸಮಾಜ ನಿರ್ಮಿಸಲು ಮಾದಕ ವಸ್ತುಗಳ ಸೇವನೆ, ಮಾರಾಟ ಮತ್ತು ತಯಾರಿಕೆಗೆ ಕಡಿವಾಣ ಹಾಕಲೇಬೇಕು. ಹೊಗೆಯುಕ್ತ ಮಾದಕ ವಸ್ತುಗಳ ಸೇವನೆಯ ಬಳಕೆಗಿಂತಲೂ ಹೊಗೆ ರಹಿತ ಮಾದಕ ವಸ್ತುಗಳ ಬಳಕೆ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಅಬ್ರಾರ್ ಮೊಹಮ್ಮದ್ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಮುಖಂಡರು ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಮೂಲಕ ಯುವ ಜನಾಂಗವನ್ನು ಸಂಘಟಿಸಿ ಈ ಜಾಗೃತಿ ಅಭಿಯಾನ ನಡೆಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಕ್ರೀಡೆ ಮೂಲಕ ಯುವ ಜನಾಂಗವನ್ನು ಸಂಘಟಿಸಿ ವ್ಯಸನಮುಕ್ತ ಸಮಾಜ ನಿರ್ಮಾಣದ ಸಂದೇಶ ಸಾರುತ್ತಿರುವ ಯುವ ಕಾಂಗ್ರೆಸ್ ಮುಖಂಡರ ಸಾಮಾಜಿಕ ಕಳಕಳಿ ಮೆಚ್ಚುವಂತಹದು ಎಂದರು.

ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಇಂದು ನಾವು ತಾಂತ್ರಿಕವಾಗಿ ಬದುಕುತ್ತಿದ್ದೇವೆ. ತಾತ್ವಿಕವಾಗಿ ಬದುಕುತ್ತಿಲ್ಲ. ಡ್ರಗ್ಸ್ ತೆಗೆದುಕೊಂಡ ನಶೆಯಲ್ಲಿ ಸಮಾಜಘಾತುಕ ಕೃತ್ಯದಲ್ಲಿ ತೊಡಗಿಕೊಳ್ಳುತ್ತಿರುವುದು ಆಘಾತಕಾರಿ. ಭಾರತ ವಿಶ್ವಗುರು, ವಿಕಸಿತ ಭಾರತ ಎನ್ನುತ್ತಾರೆ. ಮೊದಲು ವ್ಯಸನಮುಕ್ತ, ಮೌಢ್ಯಮುಕ್ತ, ದಾರಿದ್ರ್ಯ ಮುಕ್ತ, ಹಸಿವುಮುಕ್ತ ಭಾರತವನ್ನು ನಾವು ನಿರ್ಮಿಸಬೇಕಿದೆ. ಆಗ ಬೇಕಾದರೆ ನಮ್ಮ ದೇಶವನ್ನು ವಿಶ್ವಗುರು ಎನ್ನಬಹುದು ಎಂದರು.

ಇದೇ ವೇಳೆ ಮಾದಕ ವಸ್ತುಗಳ ಸೇವನೆ ವಿರುದ್ಧ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ 20ಕ್ಕೂ ಹೆಚ್ಚು ತಂಡಗಳು ಪಾಲ್ಗೊಂಡಿವೆ. ಕ್ರೈಸ್ತ ಧರ್ಮಗುರು ಥಾಮಸ್ ಆಂತೋಣಿ ವಾಳಿಪಿಳ್ಳೈ, ಮೌಲಾನ ಅಕ್ಬರ್ ಷರೀಫ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆಪಿಎಲ್ ಆಟಗಾರ ವಿಷ್ಣು, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಅಜೀಜ್‌ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್, ಉಪಾಧ್ಯಕ್ಷ ಷಹಿನ್‌ಷಾ ಅಹಮದ್, ಯುವ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಅಬ್ರಾರ್ ಮೊಹಮ್ಮದ್, ಕಾಂಗ್ರೆಸ್ ಮುಖಂಡರಾದ ಅಫ್ರೋಜ್ ಖಾನ್, ದೀಪಕ್ ಶಿವಣ್ಣ, ಸೈಫುದ್ದೀನ್ ಹಾಜರಿದ್ದರು.

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.
ದೂರವಾಣಿ: 08225-272128, ಫ್ಯಾಕ್ಸ್ ಸಂಖ್ಯೆ 08225-272123 Email: sec.mmtemple@gmail.com

ನಂ: ಶ್ರೀ ಮ.ಮ.ಕ್ಷೇತ್ರ.ಅ.ಪ್ರಾ/ಉಗ್ರಾಣ/5/ಪಿಆರ್/67/2024-25 ದಿನಾಂಕ: 30-12-2025

ಇ–ಟೆಂಡರ್ ಪ್ರಕಟಣೆ (2ನೇ ಕರೆ)
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರಸಂ	ಟೆಂಡರ್ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
3.	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಭಕ್ತಾದಿಗಳಿಗೆ ವಿಭೂತಿ ಪ್ರಸಾದ ತಯಾರಿಸಲು ಶ್ರೀ ಮಹದೇಶ್ವರಸ್ವಾಮಿ ಭಾವ ಚಿತ್ರ ವಿರುವ ವಿಭೂತಿ ಕವರ್‌ಗಳನ್ನು ಮುದ್ರಿಸಿ ಸರಬರಾಜು ಮಾಡಲು, ಹಾಗೂ ಆಡಳಿತ ಕಛೇರಿಗೆ ಬೇಕಾದ ದಾಖಲಾತಿ ಪುಸ್ತಕ, ಲಾಗ್‌ಪುಸ್ತಕ, ರಿಜಿಸ್ಟರ್‌ಗಳನ್ನು ಖರೀದಿಸಲು ಇ-ಟೆಂಡರ್ ಕರೆಯುವ ಬಗ್ಗೆ.	8.00	20,000.00

ವಿವರಗಳನ್ನು, https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಜೆ 5.00 ಗಂಟೆಯ ಒಳಗಾಗಿ ಪ್ರಾಧಿಕಾರದ ವಿಷಯ ನಿರ್ವಾಹಕರ ಮೊಬೈಲ್ ಸಂಖ್ಯೆ: 8277244893 ನ್ನು ಸಂಪರ್ಕಿಸಬಹುದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ	ದಿನಾಂಕ: 02-01-2026	ರ ನಂತರ
2	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ	ದಿನಾಂಕ: 12-01-2026	ಸಂಜೆ 4.00 ಗಂಟೆಯವರೆಗೆ
3	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ: 13-01-2026	ಬೆಳಿಗ್ಗೆ 11.00 ಗಂಟೆಯ ನಂತರ

ಸಹಿ/– ಕಾರ್ಯದರ್ಶಿ
ಶ್ರೀಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಮಹದೇಶ್ವರ ಬೆಟ್ಟ

ಸಂ:ವಾಸಾಸಂಇ:ಚಾ.ನಗರ:618:2025-26